# ಲಾ ಇಲಾಹ ಇಲ್ಲಲ್ಲಾಹ್

## ಎಂಬುದರ ಅರ್ಥ, ಅದರ ಆವಶ್ಯಕತೆಗಳು ಮತ್ತು ವ್ಯಕ್ತಿ ಹಾಗೂ ಸಮಾಜದಲ್ಲಿ ಅದು ಬೀರುವ ಪರಿಣಾಮಗಳು

[ معنى لا إله إلا الله ومقتضاها وآثارها في الفرد والمجتمع ]

**[Kannada – ಕನ್ನಡ – كنادي ]**


**ಅಶ್ಶೈಖ್ ಸಾಲಿಹ್ ಇಬ್ನ್ ಫೌಝಾನ್ ಅಲ್‌ಫೌಝಾನ್ (ﷺ)**

**للشيخ صالح بن فوزان بن عبد الله الفوزان رحمه الله تعالى**

**ಅನುವಾದ: ಮುಹಮ್ಮದ್ ಹಂಝಾ ಪುತ್ತೂರು**

**ترجمة: محمد حمزة بتوري**



www.islamhouse.com

**1436 – 2014**

# ಒಳಪುಟಗಳಲ್ಲಿ...


| | | |
|---|---|---|
| | ಪ್ರಸ್ತಾವನೆ | 3 |
| 1. | ಬದುಕಿನಲ್ಲಿ 'ಲಾ ಇಲಾಹ ಇಲ್ಲಲ್ಲಾಹ್'ಗಿರುವ ಸ್ಥಾನಮಾನ | 9 |
| 2. | 'ಲಾ ಇಲಾಹ ಇಲ್ಲಲ್ಲಾಹ್'ನ ಶ್ರೇಷ್ಠತೆ | 14 |
| 3. | 'ಲಾ ಇಲಾಹ ಇಲ್ಲಲ್ಲಾಹ್' ಎಂಬುದರ ಇಅ್‌ರಾಬ್, ಸ್ಥಂಭಗಳು ಮತ್ತು ಶರತ್ತುಗಳು | 20 |
| 4. | 'ಲಾ ಇಲಾಹ ಇಲ್ಲಲ್ಲಾಹ್' ಎಂಬುದರ ಅರ್ಥ ಮತ್ತು ಅದರ ಆವಶ್ಯಕತೆಗಳು | 27 |
| 5. | ಒಬ್ಬ ವ್ಯಕ್ತಿಗೆ 'ಲಾ ಇಲಾಹ ಇಲ್ಲಲ್ಲಾಹ್' ಯಾವಾಗ ಪ್ರಯೋಜನಪಡುತ್ತದೆ ಮತ್ತು ಯಾವಾಗ ಪ್ರಯೋಜನಪಡುವುದಿಲ್ಲ | 46 |
| 6. | 'ಲಾ ಇಲಾಹ ಇಲ್ಲಲ್ಲಾಹ್' ದ ಪರಿಣಾಮಗಳು | 63 |

بِسْمِ اللهِ الرَّحْمَـنِ الرَّحِيم

# ಪ್ರಸ್ತಾವನೆ

ಸರ್ವ ಸ್ತುತಿಗಳು ಅಲ್ಲಾಹನಿಗೆ ಮಾತ್ರ ಮೀಸಲು. ನಾವು ಅವನನ್ನು ಸ್ತುತಿಸುತ್ತೇವೆ, ಅವನೊಂದಿಗೆ ಸಹಾಯ ಯಾಚನೆ ಮಾಡುತ್ತೇವೆ, ಅವನೊಂದಿಗೆ ಪಾಪಮುಕ್ತಿಯನ್ನು ಬೇಡುತ್ತೇವೆ ಮತ್ತು ಅವನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುತ್ತೇವೆ. ನಮ್ಮ ಶರೀರಗಳ ಕೆಡುಕುಗಳಿಂದ ಮತ್ತು ನಮ್ಮ ಕರ್ಮಗಳ ಕೆಡುಕುಗಳಿಂದ ನಾವು ಅಲ್ಲಾಹನೊಂದಿಗೆ ರಕ್ಷೆಯನ್ನು ಬೇಡುತ್ತೇವೆ. ಅಲ್ಲಾಹು ಯಾರಿಗೆ ಸನ್ಮಾರ್ಗದರ್ಶನ ಮಾಡುತ್ತಾನೋ ಅವನನ್ನು ಪಥಭ್ರಷ್ಟಗೊಳಿಸುವವರಾರೂ ಇಲ್ಲ. ಅಲ್ಲಾಹು ಯಾರನ್ನು ಪಥಭ್ರಷ್ಟಗೊಳಿಸು ತ್ತಾನೋ ಅವನಿಗೆ ಸನ್ಮಾರ್ಗದರ್ಶನ ಮಾಡುವವರಾರೂ ಇಲ್ಲ. ಅಲ್ಲಾಹನ ಹೊರತು ಸತ್ಯ ಆರಾಧ್ಯರಾಗಿ ಅನ್ಯರಿಲ್ಲ, ಅವನು ಏಕೈಕನೂ ಸಹಭಾಗಿ ಯಿಲ್ಲದವನೂ ಆಗಿದ್ದಾನೆಂದು ನಾನು ಸಾಕ್ಷಿ ನುಡಿಯುತ್ತೇನೆ. ಮುಹಮ್ಮದ್ (ﷺ)ರವರು ಅವನ ದಾಸರೂ ಸಂದೇಶವಾಹಕರೂ ಆಗಿದ್ದಾರೆಂದು ನಾನು ಸಾಕ್ಷಿ ನುಡಿಯುತ್ತೇನೆ. ಅವರ ಮೇಲೆ, ಅವರ ಕುಟುಂಬದ ಮೇಲೆ, ಅವರ ಸಹಾಬಾಗಳ ಮೇಲೆ ಮತ್ತು ಅಂತ್ಯದಿನದ ತನಕ ಅವರನ್ನು ಅನುಸರಿಸಿದ ಮತ್ತು ಅವರ ಸುನ್ನತ್ತನ್ನು ಬಿಗಿಯಾಗಿ ಹಿಡಿದ ಎಲ್ಲರ ಮೇಲೂ ಅಲ್ಲಾಹನ ಸಲಾತ್ ಇರಲಿ.

ಮುಂದುವರಿದು ಹೇಳುವುದೇನೆಂದರೆ:

ತನ್ನನ್ನು ಸ್ಮರಿಸಬೇಕೆಂದು ಅಲ್ಲಾಹು ನಮಗೆ ಆಜ್ಞಾಪಿಸಿದ್ದಾನೆ. ಸ್ಮರಿಸುವವರನ್ನು ಅವನು ಪ್ರಶಂಸಿಸಿದ್ದಾನೆ. ಅವರಿಗೆ ಅಪಾರ ಪ್ರತಿಫಲದ ವಾಗ್ದಾನವನ್ನು ಮಾಡಿದ್ದಾನೆ. ಎಲ್ಲ ವೇಳೆಗಳಲ್ಲೂ ಅವನನ್ನು ಸ್ಮರಿಸಬೇಕೆಂದು ಅವನು

ಆಜ್ಞಾಪಿಸಿದ್ದಾನೆ. ಇಬಾದತ್‌ಗಳನ್ನು ನಿರ್ವಹಿಸಿದ ಬಳಿಕ ಅವನನ್ನು ಸ್ಮರಿಸಬೇಕೆಂದು ಅವನು ಆಜ್ಞಾಪಿಸಿದ್ದಾನೆ. ಅತ್ಯುನ್ನತನಾದ ಅವನು ಹೇಳುತ್ತಾನೆ:

﴿فَإِذَا قَضَيْتُمُ الصَّلَاةَ فَاذْكُرُوا اللَّهَ قِيَامًا وَقُعُودًا وَعَلَى جُنُوبِكُمْ﴾

**"ತರುವಾಯ ನೀವು ನಮಾಝ್ ನಿರ್ವಹಿಸಿದರೆ, ನಿಂತುಕೊಂಡು, ಕುಳಿತುಕೊಂಡು ಮತ್ತು ನಿಮ್ಮ ಪಾರ್ಶ್ವಕ್ಕೆ ಒರಗಿಕೊಂಡು ಅಲ್ಲಾಹನನ್ನು ಸ್ಮರಿಸಿರಿ."** [1]

ಅವನು ಹೇಳುತ್ತಾನೆ:

﴿فَإِذَا قَضَيْتُمْ مَنَاسِكَكُمْ فَاذْكُرُوا اللَّهَ كَذِكْرِكُمْ آبَاءَكُمْ أَوْ أَشَدَّ ذِكْرًا﴾

**"ತರುವಾಯ ನೀವು ನಿಮ್ಮ ಹಜ್ ಕರ್ಮಗಳನ್ನು ನಿರ್ವಹಿಸಿದರೆ, ನಿಮ್ಮ ಪೂರ್ವಜರನ್ನು ಸ್ಮರಿಸುವಂತೆ, ಅಥವಾ ಅದಕ್ಕಿಂತಲೂ ತೀವ್ರವಾದ ಸ್ಮರಣೆಯೊಂದಿಗೆ ಅಲ್ಲಾಹನನ್ನು ಸ್ಮರಿಸಿರಿ."** [2]

ಹಜ್ ಕರ್ಮಗಳನ್ನು ನಿರ್ವಹಿಸುವುದರ ಮಧ್ಯೆ ವಿಶೇಷವಾಗಿ ಅಲ್ಲಾಹನನ್ನು ಸ್ಮರಿಸುವಂತೆ ಅವನು ಆಜ್ಞಾಪಿಸಿದ್ದಾನೆ.

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿فَإِذَا أَفَضْتُمْ مِنْ عَرَفَاتٍ فَاذْكُرُوا اللَّهَ عِنْدَ الْمَشْعَرِ الْحَرَامِ﴾

**"ತರುವಾಯ ನೀವು ಅರಫಾತ್‌ನಿಂದ ಹೊರಟರೆ, ಮಶ್‌ಅರುಲ್ ಹರಾಮ್‌ನ ಬಳಿ ಅಲ್ಲಾಹನನ್ನು ಸ್ಮರಿಸಿರಿ."** [3]

---

[1] ಸೂರಃ ಅನ್ನಿಸಾಅ್ 103

[2] ಸೂರಃ ಅಲ್‌ಬಕರಃ 200

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿وَيَذْكُرُوا اسْمَ اللَّهِ فِي أَيَّامٍ مَعْلُومَاتٍ عَلَى مَا رَزَقَهُمْ مِنْ بَهِيمَةِ الْأَنْعَامِ ﴾

**“ಮತ್ತು ನಿಶ್ಚಿತ ದಿನಗಳಲ್ಲಿ ಅಲ್ಲಾಹನ ನಾಮವನ್ನು ಸ್ಮರಿಸಿ ಅವನು ಅವರಿಗೆ ನೀಡಿರುವ ಜಾನುವಾರುಗಳನ್ನು ಬಲಿ ನೀಡುವುದಕ್ಕಾಗಿ.”** [4]

ಮತ್ತು ಅತ್ಯುನ್ನತನಾದ ಅವನು ಹೇಳುತ್ತಾನೆ:

﴿وَاذْكُرُوا اللَّهَ فِي أَيَّامٍ مَعْدُودَاتٍ﴾

**“ಎಣಿಸಲಾದ ದಿನಗಳಲ್ಲಿ ನೀವು ಅಲ್ಲಾಹನನ್ನು ಸ್ಮರಿಸಿರಿ.”** [5]

ತನ್ನನ್ನು ಸ್ಮರಿಸುವುದಕ್ಕಾಗಿ ನಮಾಝ್‌ನ ಸಂಸ್ಥಾಪನೆಯನ್ನು ಅವನು ಶರೀಅತ್ ಆಗಿ ಮಾಡಿದ್ದಾನೆ.

ಅವನು ಹೇಳುತ್ತಾನೆ:

﴿وَأَقِمِ الصَّلَاةَ لِذِكْرِي﴾

**“ನನ್ನ ಸ್ಮರಣೆಗಾಗಿ ತಾವು ನಮಾಝನ್ನು ಸಂಸ್ಥಾಪಿಸಿರಿ.”** [6]

ಪ್ರವಾದಿ(ﷺ)ರವರು ಹೇಳಿದರು:

---

[3] ಸೂರಃ ಅಲ್‌ಬಕರಃ 198

[4] ಸೂರಃ ಅಲ್‌ಹಜ್ಜ್ 28

[5] ಸೂರಃ ಅಲ್‌ಬಕರಃ 203

[6] ಸೂರಃ ತಾಹಾ 14

« أَيَّامُ التَّشْرِيقِ أَيَّامُ أَكْلٍ وَشُرْبٍ وَذِكْرٍ لِلَّهِ »

**“ಅಯ್ಯಾಮು ತ್ತಶ್ರೀಕ್ (ದುಲ್‌ಹಿಜ್ಜ 11, 12 ಮತ್ತು 13ನೇ ದಿನಗಳು) ತಿನ್ನುವ, ಕುಡಿಯುವ ಮತ್ತು ಅಲ್ಲಾಹನನ್ನು ಸ್ಮರಿಸುವ ದಿನಗಳಾಗಿವೆ.”** [7]

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿ يَا أَيُّهَا الَّذِينَ آمَنُوا اذْكُرُوا اللَّهَ ذِكْرًا كَثِيرًا * وَسَبِّحُوهُ بُكْرَةً وَأَصِيلًا ﴾

**“ಓ ವಿಶ್ವಾಸವಿಟ್ಟವರೇ, ನೀವು ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸಿರಿ ಮತ್ತು ಬೆಳಗು ಬೈಗುಗಳಲ್ಲಿ ಅವನ ಪರಿಪಾವನತೆಯನ್ನು ಕೊಂಡಾಡಿರಿ.”** [8]

‘ಲಾ ಇಲಾಹ ಇಲ್ಲಲ್ಲಾಹ್ ವಹ್ದಹೂ ಲಾ ಶರೀಕ ಲಹೂ’ ಎಂಬುದು ಅತಿಶ್ರೇಷ್ಠವಾದ ಸ್ಮರಣೆ (ದಿಕ್ರ್) ಆಗಿದೆ. ಪ್ರವಾದಿ(ﷺ)ರವರಿಂದ ವರದಿಯಾಗಿರುವಂತೆ ಅವರು ಹೇಳುತ್ತಾರೆ:

« خَيْرُ الدُّعَاءِ دُعَاءُ عَرَفَةَ، وَخَيْرُ مَا قُلْتُ أَنَا وَالنَّبِيُّونَ مِنْ قَبْلِي لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ »

**“ಅತ್ಯುತ್ತಮವಾದ ಪ್ರಾರ್ಥನೆಯು ಅರಫ ದಿನದ ಪ್ರಾರ್ಥನೆಯಾಗಿದೆ. ನಾನು ಮತ್ತು ನನಗಿಂತ ಮುಂಚಿನ ಪ್ರವಾದಿಗಳು ಹೇಳಿದ ಅತ್ಯುತ್ತಮ ಮಾತು ‘ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್’ ಎಂಬುದಾಗಿದೆ.”** [9]

---

[7] ಮುಸ್ಲಿಮ್

[8] ಸೂರಃ ಅಲ್‌ಅಹ್‌ಝಾಬ್ 41–42

[9] ಅತ್ತಿರ್ಮಿದೀ

‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ಈ ಮಹಾ ವಚನಕ್ಕೆ ಇತರ ಸ್ಮರಣೆಗಳ (ದಿಕ್ರ್‌ಗಳ) ಮಧ್ಯೆ ಇಂತಹ ಉನ್ನತ ಸ್ಥಾನವಿರುವುದರಿಂದ, ಅದರೊಂದಿಗೆ ಅನೇಕ ನಿಯಮಗಳು ಸೇರಿಕೊಂಡಿರುವುದರಿಂದ, ಅದಕ್ಕೆ ಶರತ್ತುಗಳಿರುವುದರಿಂದ ಮತ್ತು ಅದಕ್ಕೆ ಅರ್ಥ ಹಾಗೂ ಆವಶ್ಯಕತೆಗಳಿರುವುದರಿಂದ ಅದು ಕೇವಲ ನಾಲಗೆಯ ಮೂಲಕ ಉಚ್ಛರಿಸಬೇಕಾದ ಒಂದು ವಚನವಲ್ಲ. ಸಂಗತಿಯು ಹೀಗಿರುವುದರಿಂದ ನನ್ನ ಭಾಷಣದ ವಿಷಯವಾಗಿ ನಾನು ಇದನ್ನು ಆರಿಸಿದ್ದೇನೆ. ನಮ್ಮನ್ನು ಮತ್ತು ನಿಮ್ಮನ್ನು ಈ ವಚನದ ಜನರನ್ನಾಗಿ, ಅದನ್ನು ಬಿಗಿಯಾಗಿ ಹಿಡಿದುಕೊಳ್ಳುವವರನ್ನಾಗಿ, ಅದರ ಅರ್ಥವನ್ನು ಅರಿತುಕೊಂಡವರನ್ನಾಗಿ, ಬಹಿರಂಗವಾಗಿಯೂ ಆಂತರಿಕವಾಗಿಯೂ ಅದರ ಆವಶ್ಯಕತೆಗಳನ್ನು ನೆರವೇರಿಸಿ ಕರ್ಮವೆಸಗುವವರನ್ನಾಗಿ ಮಾಡಬೇಕೆಂದು ಅತ್ಯುನ್ನತನಾದ ಅಲ್ಲಾಹನಿಂದ ಆಶಿಸುತ್ತೇನೆ.

ಈ ವಚನದ ಬಗ್ಗೆಯಿರುವ ನನ್ನ ಮಾತುಗಳು ಈ ಕೆಳಗಿನ ವಿಷಯಗಳ ಪರಿಮಿತಿಯಲ್ಲಿದೆ:

1. ಬದುಕಿನಲ್ಲಿ ‘ಲಾ ಇಲಾಹ ಇಲ್ಲಲ್ಲಾಹ್’ಗಿರುವ ಸ್ಥಾನಮಾನ

2. ಅದರ ಶ್ರೇಷ್ಠತೆಗಳು

3. ಅದರ ಇಅ್‌ರಾಬ್

4. ಅದರ ಸ್ಥಂಭಗಳು, ಶರತ್ತುಗಳು ಮತ್ತು ಅರ್ಥ

5. ಅದರ ಆವಶ್ಯಕತೆಗಳು

6. ಅದರ ಉಚ್ಛಾರಣೆಯು ಮನುಷ್ಯನಿಗೆ ಯಾವಾಗ ಪ್ರಯೋಜನವನ್ನು ನೀಡುತ್ತದೆ

7. ಅದು ಯಾವಾಗ ಅವನಿಗೆ ಪ್ರಯೋಜನ ನೀಡುವುದಿಲ್ಲ

8. ಅದರ ಪರಿಣಾಮಗಳು

ಆದ್ದರಿಂದ ಅತ್ಯುನ್ನತನಾದ ಅಲ್ಲಾಹನೊಂದಿಗೆ ಸಹಾಯ ಯಾಚನೆ ಮಾಡುತ್ತಾ ನಾನು ಹೇಳುತ್ತೇನೆ:

## مَكَانَةُ لَا إِلَهَ إِلَّا اللَّهُ فِي الْحَيَاةِ

## ಬದುಕಿನಲ್ಲಿ 'ಲಾ ಇಲಾಹ ಇಲ್ಲಲ್ಲಾಹ್'ಗಿರುವ ಸ್ಥಾನಮಾನ

'ಲಾ ಇಲಾಹ ಇಲ್ಲಲ್ಲಾಹ್' ಎಂಬುದು ಮುಸ್ಲಿಮರು ತಮ್ಮ ಅಝಾನ್‌ಗಳಲ್ಲಿ, ಇಕಾಮತ್‌ಗಳಲ್ಲಿ, ಖುತುಬಃಗಳಲ್ಲಿ ಮತ್ತು ಸಂಭಾಷಣೆಗಳಲ್ಲಿ ಘೋಷಿಸು ವಂತಹ ಒಂದು ವಚನವಾಗಿದೆ. ಇದು ಎಂತಹ ವಚನವೆಂದರೆ ಈ ವಚನದಿಂದಾಗಿ ಆಕಾಶಗಳು ಮತ್ತು ಭೂಮಿಯು ನೆಲೆನಿಂತಿವೆ. ಈ ವಚನದ ಕಾರಣದಿಂದಾಗಿ ಸರ್ವ ಸೃಷ್ಟಿಗಳನ್ನು ಸೃಷ್ಟಿಸಲಾಗಿದೆ. ಈ ವಚನದ ಕಾರಣದಿಂದಾಗಿ ಅಲ್ಲಾಹು ಅವನ ಸಂದೇಶವಾಹಕರನ್ನು ಕಳುಹಿಸಿದ್ದಾನೆ, ಗ್ರಂಥಗಳನ್ನು ಅವತೀರ್ಣಗೊಳಿಸಿದ್ದಾನೆ ಮತ್ತು ಶರೀಅತ್‌ಗಳನ್ನು ನಿರ್ಮಿಸಿ ದ್ದಾನೆ. ಇದರ ಕಾರಣದಿಂದಲೇ ತಕ್ಕಡಿಗಳನ್ನು ಸ್ಥಾಪಿಸಲಾಗಿದೆ, ಕರ್ಮಪುಸ್ತಕ ಗಳನ್ನು ಇಡಲಾಗಿದೆ ಮತ್ತು ಸ್ವರ್ಗ ಹಾಗೂ ನರಕಗಳ ಮಾರುಕಟ್ಟೆಯನ್ನು ಸ್ಥಾಪಿಸಲಾಗಿದೆ. ಈ ವಚನದಿಂದಾಗಿ ಸೃಷ್ಟಿಗಳನ್ನು ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳೆಂದು ವಿಭಾಗಿಸಲಾಗಿದೆ.

ಆದ್ದರಿಂದ ಅದು ಸೃಷ್ಟಿ, ಆಜ್ಞೆ, ಪ್ರತಿಫಲ ಮತ್ತು ಶಿಕ್ಷೆಯ ಉದ್ಭವವಾಗಿದೆ. ಸೃಷ್ಟಿಗಳನ್ನು ಯಾವುದಕ್ಕಾಗಿ ಸೃಷ್ಟಿಸಲಾಯಿತೋ ಆ ಸತ್ಯವು ಈ ವಚನವಾಗಿದೆ. ಪ್ರಶ್ನೆ ಮತ್ತು ವಿಚಾರಣೆಗಳಿರುವುದು ಈ ವಚನದ ಬಗ್ಗೆ ಮತ್ತು ಅದರ ಹಕ್ಕುಗಳ ಬಗ್ಗೆಯಾಗಿದೆ. ಪ್ರತಿಫಲ ಮತ್ತು ಶಿಕ್ಷೆಯು ಲಭ್ಯವಾಗುವುದು ಈ ವಚನದ ಆಧಾರದಲ್ಲಾಗಿದೆ. ಈ ವಚನದ ಆಧಾರದಲ್ಲಿ ಕಿಬ್ಲಃವನ್ನು ಸ್ಥಾಪಿಸಲಾಗಿದೆ. ಈ ವಚನದ ಆಧಾರದಲ್ಲಿ ಧರ್ಮವನ್ನು ಸ್ಥಾಪಿಸಲಾಗಿದೆ. ಈ ವಚನದ ಕಾರಣದಿಂದಲೇ ಜಿಹಾದಿನ ಖಡ್ಗಗಳನ್ನು ಒರೆಯಿಂದ ಹೊರತೆಗೆಯಲಾಗಿದೆ. ಈ ವಚನವು ಸರ್ವ ಸೃಷ್ಟಿಗಳ ಮೇಲಿರುವ ಅಲ್ಲಾಹನ ಹಕ್ಕಾಗಿದೆ. ಇದು ಇಸ್ಲಾಮಿನ ವಚನವಾಗಿದೆ ಮತ್ತು ಶಾಂತಿಭವನದ (ಸ್ವರ್ಗ ಲೋಕದ) ಕೀಲಿಕೈಯಾಗಿದೆ. ಈ ವಚನದ ಬಗ್ಗೆ ಪೂರ್ವಿಕರನ್ನು ಮತ್ತು

ನಂತರದವರನ್ನು ವಿಚಾರಣೆ ಮಾಡಲಾಗುತ್ತದೆ. ಆದ್ದರಿಂದ ಎರಡು ಪ್ರಶ್ನೆಗಳಿಗೆ ಉತ್ತರ ಕೊಡುವ ತನಕ ದಾಸನ ಎರಡು ಪಾದಗಳು ಅಲ್ಲಾಹನ ಮುಂದಿನಿಂದ ಕದಲಲಾರವು.

ಒಂದು: 'ನೀವೇನನ್ನು ಆರಾಧಿಸುತ್ತಿದ್ದಿರಿ?'

ಎರಡು: 'ನೀವು ರಸೂಲರಿಗೆ ಏನು ಉತ್ತರಕೊಟ್ಟಿರಿ?'

ಮೊದಲನೆಯ ಪ್ರಶ್ನೆಗಿರುವ ಉತ್ತರವು 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನವನ್ನು ಅರಿವು, ಅಂಗೀಕಾರ ಮತ್ತು ಕರ್ಮಗಳ ಮೂಲಕ ನೈಜೀಕರಿಸುವುದಾಗಿದೆ.

ಎರಡನೆ ಪ್ರಶ್ನೆಗಿರುವ ಉತ್ತರವು: 'ಅನ್ನ ಮುಹಮ್ಮದನ್ ರಸೂಲುಲ್ಲಾಹ್' ಎಂಬ ವಚನವನ್ನು ಅರಿವು, ಶರಣಾಗತಿ ಮತ್ತು ಆಜ್ಞಾಪಾಲನೆಯ ಮೂಲಕ ನೈಜೀಕರಿಸುವುದಾಗಿದೆ.

ಈ ವಚನವು ಕುಫ್ರ್ ಮತ್ತು ಇಸ್ಲಾಮನ್ನು ಬೇರ್ಪಡಿಸುವ ವಚನವಾಗಿದೆ. ಇದು ತಕ್ವಾದ ವಚನವಾಗಿದೆ. ಬಲಿಷ್ಠವಾದ ಹಿಡಿಯಾಗಿದೆ. ಇಬ್ರಾಹೀಮ್(ﷺ)ರವರು

﴿وَجَعَلَهَا كَلِمَةً بَاقِيَةً فِي عَقِبِهِ لَعَلَّهُمْ يَرْجِعُونَ﴾

**"(ಈ ವಚನವನ್ನು) ಅವರ ನಂತರದವರು (ಸತ್ಯದೆಡೆಗೆ) ಮರಳುವುದಕ್ಕಾಗಿ ಅವರ ಮಧ್ಯೆ ನೆಲೆನಿಲ್ಲುವ ಒಂದು ವಚನವನ್ನಾಗಿ ಮಾಡಿದರು."** [10]

ಅಲ್ಲಾಹು ಸ್ವತಃ ತನಗಾಗಿ ಯಾವುದರಿಂದ ಸಾಕ್ಷ್ಯವಹಿಸಿದನೋ ಆ ವಚನವು ಇದೇ ಆಗಿದೆ. ಯಾವುದರಿಂದ ಅವನ ಮಲಕ್‌ಗಳು ಮತ್ತು ಅವನ ಸೃಷ್ಟಿಗಳಲ್ಲಿ

[10] ಸೂರಃ ಅಝ್ಝುಖ್ರುಫ್ 28

ಸೇರಿದ ಇಲ್ಮ್ ಇರುವ ಜನರು ಸಾಕ್ಷ್ಯವಹಿಸಿದರೋ ಆ ವಚನವೂ ಇದೇ ಆಗಿದೆ.

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿شَهِدَ اللَّهُ أَنَّهُ لَا إِلَهَ إِلَّا هُوَ وَالْمَلَائِكَةُ وَأُولُو الْعِلْمِ﴾

**“ತನ್ನ ಹೊರತು ಸತ್ಯ ಆರಾಧ್ಯರಾಗಿ ಅನ್ಯರಿಲ್ಲವೆಂದು ಅಲ್ಲಾಹು ಸಾಕ್ಷ್ಯ ವಹಿಸಿರುವನು. ಮಲಕ್‌ಗಳೂ ಇಲ್ಮ್ ಇರುವ ಜನರೂ (ಅದಕ್ಕೆ ಸಾಕ್ಷಿಗಳಾಗಿರುವರು).”** [11]

ಇದು ಇಖ್ಲಾಸ್ (ನಿಷ್ಕಳಂಕತೆ) ಮತ್ತು ಸತ್ಯಸಾಕ್ಷ್ಯದ ವಚನವಾಗಿದೆ. ಸತ್ಯ ಪ್ರಾರ್ಥನೆಯ ವಚನವಾಗಿದೆ. ಶಿರ್ಕ್‌ನಿಂದ ಮುಕ್ತಿ ನೀಡುವ ವಚನವಾಗಿದೆ. ಈ ವಚನಕ್ಕಾಗಿಯೇ ಸೃಷ್ಟಿಗಳನ್ನು ಸೃಷ್ಟಿಸಲಾಗಿದೆ.

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿وَمَا خَلَقْتُ الْجِنَّ وَالْإِنْسَ إِلَّا لِيَعْبُدُونِ﴾

**“ನನ್ನನ್ನು ಆರಾಧಿಸುವುದಕ್ಕಾಗಿಯೇ ವಿನಾ ನಾನು ಜಿನ್ನ್‌ಗಳನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿಲ್ಲ.”** [12]

ರಸೂಲರನ್ನು ಕಳುಹಿಸಲಾಗಿರುವುದು ಮತ್ತು ಗ್ರಂಥಗಳನ್ನು ಅವತೀರ್ಣಗೊಳಿಸಲಾಗಿರುವುದು ಈ ವಚನದ ಕಾರಣದಿಂದಾಗಿದೆ.

ಅಲ್ಲಾಹು ಹೇಳುತ್ತಾನೆ:

---

[11] ಸೂರಃ ಆಲು ಇಮ್ರಾನ್ 18

[12] ಸೂರಃ ಅದ್ದಾರಿಯಾತ್ 56

﴿وَمَا أَرْسَلْنَا مِنْ قَبْلِكَ مِنْ رَسُولٍ إِلَّا نُوحِي إِلَيْهِ أَنَّهُ لَا إِلَهَ إِلَّا أَنَا فَاعْبُدُونِ﴾

**“ನನ್ನ ಹೊರತು ಸತ್ಯ ಆರಾಧ್ಯರಾಗಿ ಅನ್ಯರಿಲ್ಲ. ಆದ್ದರಿಂದ ನನ್ನನ್ನು ಮಾತ್ರ ಆರಾಧಿಸಿರಿ ಎಂಬ ವಹ್ಯನ್ನು ನೀಡಿಯೇ ಹೊರತು ತಮಗಿಂತ ಮುಂಚೆ ಯಾವುದೇ ರಸೂಲರನ್ನೂ ನಾವು ಕಳುಹಿಸಿಲ್ಲ.”** [13]

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿يُنَزِّلُ الْمَلَائِكَةَ بِالرُّوحِ مِنْ أَمْرِهِ عَلَى مَنْ يَشَاءُ مِنْ عِبَادِهِ أَنْ أَنْذِرُوا أَنَّهُ لَا إِلَهَ إِلَّا أَنَا فَاتَّقُونِ﴾

**“ತನ್ನ ದಾಸರ ಪೈಕಿ ತಾನಿಚ್ಛಿಸುವವರ ಮೇಲೆ ತನ್ನ ಆಜ್ಞೆ ಪ್ರಕಾರ ಅವನು (ಸತ್ಯಸಂದೇಶವಾಗಿರುವ) ಚೈತನ್ಯದೊಂದಿಗೆ ಮಲಕ್‌ಗಳನ್ನು ಇಳಿಸುವನು. ‘ನನ್ನ ಹೊರತು ಸತ್ಯ ಆರಾಧ್ಯರಾಗಿ ಅನ್ಯರಿಲ್ಲ. ಆದ್ದರಿಂದ ನನ್ನನ್ನು ಮಾತ್ರ ಭಯಪಡಿರಿ’ ಎಂದು ಜನರಿಗೆ ಮುನ್ನೆಚ್ಚರಿಕೆ ನೀಡಿರಿ (ಎಂಬ ಸಂದೇಶದೊಂದಿಗೆ).”** [14]

ಇಬ್ನ್ ಉಯಯ್ನಃ ಹೇಳುತ್ತಾರೆ:

مَا أَنْعَمَ اللَّهُ عَلَى عَبْدٍ مِنَ الْعِبَادِ نِعْمَةً أَعْظَمَ مِنْ أَنْ عَرَّفَهُمْ لَا إِلَهَ إِلَّا اللَّهُ، وَإِنَّ لَا إِلَهَ إِلَّا اللَّهُ لِأَهْلِ الْجَنَّةِ كَالْمَاءِ الْبَارِدِ لِأَهْلِ الدُّنْيَا.

**“ಲಾ ಇಲಾಹ ಇಲ್ಲಲ್ಲಾಹ್ ಎಂಬ ವಚನವನ್ನು ಕಲಿಸಿಕೊಟ್ಟನು ಎಂಬುದಕ್ಕಿಂತಲೂ ದೊಡ್ಡದಾದ ಅನುಗ್ರಹವೊಂದನ್ನು ಅಲ್ಲಾಹು ಅವನ ದಾಸರಲ್ಲಿ ಸೇರಿದ ಯಾವುದೇ ದಾಸನಿಗೂ ದಯಪಾಲಿಸಿಲ್ಲ. ಯಾಕೆಂದರೆ ಇಹಲೋಕ ನಿವಾಸಿಗಳಿಗೆ ತಂಪು**

---

[13] ಸೂರಃ ಅಲ್‌ಅಂಬಿಯಾ 25

[14] ಸೂರಃ ಅನ್ನಹ್ಲ್ 2

**ನೀರಿನ ಆವಶ್ಯಕತೆಯಿರುವಂತೆ ಸ್ವರ್ಗದ ಜನರಿಗೆ ಲಾ ಇಲಾಹ ಇಲ್ಲಲ್ಲಾಹ್ ಎಂಬ ವಚನದ ಆವಶ್ಯಕತೆಯಿದೆ."**

ಯಾರು ಈ ವಚನವನ್ನು ಉಚ್ಚರಿಸಿದನೋ ಅವನು ತನ್ನ ಸಂಪತ್ತು ಮತ್ತು ರಕ್ತವನ್ನು ಸಂರಕ್ಷಿಸಿದನು. ಯಾರು ಇದನ್ನು ಉಚ್ಚರಿಸಲು ನಿರಾಕರಿಸಿದನೋ ಅವನ ಸಂಪತ್ತು ಮತ್ತು ರಕ್ತವು ವ್ಯರ್ಥವಾಗಿದೆ. ಸಹೀಹ್ ಗ್ರಂಥದಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

« مَنْ قَالَ لَا إِلَهَ إِلَّا اللَّهُ وَكَفَرَ بِمَا يُعْبَدُ مِنْ دُونِ اللَّهِ حَرُمَ مَالُهُ وَدَمُهُ وَحِسَابُهُ عَلَى اللَّهِ ».

**"ಯಾರು ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿ ಅಲ್ಲಾಹನ ಹೊರತು ಆರಾಧಿಸಲಾಗುವ ಎಲ್ಲದರಲ್ಲೂ ಅವಿಶ್ವಾಸವಿಡುತ್ತಾನೋ ಅವನ ಸಂಪತ್ತು ಮತ್ತು ರಕ್ತವು ಪವಿತ್ರವಾಗಿದೆ. ಅವನ ವಿಚಾರಣೆ ಮಾಡಬೇಕಾದ ಹೊಣೆಯು ಅಲ್ಲಾಹನದ್ದಾಗಿದೆ."** [15]

ಅವಿಶ್ವಾಸಿಗಳನ್ನು ಇಸ್ಲಾಮಿನೆಡೆಗೆ ಆಹ್ವಾನಿಸಲಾಗುವಾಗ ಅವರೊಂದಿಗೆ ಮೊಟ್ಟ ಮೊದಲು ಬೇಡಿಕೆಯಿಡಲಾಗುವುದು ಈ ವಚನವನ್ನಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಮುಆದ್(ﷺ)ರನ್ನು ಯಮನ್‌ಗೆ ಕಳುಹಿಸಿದಾಗ ಅವರೊಂದಿಗೆ ಹೇಳಿದರು:

« إِنَّكَ تَأْتِي قَوْمًا مِنْ أَهْلِ الْكِتَابِ فَلْيَكُنْ أَوَّلَ مَا تَدْعُوهُمْ إِلَيْهِ شَهَادَةُ أَنْ لَا إِلَهَ إِلَّا اللَّهُ ».

[15] ಮುಸ್ಲಿಮ್ 23; ಅಹ್ಮದ್ 6/394

**“ತಾವು ಅಹ್ಲುಲ್ ಕಿತಾಬ್‌ಗಳ (ಯಹೂದ ಕ್ರೈಸ್ತರ) ಜನತೆಯೆಡೆಗೆ ತೆರಳುತ್ತಿರುವಿರಿ. ಆದ್ದರಿಂದ ತಾವು ಅವರನ್ನು ಮೊಟ್ಟಮೊದಲು ಆಹ್ವಾನಿಸುವುದು ‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ಸಾಕ್ಷ್ಯದೆಡೆಗಾಗಿರಲಿ.”** ಇದು ಎರಡು ಸಹೀಹ್ ಗ್ರಂಥಗಳಲ್ಲಿರುವ ಹದೀಸಾಗಿದೆ. [16]

ಧರ್ಮದಲ್ಲಿ ಈ ವಚನಕ್ಕಿರುವ ಸ್ಥಾನಮಾನ ಮತ್ತು ಬದುಕಿನಲ್ಲಿ ಈ ವಚನಕ್ಕಿರುವ ಪ್ರಾಮುಖ್ಯತೆಯನ್ನು ಇದರಿಂದ ಅರ್ಥ ಮಾಡಿಕೊಳ್ಳಬಹುದಾಗಿದೆ. ಇದು ಮನುಷ್ಯರ ಮೇಲಿರುವ ಮೊಟ್ಟಮೊದಲ ಕಡ್ಡಾಯವಾಗಿದೆ. ಯಾಕೆಂದರೆ ಯಾವುದರ ಮೇಲೆ ಕರ್ಮಗಳನ್ನು ನಿರ್ಮಿಸಲಾಗುತ್ತದೋ ಆ ಬುನಾದಿಯು ಈ ವಚನವಾಗಿದೆ.

## فَضْلُ لَا إِلَهَ إِلَّا اللَّهُ

## ‘ಲಾ ಇಲಾಹ ಇಲ್ಲಲ್ಲಾಹ್’ನ ಶ್ರೇಷ್ಠತೆ

ಲಾ ಇಲಾಹ ಇಲ್ಲಲ್ಲಾಹ್‌ಗೆ ಮಹತ್ವಪೂರ್ಣವಾದ ಶ್ರೇಷ್ಠತೆಗಳಿವೆ. ಅದಕ್ಕೆ ಅಲ್ಲಾಹನ ಬಳಿ ಸ್ಥಾನಮಾನವಿದೆ. ಯಾರು ಅದನ್ನು ಸತ್ಯಸಂಧವಾಗಿ ಉಚ್ಛರಿಸುತ್ತಾನೋ ಅವನನ್ನು ಅಲ್ಲಾಹು ಸ್ವರ್ಗಕ್ಕೆ ಪ್ರವೇಶ ಮಾಡಿಸುತ್ತಾನೆ. ಯಾರು ಅದನ್ನು ಸುಳ್ಳು ಸುಳ್ಳಾಗಿ ಉಚ್ಛರಿಸುತ್ತಾನೋ ಅವನ ರಕ್ತ ಮತ್ತು ಸಂಪತ್ತು ಇಹಲೋಕದಲ್ಲಿ ಸುರಕ್ಷಿತವಾಗಿದೆ ಮತ್ತು ಅವನ ವಿಚಾರಣೆ ಮಾಡಬೇಕಾದ ಹೊಣೆಯು ಅಲ್ಲಾಹು ಅಝ್ಝ ವಜಲ್ಲ್‌ ನದ್ದಾಗಿದೆ. ಇದು ಸಂಕ್ಷಿಪ್ತ ಪದವನ್ನು ಮತ್ತು ಕಡಿಮೆ ಅಕ್ಷರಗಳನ್ನು ಹೊಂದಿದೆ. ನಾಲಗೆಯಿಂದ

[16] ಅಲ್‌ಬುಖಾರೀ 1389; ಮುಸ್ಲಿಮ್ 19; ಅತ್ತಿರ್ಮಿದೀ 625; ಅನ್ನಸಾಈ 2435; ಅಬೂ ದಾವೂದ್ 1584; ಇಬ್ನ್ ಮಾಜ 1783; ಅಹ್ಮದ್ 1/233; ಅದ್ದಾರಿಮೀ 1614

ಸುಲಭವಾಗಿ ಉಚ್ಚರಿಸುವಂತದ್ದಾಗಿದೆ. ತಕ್ಕಡಿಯಲ್ಲಿ ಅತ್ಯಧಿಕ ಭಾರವನ್ನು ತೂಗುತ್ತದೆ.

ಇಬ್ನ್ ಹಿಬ್ಬಾನ್ ಮತ್ತು ಅಲ್‌ಹಾಕಿಮ್ ಉದ್ಧರಿಸಿದ ಮತ್ತು ಅಲ್‌ಹಾಕಿಮ್ ಸಹೀಹ್ ಎಂದು ಹೇಳಿದ ಹದೀಸೊಂದರಲ್ಲಿ ಪ್ರವಾದಿ (ﷺ)ರವರು ಹೇಳುತ್ತಾರೆ:

« قَالَ مُوسَى: يَا رَبِّ، عَلِّمْنِي شَيْئًا أَذْكُرُكَ وَأَدْعُوكَ بِهِ، قَالَ: يَا مُوسَى، قُلْ لَا إِلَهَ إِلَّا اللَّهُ، قَالَ: كُلُّ عِبَادِكَ يَقُولُونَ هَذَا، قَالَ: يَا مُوسَى، لَوْ أَنَّ السَّمَاوَاتِ السَّبْعَ وَعَامِرَهُنَّ غَيْرِي، وَالْأَرْضِينَ السَّبْعَ فِي كَفَّةٍ، وَلَا إِلَهَ إِلَّا اللَّهُ فِي كَفَّةٍ، مَالَتْ بِهِنَّ لَا إِلَهَ إِلَّا اللَّهُ»

**“ಮೂಸಾ(ﷺ) ಹೇಳಿದರು: ಓ ನನ್ನ ರಬ್ಬೇ, ನಿನ್ನನ್ನು ಸ್ಮರಿಸಲು ಮತ್ತು ನಿನ್ನೊಂದಿಗೆ ಪ್ರಾರ್ಥಿಸಲು ನನಗೆ ಏನನ್ನಾದರೂ ಕಲಿಸಿಕೊಡು. ಅಲ್ಲಾಹು ಹೇಳಿದನು: ಓ ಮೂಸಾ, ತಾವು ‘ಲಾ ಇಲಾಹ ಇಲ್ಲಲ್ಲಾಹ್’ ಎಂದು ಹೇಳಿರಿ. ಮೂಸಾ(ﷺ) ಹೇಳಿದರು: ನಿನ್ನ ದಾಸರೆಲ್ಲರೂ ಇದನ್ನು ಹೇಳುತ್ತಾರಲ್ಲ. ಅಲ್ಲಾಹು ಹೇಳಿದನು: ಓ ಮೂಸಾ, ಒಂದು ವೇಳೆ ಏಳಾಕಾಶಗಳು ಮತ್ತು ನನ್ನ ಹೊರತು ಅವುಗಳಲ್ಲಿರುವವರು ಹಾಗೂ ಏಳು ಭೂಮಿಗಳು ತಕ್ಕಡಿಯ ಒಂದು ತಟ್ಟೆಯಲ್ಲಿದ್ದು, ‘ಲಾ ಇಲಾಹ ಇಲ್ಲಲ್ಲಾಹ್’ ಇನ್ನೊಂದು ತಟ್ಟೆಯಲ್ಲಿದ್ದರೆ, ಲಾ ಇಲಾಹ ಇಲ್ಲಲ್ಲಾಹ್ ಭಾರದಿಂದ ಕೆಳಕ್ಕೆ ವಾಲುವುದು.”** [17]

‘ಲಾ ಇಲಾಹ ಇಲ್ಲಲ್ಲಾಹ್’ ಎಂಬುದು ಅತಿಶ್ರೇಷ್ಠ ಸ್ಮರಣೆ (ದಿಕ್ರ್) ಆಗಿದೆ ಯೆಂದು ಈ ಹದೀಸ್ ಸೂಚಿಸುತ್ತದೆ. ಅಬ್ದುಲ್ಲಾಹ್ ಇಬ್ನ್ ಉಮರ್(ﷺ) ರವರ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

[17] ಅಲ್‌ಹಾಕಿಮ್ 1/528; ಇಬ್ನ್ ಹಿಬ್ಬಾನ್ 2324; ಅಹ್ಮದ್ 2/170

« خَيْرُ الدُّعَاءِ دُعَاءُ يَوْمِ عَرَفَةَ، وَخَيْرُ مَا قُلْتُ أَنَـا وَالنَّبِيُّـونَ مِـنْ قَـبْلِي لَا إِلَهَ إِلَّا اللَّهُ، وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ ».

**“ಅತ್ಯುತ್ತಮವಾದ ಪ್ರಾರ್ಥನೆಯು ಅರಫ ದಿನದ ಪ್ರಾರ್ಥನೆಯಾಗಿದೆ. ನಾನು ಮತ್ತು ನನಗಿಂತ ಮುಂಚಿನ ಪ್ರವಾದಿಗಳು ಹೇಳಿದ ಅತ್ಯುತ್ತಮ ಮಾತು ‘ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್’ ಎಂಬುದಾಗಿದೆ.”** ಇದನ್ನು ಅಹ್ಮದ್ ಮತ್ತು ಅತ್ತಿರ್ಮಿದೀ ವರದಿ ಮಾಡಿದ್ದಾರೆ. [18]

‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ವಚನವು ತಕ್ಕಡಿಯಲ್ಲಿ ಅತ್ಯಧಿಕ ಭಾರವನ್ನು ತೂಗುತ್ತದೆ ಎಂಬುದನ್ನು ಸೂಚಿಸುವ ಇನ್ನೊಂದು ಹದೀಸನ್ನು ಅತ್ತಿರ್ಮಿದೀ, –ಅತ್ತಿರ್ಮಿದೀ ಇದನ್ನು ಹಸನ್ ಎಂದಿ ದ್ದಾರೆ– ಅನ್ನಸಾಈ ಮತ್ತು ಅಲ್‌ಹಾಕಿಮ್‌ರವರು, –ಅಲ್‌ಹಾಕಿಮ್ ಇದನ್ನು ಮುಸ್ಲಿಮ್‌ರ ಶರತ್ತುಗಳ ಪ್ರಕಾರ ಸಹೀಹ್ ಎಂದಿದ್ದಾರೆ– ಅಬ್ದುಲ್ಲಾಹ್ ಇಬ್ನ್ ಅಮ್ರ್(ﷺ)ರಿಂದ ವರದಿ ಮಾಡಿದ್ದಾರೆ. ಆ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

« يُصَاحُ بِرَجُلٍ مِنْ أُمَّتِي عَلَى رُؤُوسِ الْخَلَائِقِ يَوْمَ الْقِيَامَةِ، فَيُنْشَرُ لَهُ تِسْعَةٌ وَتِسْـعُونَ سِجِلًّا، كُلُّ سِجِلٍّ مِنْهَا مَدَّ الْبَصَرِ، ثُمَّ يُقَالُ: أَتُنْكِرُ مِنْ هَذَا شَيْئًا؟ فَيَقُولُ: لَا، يَا رَبِّ، فَيُقَالُ: أَلَكَ عُذْرٌ أَوْ حَسَنَةٌ؟ فَيَهَابُ الرَّجُلُ وَيَقُولُ: لَا، فَيُقَالُ: بَـلَى، إِنَّ لَـكَ عِنْـدَنَا حَسَنَاتٍ، وَإِنَّهُ لَا ظُلْمَ عَلَيْكَ، فَيُخْرَجُ لَهُ بِطَاقَةٌ فِيهَا أَشْهَدُ أَنْ لَا إِلَهَ إِلَّا اللَّهُ، وَأَشْهَدُ أَنَّ مُحَمَّدًا عَبْدُهُ وَرَسُولُهُ، فَيَقُولُ: يَـا رَبِّ، مَـا هَـذِهِ الْبِطَاقَـةُ مَعَ هَـذِهِ السِّـجِلَّاتِ؟

[18] ಅತ್ತಿರ್ಮಿದೀ 3580

فَيَقُولُ: إِنَّكَ لَا تُظْلَمُ، فَتُوضَعُ السِّجِلَّاتُ فِي كَفَّةٍ، وَالْبِطَاقَةُ فِي كَفَّةٍ، فَطَاشَتِ السِّجِلَّاتُ، وَثَقُلَتِ الْبِطَاقَةُ ».

"ಪುನರುತ್ಥಾನ ದಿನದಂದು ಸೃಷ್ಟಿಗಳೆಲ್ಲರ ಎದುರಿಗೆ ನನ್ನ ಉಮ್ಮತ್‌ನಲ್ಲಿ ಸೇರಿದ ಒಬ್ಬ ವ್ಯಕ್ತಿಯನ್ನು ಕೂಗಿ ಕರೆಯಲಾಗುವುದು. ತರುವಾಯ ಅವನ ಮುಂದೆ ತೊಂಬತ್ತೊಂಬತ್ತು ಕರ್ಮಗ್ರಂಥಗಳನ್ನು ಬಿಡಿಸಿಡಲಾಗುವುದು. ಅವುಗಳಲ್ಲಿ ಪ್ರತಿಯೊಂದು ಗ್ರಂಥವೂ ದೃಷ್ಟಿ ತಲುಪುವಷ್ಟರ ತನಕ ವಿಸ್ತಾರವಾಗಿರುವುದು. ತರುವಾಯ ಅವನೊಂದಿಗೆ ಕೇಳಲಾಗುವುದು: ಇದರಲ್ಲಿ ಏನನ್ನಾದರೂ ನೀನು ನಿರಾಕರಿಸುವೆಯಾ? ಆತ ಹೇಳುವನು: ಓ ನನ್ನ ರಬ್ಬೇ, ಇಲ್ಲ ನಾನು ನಿರಾಕರಿಸಲಾರೆ. ಆಗ ಅವನೊಂದಿಗೆ ಕೇಳಲಾಗುವುದು: ನಿನಗೇನಾದರೂ ವಿನಾಯಿತಿಯಿದೆಯೋ? ಅಥವಾ ನಿನ್ನ ಬಳಿಯೇನಾದರೂ ಸತ್ಕರ್ಮವಿದೆಯೋ? ಆಗ ಆ ವ್ಯಕ್ತಿ ಭಯಭೀತನಾಗಿ ಹೇಳುವನು: ಇಲ್ಲ. ಆಗ ಅವನೊಂದಿಗೆ ಹೇಳಲಾಗುವುದು: ಹೌದು, ಖಂಡಿತವಾಗಿಯೂ ನಮ್ಮ ಬಳಿ ನಿನ್ನ ಕೆಲವು ಸತ್ಕರ್ಮಗಳಿವೆ. ನಿನ್ನ ಮೇಲೆ ಯಾವುದೇ ಅನ್ಯಾಯವೆಸಗಲಾಗದು. ತರುವಾಯ ಅವನಿಗೊಂದು ಚೀಟಿಯನ್ನು ಹೊರ ತೆಗೆಯಲಾಗುವುದು. ಅದರಲ್ಲಿ 'ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹೂ' ಎಂಬ ವಚನವಿರುವುದು. ಆ ವ್ಯಕ್ತಿ ಕೇಳುವನು: ಓ ನನ್ನ ರಬ್ಬೇ, ಈ ಕರ್ಮಪುಸ್ತಕಗಳೊಂದಿಗೆ ಹೋಲಿಸಿದರೆ ಈ ಚೀಟಿಯ ಮೌಲ್ಯವಾದರೂ ಏನು? ಆ ವ್ಯಕ್ತಿಯೊಂದಿಗೆ ಹೇಳಲಾಗುವುದು: ನಿನ್ನ ಮೇಲೆ ಯಾವುದೇ ಅನ್ಯಾಯವೆಸಗಲಾಗದು. ತರುವಾಯ ಆ ಕರ್ಮ ಗ್ರಂಥಗಳನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಮತ್ತು ಆ ಚೀಟಿಯನ್ನು ಇನ್ನೊಂದು ತಟ್ಟೆಯಲ್ಲಿ ಇಡಲಾಗುವುದು. ಆಗ ಕರ್ಮ ಗ್ರಂಥಗಳ ತಟ್ಟೆಯು ಹಗುರವಾಗುವುದು ಮತ್ತು ಚೀಟಿಯಿರುವ ತಟ್ಟೆಯು ಭಾರವಾಗುವುದು." [19]

[19] ಅತ್ತಿರ್ಮಿದೀ 2641; ಅಲ್‌ಹಾಕಿಮ್ 1/650; ಇಬ್ನ್ ಮಾಜ 4300

ಈ ಮಹತ್ವಪೂರ್ಣವಾದ ವಚನಕ್ಕೆ ಅನೇಕ ಶ್ರೇಷ್ಠತೆಗಳಿವೆ. ಅಲ್‌ಹಾಫಿಝ್ ಇಬ್ನ್ ರಜಬ್‌ರವರು ತಮ್ಮ 'ಕಲಿಮತುಲ್ ಇಖ್ಲಾಸ್' ಎಂಬ ಕೃತಿಯಲ್ಲಿ ಅವುಗಳನ್ನು ಪ್ರಸ್ತಾಪಿಸಿದ್ದಾರೆ. ಪ್ರತಿಯೊಂದು ಶ್ರೇಷ್ಠತೆಗೆ ಆಧಾರವನ್ನು ನೀಡಿದ್ದಾರೆ. ಅವುಗಳ ಪೈಕಿ ಕೆಲವು ಹೀಗಿವೆ:

1. ಅದು ಸ್ವರ್ಗದ ಮೌಲ್ಯವಾಗಿದೆ.

2. ಯಾರ ಕೊನೆಯ ಮಾತು 'ಲಾ ಇಲಾಹ ಇಲ್ಲಲ್ಲಾಹ್' ಆಗಿರುವುದೋ ಅವನು ಸ್ವರ್ಗವನ್ನು ಪ್ರವೇಶಿಸುವನು.

3. ಅದು ನರಕದಿಂದಿರುವ ಮುಕ್ತಿಯಾಗಿದೆ.

4. ಅದು ಕ್ಷಮೆಯನ್ನು ಕಡ್ಡಾಯಗೊಳಿಸುತ್ತದೆ.

5. ಅದು ಸತ್ಕರ್ಮಗಳಲ್ಲಿ ಅತ್ಯುತ್ತಮವಾದುದಾಗಿದೆ.

6. ಅದು ದೋಷಗಳನ್ನು ಮತ್ತು ಪಾಪಗಳನ್ನು ಅಳಿಸಿಹಾಕುತ್ತದೆ.

7. ಹೃದಯದಲ್ಲಿ ವಿಶ್ವಾಸವು (ಈಮಾನ್) ಮಾಸಿದಾಗ ಅದು ಅದನ್ನು ನವೀಕರಿಸುತ್ತದೆ.

8. ಪಾಪಗಳು ತುಂಬಿದ ಕರ್ಮ ಗ್ರಂಥಗಳಿಗಿಂತಲೂ ಇದು ಹೆಚ್ಚು ಭಾರವನ್ನು ತೂಗುತ್ತದೆ.

9. ಅಲ್ಲಾಹು ಅರ್ಶ್ಶು ವಜಲ್ಲ್ ನೆಡೆಗೆ ತಲುಪುವವರೆಗಿರುವ ಎಲ್ಲ ಅಡೆತಡೆಗಳನ್ನು ಇದು ನಿವಾರಿಸುತ್ತದೆ.

10. ಇದು ಎಂತಹ ವಚನವೆಂದರೆ ಇದನ್ನು ಉಚ್ಛರಿಸಿದವನನ್ನು ಅಲ್ಲಾಹು ಸತ್ಯಪಡಿಸುತ್ತಾನೆ.

11. ಇದು ಪ್ರವಾದಿಗಳು ಹೇಳಿದ ಮಾತುಗಳಲ್ಲಿ ಅತಿಶ್ರೇಷ್ಠವಾದು ದಾಗಿದೆ.

12. ಇದು ಅತಿ ಶ್ರೇಷ್ಠವಾದ ಸ್ಮರಣೆ (ದಿಕ್ರ್) ಆಗಿದೆ.

13. ಇದು ಕರ್ಮಗಳಲ್ಲೇ ಅತಿಶ್ರೇಷ್ಠವಾಗಿದೆ.

14. ಇದು ಕರ್ಮಗಳಲ್ಲೇ ಹಲವು ಪಟ್ಟು ಪುಣ್ಯಗಳನ್ನು ಹೊಂದಿದೆ.

15. ಈ ವಚನವನ್ನು ಉಚ್ಛರಿಸುವುದು ಗುಲಾಮನನ್ನು ವಿಮೋಚನೆಗೊಳಿಸುವುದಕ್ಕೆ ಸಮಾನವಾಗಿದೆ.

16. ಇದು ಶೈತಾನನಿಂದ ಸಂರಕ್ಷಣೆಯನ್ನು ನೀಡುತ್ತದೆ.

17. ಕಬರ್‌ನ ಏಕಾಂತದಲ್ಲಿ ಮತ್ತು ಮಹ್‌ಶರದ ಭಯಾನಕತೆಯಲ್ಲಿ ಇದು ರಕ್ಷೆಯನ್ನು ನೀಡುತ್ತದೆ.

18. ಇದು ವಿಶ್ವಾಸಿಗಳು ಅವರ ಕಬರ್‌ಗಳಿಂದ ಎದ್ದು ಬರುವಾಗ ಅವರಿಗಿರುವ ಲಾಂಛನವಾಗಿದೆ.

19. ಇದನ್ನು ಉಚ್ಛರಿಸಿದವನಿಗೆ ಇದು ಸ್ವರ್ಗದ ಎಂಟು ಬಾಗಿಲುಗಳನ್ನು ತೆರೆದು ಕೊಡುತ್ತದೆ. ಯಾವುದರಿಂದ ಬೇಕಾದರೂ ಅವನು ಸ್ವರ್ಗವನ್ನು ಪ್ರವೇಶಿಸಬಹುದಾಗಿದೆ.

20. ಇದನ್ನು ಉಚ್ಛರಿಸಿದವರು ಇದರ ಹಕ್ಕುಗಳನ್ನು ನೆರವೇರಿಸುವುದರಲ್ಲಿ ಕೊರತೆ ಮಾಡಿದ ಕಾರಣ ನರಕವನ್ನು ಪ್ರವೇಶಿಸಿದರೂ ಅವರು ಅದರಿಂದ ಹೊರಬಂದೇ ತೀರುತ್ತಾರೆ.

ಇವೆಲ್ಲವೂ ಇಬ್ನ್ ರಜಬ್‌ರವರು ತಮ್ಮ ಗ್ರಂಥದಲ್ಲಿ ನೀಡಿದ ಶ್ರೇಷ್ಠತೆಗಳ ಶೀರ್ಷಿಕೆಗಳಾಗಿವೆ. ಪ್ರತಿಯೊಂದು ಶ್ರೇಷ್ಠತೆಗೂ ಅವರು ಆಧಾರವನ್ನು ನೀಡಿದ್ದಾರೆ.

# إِعْرَابُهَا وَأَرْكَانُهَا وَشُرُوطُهَا

## ‘ಲಾ ಇಲಾಹ ಇಲ್ಲಲ್ಲಾಹ್’ ಎಂಬುದರ ಇಅ್‌ರಾಬ್, ಸ್ಥಂಭಗಳು ಮತ್ತು ಶರತ್ತುಗಳು

**1. ಲಾ ಇಲಾಹ ಇಲ್ಲಲ್ಲಾಹ್ ಎಂಬುದರ ಇಅ್‌ರಾಬ್ (ವ್ಯಾಕರಣ ಚಿಹ್ನೆಗಳು):**

ಅರ್ಥವನ್ನು ಗ್ರಹಿಸುವುದು ವಾಕ್ಯದ ವ್ಯಾಕರಣ ಚಿಹ್ನೆಗಳನ್ನು (ಇಅ್‌ರಾಬ್ ಗಳನ್ನು) ಅವಲಂಬಿಸಿಕೊಂಡಿರುವುದರಿಂದ ಉಲಮಾಗಳು ‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ವಾಕ್ಯದ ಇಅ್‌ರಾಬನ್ನು ಕಲಿಯುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಉಲಮಾಗಳು ಹೇಳುತ್ತಾರೆ:

ಲಾ (لَا) ಎಂಬ ಪದವು 'ಅನ್ನಾಫಿಯತು ಲಿಲ್‌ಜಿನ್ಸ್' (النَّافِيَـةُ لِلْجِـنْسِ) ಆಗಿದೆ. ಇದರ (ಅನ್ನಾಫಿಯತು ಲಿಲ್‌ಜಿನ್ಸ್ ನ) ಇಸ್ಮ್ ಆಗಿರುವ ಇಲಾಹ (إِلَهَ) ಎಂಬ ಪದವು 'ಮಬ್ನಿಯ್ಯುನ್ ಅಲಲ್ ಫತ್‌ಹ್' (مَبْـنِيٌّ عَلَى الْفَـتْحِ) ಆಗಿದೆ. ಇದರ (ಅನ್ನಾಫಿಯತು ಲಿಲ್‌ಜಿನ್ಸ್ ನ) ಖಬರ್ 'ಮಹ್ಝೂಫ್' ಆಗಿದೆ (ಕೈಬಿಡಲಾಗಿದೆ). ಅದನ್ನು 'ಹಕ್ಕುನ್' (حَـقٌّ) ಎಂದು ತಕ್ದೀರ್ (ಅಂದಾಜು) ಮಾಡಲಾಗುತ್ತದೆ. ಈ ವಾಕ್ಯದ ಪೂರ್ಣ ರೂಪವು 'ಲಾ ಇಲಾಹ ಹಕ್ಕುನ್' ಎಂದಾಗಿದೆ. ಇಲ್ಲಾ (إِلَّا) ಎಂಬುದು 'ಇಸ್ತಿಸ್ನಾಅ್' (الاسـتثناء) ಆಗಿದೆ. ಇದು ಖಬರ್‌ನಿಂದ ಅಲ್ಲಾಹನನ್ನು ಹೊರತುಪಡಿಸುತ್ತದೆ.

ಇಲಾಹ್ (إِلَه) ಎಂದರೆ 'ಅಲ್‌ಮಅ್‌ಲೂಹು ಬಿಲ್‌ಇಬಾದಃ' (الْمَأْلُوهُ بِالْعِبَـادَة) ಎಂದಾಗಿದೆ. (ಅಂದರೆ ಆರಾಧನೆ ಸಲ್ಲಿಸುವ ಮೂಲಕ ಆರಾಧ್ಯನನ್ನಾಗಿ ಮಾಡಲ್ಪಟ್ಟವನು ಎಂದರ್ಥ.) ಅಂದರೆ ಲಾಭವನ್ನು ಪಡೆಯುವುದಕ್ಕಾಗಿ ಮತ್ತು ಹಾನಿಯನ್ನು ತೊಲಗಿಸುವುದಕ್ಕಾಗಿ ಹೃದಯಗಳು ಹಂಬಲದೊಂದಿಗೆ ಆರಾಧನೆ ಮಾಡುವ ಮತ್ತು ಉದ್ದೇಶಿಸುವ ವಸ್ತು (ಅಥವಾ ವ್ಯಕ್ತಿ) ಎಂದರ್ಥ.

ಕೆಲವರು 'ಲಾ' ಎಂಬ ಪದದ ಖಬರ್ ಆಗಿ ಮೌಜೂದ್ (ಅಸ್ತಿತ್ವದಲ್ಲಿರು ವವನು) ಅಥವಾ ಮಅ್‌ಬೂದ್ (ಆರಾಧ್ಯನು) ಎಂದು ಅಂದಾಜು ಮಾಡಿಕೊಳ್ಳುತ್ತಾರೆ. ಇದು ತಪ್ಪಾಗಿದೆ.

ಯಾಕೆಂದರೆ ಅಲ್ಲಾಹನ ಹೊರತು ಅನೇಕ ಆರಾಧ್ಯರುಗಳು ಅಸ್ತಿತ್ವ ದಲ್ಲಿದ್ದಾರೆ. ಉದಾಹರಣೆಗೆ, ವಿಗ್ರಹಗಳು, ದರ್ಗಾಗಳು ಇತ್ಯಾದಿ. ಆದರೆ ಸತ್ಯ ಆರಾಧ್ಯನು ಅಲ್ಲಾಹು ಮಾತ್ರವಾಗಿದ್ದಾನೆ. ಅವನ ಹೊರತಾಗಿರುವ ಆರಾಧ್ಯರೆಲ್ಲರೂ ಮಿಥ್ಯವಾಗಿದ್ದಾರೆ. ಅವರಿಗಿರುವ ಇಬಾದತ್ ವ್ಯರ್ಥವಾಗಿದೆ.

## 2. ಲಾ ಇಲಾಹ ಇಲ್ಲಲ್ಲಾಹ್ ಎಂಬುದರ ಎರಡು ಸ್ಥಂಭಗಳು:

ಇದಕ್ಕಿರುವುದು ಎರಡೇ ಸ್ಥಂಭಗಳು. ಮೊದಲನೆಯದು 'ಅನ್ನಫ್ಯ್' (النَّـفْي). ಅಂದರೆ ನಿಷೇಧ. ಎರಡನೆಯದು 'ಅಲ್‌ಇಸ್ಬಾತ್' (الْإِثْبَـات). ಅಂದರೆ ದೃಢೀಕರಣ.

ನಿಷೇಧ ಎಂಬುದರ ಮೂಲಕ ಉದ್ದೇಶಿಸುವುದು ಅಲ್ಲಾಹನ ಹೊರತು ಇತರೆಲ್ಲ ಸೃಷ್ಟಿಗಳಿಗಿರುವ ಆರಾಧನಾರ್ಹತೆಯ ನಿಷೇಧ ವನ್ನಾಗಿದೆ.

ದೃಢೀಕರಣ ಎಂಬುದರ ಮೂಲಕ ಉದ್ದೇಶಿಸುವುದು ಅಲ್ಲಾಹನಿಗೆ ಮಾತ್ರ ಆರಾಧನಾರ್ಹತೆಯ ದೃಢೀಕರಣವನ್ನಾಗಿದೆ. ಆದ್ದರಿಂದ ಸತ್ಯ ಆರಾಧ್ಯನು ಅಲ್ಲಾಹು ಮಾತ್ರವಾಗಿದ್ದಾನೆ. ಅವನ ಹೊರತು ಮುಶ್ರಿಕರು ಆರಾಧಿಸುವ ಆರಾಧ್ಯರೆಲ್ಲವೂ ಮಿಥ್ಯವಾಗಿದ್ದಾರೆ.

﴿ذَلِكَ بِأَنَّ اللَّهَ هُوَ الْحَقُّ وَأَنَّ مَا يَدْعُونَ مِنْ دُونِهِ هُوَ الْبَاطِلُ﴾

**"ಇದೇಕೆಂದರೆ ಖಂಡಿತವಾಗಿಯೂ ಅಲ್ಲಾಹು ಮಾತ್ರ ಸತ್ಯವಾಗಿದ್ದಾನೆ ಮತ್ತು ಅವನ ಹೊರತು ಅವರು ಆರಾಧಿಸುವವರು ಮಿಥ್ಯವಾಗಿದ್ದಾರೆ."** [20]

ಇಮಾಮ್ ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

فَدَلَالَةُ لَا إِلَهَ إِلَّا اللَّهُ عَلَى إِثْبَاتِ إِلَهِيَّتِهِ أَعْظَمُ مِـنْ دَلَالَـةِ قَـوْلِهِ: اللَّهُ إِلَهٌ، وَهَـذَا لِأَنَّ قَوْلَ اللَّهُ إِلَهٌ لَا يَنْفِي إِلَهِيَّةَ مَا سِوَاهُ بِخِلَافِ قَوْلِ: لَا إِلَهَ إِلَّا اللَّهُ. فَإِنَّـهُ يَقْتَضِيـ حَصْرَـ

[20] ಸೂರಃ ಅಲ್‌ಹಜ್ಜ್ 62

الْأُلُوهِيَّةِ وَنَفْيَهَا عَمَّا سِوَاهُ. وَقَدْ غَلَطَ غَلَطًا فَاحِشًا كَذَلِكَ مَنْ فَسَّرَ الْإِلَهَ بِأَنَّهُ الْقَادِرُ عَلَى الاِخْتِرَاعِ فَقَطْ.

**"ಅಲ್ಲಾಹನ ಆರಾಧನಾರ್ಹತೆಯ ದೃಢೀಕರಣಕ್ಕಾಗಿ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಾಕ್ಯವು ನೀಡುವ ಪುರಾವೆಯು 'ಅಲ್ಲಾಹು ಇಲಾಹುನ್' (ಅಲ್ಲಾಹು ಆರಾಧ್ಯನಾಗಿದ್ದಾನೆ) ಎಂಬ ವಾಕ್ಯವು ನೀಡುವ ಪುರಾವೆಗಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಇದೇಕೆಂದರೆ 'ಅಲ್ಲಾಹು ಇಲಾಹುನ್' (ಅಲ್ಲಾಹು ಆರಾಧ್ಯನಾಗಿದ್ದಾನೆ) ಎಂಬ ವಾಕ್ಯವು ಅಲ್ಲಾಹನ ಹೊರತಾದವರಿಗಿರುವ ಆರಾಧನಾರ್ಹತೆಯನ್ನು ನಿಷೇಧಿಸುವುದಿಲ್ಲ. ಆದರೆ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಾಕ್ಯವು ಅದನ್ನು ನಿಷೇಧಿಸುತ್ತದೆ. 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಾಕ್ಯವು ಆರಾಧನಾರ್ಹತೆಯನ್ನು ಅಲ್ಲಾಹನಿಗೆ ಮಾತ್ರ ಸೀಮಿತಗೊಳಿಸುವುದನ್ನು ಮತ್ತು ಅವನ ಹೊರತಾದವರಿಗಿರುವ ಆರಾಧನಾರ್ಹತೆಯನ್ನು ನಿಷೇಧಿಸುವುದನ್ನು ಆವಶ್ಯಪಡುತ್ತದೆ. ಆದ್ದರಿಂದ 'ಇಲಾಹ್' (ಆರಾಧ್ಯ) ಎಂದರೆ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರುವವನು ಮಾತ್ರವಾಗಿದ್ದಾನೆ ಎಂದು ವ್ಯಾಖ್ಯಾನಿಸಿದವರು ಇದೇ ರೀತಿ ಅತ್ಯಂತ ಹೊಲಸಾದ ಪ್ರಮಾದವೆಸಗಿದ್ದಾರೆ."**

ಅಶ್ಶೈಖ್ ಸುಲೈಮಾನ್ ಇಬ್ನ್ ಅಬ್ದಿಲ್ಲಾಹ್ ತಮ್ಮ 'ಶರ್ಹು ಕಿತಾಬಿ ತೌಹೀದ್'ನಲ್ಲಿ ಹೇಳುತ್ತಾರೆ:

فَإِنْ قِيلَ قَدْ تَبَيَّنَ مَعْنَى الْإِلَهِ وَالْإِلَهِيَّةِ، فَمَا الْجَوَابُ عَنْ قَوْلِ مَنْ قَالَ بِأَنَّ مَعْنَى الْإِلَهِ: الْقَادِرُ عَلَى الاِخْتِرَاعِ وَنَحْوُ هَذِهِ الْعِبَارَةِ ؟ قِيلَ : الْجَوَابُ مِنْ وَجْهَيْنِ، أَحَدُهُمَا : أَنَّ هَذَا قَوْلٌ مُبْتَدَعٌ لَا يُعْرَفُ أَحَدٌ قَالَهُ مِنَ الْعُلَمَاءِ وَلَا مِنْ أَئِمَّةِ اللُّغَةِ، وَكَلَامُ الْعُلَمَاءِ وَأَئِمَّةِ اللُّغَةِ هُوَ مَعْنَى مَا ذَكَرْنَاهُ كَمَا تَقَدَّمَ، فَيَكُونُ هَذَا الْقَوْلُ بَاطِلًا. الثَّانِي : عَلَى تَقْدِيرِ تَسْلِيمِهِ فَهُوَ تَفْسِيرٌ بِاللَّازِمِ لِلْإِلَهِ الْحَقِّ، فَإِنَّ اللَّازِمَ أَنْ يَكُونَ خَالِقًا قَادِرًا

عَلَى الاِخْتِرَاعِ، وَمَتَى لَمْ يَكُنْ كَذَلِكَ فَلَيْسَ بِإِلَهٍ حَقٍّ وَإِنْ سُمِّيَ إِلَهًا، وَلَيْسَ مُرَادُهُ أَنَّ مَنْ عَرَفَ أَنَّ الْإِلَهَ هُوَ الْقَادِرُ عَلَى الاِخْتِرَاعِ فَقَدْ دَخَلَ فِي الْإِسْلَامِ وَأَتَى بِتَحْقِيقِ الْمَرَامِ مِنْ مِفْتَاحِ دَارِ السَّلَامِ، فَإِنَّ هَذَا لَا يَقُولُهُ أَحَدٌ، لِأَنَّهُ يَسْتَلْزِمُ أَنْ يَكُونَ كُفَّارُ الْعَرَبِ مُسْلِمِينَ، وَلَوْ قُدِّرَ أَنَّ بَعْضَ الْمُتَأَخِّرِينَ أَرَادَ ذَلِكَ فَهُوَ مُخْطِئٌ يُرَدُّ عَلَيْهِ بِالدَّلَائِلِ السَّمْعِيَّةِ وَالْعَقْلِيَّةِ.

“ಇಲಾಹ್ ಮತ್ತು ಇಲಾಹಿಯ್ಯತ್ ಎಂಬ ಪದಗಳ ಅರ್ಥಗಳು ಸ್ಪಷ್ಟವಾಗಿದೆ. ಆದರೆ ಇಲಾಹ್ ಎಂಬುದಕ್ಕೆ ‘ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರುವವನು’ ಮುಂತಾದ ವಿಧಗಳಲ್ಲಿರುವ ಅರ್ಥಗಳನ್ನು ನೀಡುವವರ ಮಾತಿಗಿರುವ ಉತ್ತರವೇನು? ಎಂದು ಕೇಳಲಾದರೆ ಹೀಗೆನ್ನಲಾಗುತ್ತದೆ: ಇದಕ್ಕಿರುವ ಉತ್ತರವು ಎರಡು ರೀತಿಯಲ್ಲಿದೆ. ಒಂದು: ಇದೊಂದು ಹೊಸ ಅಭಿಪ್ರಾಯವಾಗಿದೆ. ಉಲಮಾಗಳ ಪೈಕಿ ಅಥವಾ ಭಾಷಾ ನೇತಾರರ ಪೈಕಿ ಯಾರಾದರೂ ಈ ರೀತಿ ಅಭಿಪ್ರಾಯಪಟ್ಟಿದ್ದಾಗಿ ತಿಳಿದುಬಂದಿಲ್ಲ. ಉಲಮಾಗಳ ಮತ್ತು ಭಾಷಾ ನೇತಾರರ ಅಭಿಪ್ರಾಯವು ನಾವು ಈಗಾಗಲೇ ಹೇಳಿದ ಅರ್ಥವಾಗಿದೆ. ಆದ್ದರಿಂದ ಈ ಅಭಿಪ್ರಾಯವು ಸುಳ್ಳಾಗುತ್ತದೆ. ಎರಡು: ಇದನ್ನು ಸರಿಯೆಂದು ಒಪ್ಪಿಕೊಂಡರೂ ಸಹ ಇದು ಸತ್ಯ ಆರಾಧ್ಯನಿಗೆ ಅನಿವಾರ್ಯವಾಗಿರುವ ಒಂದರ ಮೂಲಕ ವ್ಯಾಖ್ಯಾನಿಸುವುದಾಗಿದೆ. ಯಾಕೆಂದರೆ ಅವನು (ಸತ್ಯ ಆರಾಧ್ಯನು) ಸೃಷ್ಟಿಕರ್ತನಾಗಿರುವುದು ಮತ್ತು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರುವುದು ಅನಿವಾರ್ಯವಾಗಿದೆ. ಅವನಿಗೆ ಆ ಸಾಮರ್ಥ್ಯವಿಲ್ಲದಿದ್ದರೆ ಅವನನ್ನು ಆರಾಧ್ಯ ಎಂದು ಕರೆಯಲಾದರೂ ಸಹ ಅವನು ಸತ್ಯ ಆರಾಧ್ಯ ಆಗಲಾರನು. ಆರಾಧ್ಯ ಎಂದರೆ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರುವವನು ಎಂಬುದನ್ನು ಅರಿತವರೆಲ್ಲರೂ ಇಸ್ಲಾಮಿನೊಳಗೆ ಪ್ರವೇಶಿಸುವರು ಮತ್ತು ಶಾಂತಿಭವನದ (ಸ್ವರ್ಗಲೋಕದ) ಕೀಲಿಕೈಯನ್ನು ಪಡೆಯುವ ಇಚ್ಛೆಯನ್ನು ಪೂರೈಸಿಕೊಳ್ಳುವರು ಎಂಬುದು ಇದರ ಉದ್ದೇಶವಲ್ಲ. ಯಾರೂ ಕೂಡ ಇಂತಹ ಒಂದು

**ಅಭಿಪ್ರಾಯವನ್ನು ಹೇಳಲಾರರು. ಯಾಕೆಂದರೆ ಅರಬ್ ಅವಿಶ್ವಾಸಿಗಳು ಮುಸ್ಲಿಮರಾಗಿದ್ದಾರೆಂದು ಹೇಳುವುದನ್ನು ಇದು ಅನಿವಾರ್ಯಗೊಳಿಸುತ್ತದೆ. ಇತ್ತೀಚಿನವರಲ್ಲಿ ಕೆಲವರು ಇಂತಹ ಒಂದು ಅಭಿಪ್ರಾಯವನ್ನು ಹೊಂದಿದ್ದರೆ ಅವರು ಪ್ರಮಾದವೆಸಗಿದ್ದಾರೆ. ಕುರ್‌ಆನ್ ಮತ್ತು ಸುನ್ನತ್ತಿನ ಪುರಾವೆಗಳು ಮತ್ತು ಬೌದ್ಧಿಕ ಪುರಾವೆಗಳ ಮೂಲಕ ಅವನಿಗೆ ಉತ್ತರ ನೀಡಲಾಗುತ್ತದೆ."**

## 3. ಲಾ ಇಲಾಹ ಇಲ್ಲಲ್ಲಾಹ್ ಎಂಬುದರ ಶರತ್ತುಗಳು:

ಲಾ ಇಲಾಹ ಇಲ್ಲಲ್ಲಾಹ್ ಉಚ್ಛರಿಸಿದವನಿಗೆ ಅದು ಪ್ರಯೋಜನ ನೀಡಬೇಕಾದರೆ ಅವನು ಏಳು ಶರತ್ತುಗಳನ್ನು ಪಾಲಿಸಬೇಕಾಗಿದೆ.

1. ಇಲ್ಮ್ [العلم] (ಅರಿವು): ಅಂದರೆ ಲಾ ಇಲಾಹ ಇಲ್ಲಲ್ಲಾಹ್ ಎಂಬುದರ ಅರ್ಥವನ್ನು, ಅದರ ನಿಷೇಧವನ್ನು ಮತ್ತು ಅದರ ದೃಢೀಕರಣವನ್ನು ಅರಿಯುವುದು. ಅದರ ಅರ್ಥವನ್ನು ಮತ್ತು ಅದರ ಆವಶ್ಯಕತೆಗಳನ್ನು ಅರಿಯದೆ ಅದನ್ನು ಉಚ್ಛರಿಸುವವನಿಗೆ ಅದು ಯಾವುದೇ ಪ್ರಯೋಜನವನ್ನೂ ನೀಡದು. ಯಾಕೆಂದರೆ ಅದು ಏನನ್ನು ಸೂಚಿಸುತ್ತದೋ ಅದರಲ್ಲಿ ಆತ ವಿಶ್ವಾಸವಿಟ್ಟಿಲ್ಲ. ಇಂತಹವನ ಪಾಲಿಗೆ ಅದನ್ನು ಉಚ್ಛರಿಸುವುದು ಎಂದರೆ ತನಗೆ ಅರ್ಥವಾಗದ ಯಾವುದೋ ಒಂದು ಭಾಷೆಯಲ್ಲಿ ಮಾತನಾಡುವುದಕ್ಕೆ ಸಮಾನವಾಗಿದೆ.

2. ಯಕೀನ್ [اليقين] (ದೃಢವಿಶ್ವಾಸ): ಅಂದರೆ ಲಾ ಇಲಾಹ ಇಲ್ಲಲ್ಲಾಹ್ ಎಂಬುದರ ಬಗ್ಗೆ ಸಂಶಯ ಮತ್ತು ಸಂದೇಹವನ್ನು ನಿಷೇಧಿಸುವಂತಹ ವಿಧದಲ್ಲಿರುವ ಸಂಪೂರ್ಣ ಅರಿವು.

3. ಇಖ್ಲಾಸ್ [الإخـــلاص] (ನಿಷ್ಕಳಂಕತೆ): ಅಂದರೆ ಶಿರ್ಕನ್ನು ನಿಷೇಧಿಸುವಂತಹ ವಿಧದಲ್ಲಿರುವ ಇಖ್ಲಾಸ್. ಇದು ಲಾ ಇಲಾಹ ಇಲ್ಲಲ್ಲಾಹ್ ಸೂಚಿಸುವ ವಿಷಯವಾಗಿದೆ.

4. ಸಿದ್ಕ್ [الصـدق] (ಸತ್ಯಸಂಧತೆ): ಅಂದರೆ ನಿಫಾಕ್ (ಕಾಪಟ್ಯ)ವನ್ನು ತಡೆಗಟ್ಟುವಂತಹ ಸತ್ಯಸಂಧತೆ. ಯಾಕೆಂದರೆ ಅವರು (ಕಪಟವಿಶ್ವಾಸಿಗಳು) ಲಾ ಇಲಾಹ ಇಲ್ಲಲ್ಲಾಹ್ ಏನನ್ನು ಸೂಚಿಸುತ್ತದೋ ಅದರಲ್ಲಿ ವಿಶ್ವಾಸವಿಡದೆ ಅದನ್ನು ಕೇವಲ ನಾಲಗೆಯ ಮೂಲಕ ಉಚ್ಛರಿಸುತ್ತಾರೆ.

5. ಮಹಬ್ಬತ್ [المحبـــة] (ಪ್ರೀತಿ): ಅಂದರೆ ಕಪಟವಿಶ್ವಾಸಿಗಳಿಗೆ ವಿರುದ್ಧವಾಗಿ ಈ ವಚನವನ್ನು ಮತ್ತು ಅದು ಏನನ್ನೆಲ್ಲ ಸೂಚಿಸುತ್ತದೋ ಅವೆಲ್ಲವನ್ನೂ ಪ್ರೀತಿಸುವುದು ಮತ್ತು ಆ ವಿಷಯದಲ್ಲಿ ಸಂತೋಷಪಡುವುದು.

6. ಇನ್ಕಿಯಾದ್ [الانقيـاد] (ಶರಣಾಗತಿ): ಅಂದರೆ ಇದರ ಹಕ್ಕುಗಳನ್ನು ನೆರವೇರಿಸುವ ಮೂಲಕ ಶರಣಾಗುವುದು. ಅಲ್ಲಾಹನಿಗೆ ಸಂಪೂರ್ಣ ನಿಷ್ಕಳಂಕತೆಯನ್ನು ಪ್ರಕಟಿಸಿ ಅವನ ಸಂತೃಪ್ತಿಯನ್ನು ಬೇಡುತ್ತಾ ಕಡ್ಡಾಯ ಕರ್ಮಗಳನ್ನು ನಿರ್ವಹಿಸುವುದು ಇದರ ಹಕ್ಕುಗಳಾಗಿವೆ. ಇದು ಈ ವಚನದ ಆವಶ್ಯಕತೆಯಾಗಿದೆ.

7. ಕಬೂಲ್ [القبـــول] (ಸ್ವೀಕಾರ): ಅಂದರೆ ತಿರಸ್ಕರಣೆಯನ್ನು ನಿಷೇಧಿಸುವಂತಹ ವಿಧದಲ್ಲಿರುವ ಸ್ವೀಕಾರ. ಇದು ಅಲ್ಲಾಹನ ಆಜ್ಞೆಗಳಿಗೆ ಶರಣಾಗುವ ಮೂಲಕ ಮತ್ತು ಅವನು ವಿರೋಧಿಸಿದವುಗಳನ್ನು ತೊರೆಯುವ ಮೂಲಕ ಉಂಟಾಗುತ್ತದೆ.

ಇವೆಲ್ಲವೂ ಈ ಮಹತ್ವಪೂರ್ಣ ವಚನದ ವೈಶಿಷ್ಟ್ಯತೆಗಳ ಬಗ್ಗೆ ಮತ್ತು ಅದರ ಹಕ್ಕುಗಳನ್ನು ಹಾಗೂ ನಿರ್ಬಂಧಗಳನ್ನು ವಿವರಿಸುತ್ತಾ ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ಬಂದಿರುವ ವಚನಗಳಿಂದ ಉಲಮಾಗಳು ಸಂಶೋಧಿಸಿದ ಶರತ್ತುಗಳಾಗಿವೆ. ಇದು ಕೇವಲ ನಾಲಗೆಯ ಮೂಲಕ ಉಚ್ಛರಿಸುವಂತಹ ಒಂದು ವಚನವಲ್ಲ.

مَعْنَى هَذِهِ الْكَلِمَةِ وَمُقْتَضَاهَا

## ‘ಲಾ ಇಲಾಹ ಇಲ್ಲಲ್ಲಾಹ್’ ಎಂಬುದರ ಅರ್ಥ ಮತ್ತು ಅದರ ಆವಶ್ಯಕತೆಗಳು

ಈಗಾಗಲೇ ವಿವರಿಸಿದ ವಿಷಯಗಳಿಂದ ಸ್ಪಷ್ಟವಾಗುವ ಪ್ರಕಾರ ‘ಲಾ ಇಲಾಹ ಇಲ್ಲಲ್ಲಾಹ್’ ಎಂಬುದರ ಅರ್ಥವು ಏಕೈಕ ಆರಾಧ್ಯನ ಹೊರತು ಸತ್ಯ ಆರಾಧ್ಯರಾಗಿ ಅನ್ಯರಿಲ್ಲ ಎಂದಾಗಿದೆ. ಆ ಏಕೈಕ ಆರಾಧ್ಯನು ಅಲ್ಲಾಹನಾಗಿದ್ದಾನೆ. ಅವನು ಏಕೈಕನಾಗಿದ್ದಾನೆ. ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಯಾಕೆಂದರೆ ಇಬಾದತ್‌ಗೆ ಅರ್ಹನು ಅವನು ಮಾತ್ರವಾಗಿದ್ದಾನೆ. ಆದ್ದರಿಂದ ಅಲ್ಲಾಹನ ಹೊರತು ಆರಾಧಿಸಲಾಗುತ್ತಿರುವ ಆರಾಧ್ಯರಾರೂ ಸತ್ಯ ಆರಾಧ್ಯರಲ್ಲ ಮತ್ತು ಅವರೆಲ್ಲರೂ ಮಿಥ್ಯ ಆರಾಧ್ಯರಾಗಿದ್ದಾರೆ ಎಂಬುದನ್ನು ಈ ಮಹತ್ವ ಪೂರ್ಣವಾದ ವಚನವು ಒಳಗೊಂಡಿದೆ. ಯಾಕೆಂದರೆ ಅವರಾರೂ ಇಬಾದತ್‌ಗೆ ಅರ್ಹರಲ್ಲ.

ಈ ಕಾರಣದಿಂದಲೇ ಅಲ್ಲಾಹನಿಗೆ ಇಬಾದತ್ ಮಾಡಬೇಕೆಂದು ಆಜ್ಞಾಪಿಸಲಾಗಿರುವ ಹೆಚ್ಚಿನ ಕಡೆಗಳಲ್ಲೆಲ್ಲ ಅವನ ಹೊರತಾದವರ ಇಬಾದತ್ತನ್ನು ನಿಷೇಧಿಸಬೇಕೆಂಬುದನ್ನು ಜೊತೆಯಾಗಿ ಹೇಳಲಾಗಿದೆ. ಯಾಕೆಂದರೆ ಅಲ್ಲಾಹನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿ ಮಾಡಿಕೊಂಡು ಅಲ್ಲಾಹನಿಗೆ ಇಬಾದತ್ ಮಾಡಿದರೆ ಆ ಇಬಾದತ್ ಸಿಂಧುವಾಗಲಾರದು.

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿وَاعْبُدُوا اللَّهَ وَلَا تُشْرِكُوا بِهِ شَيْئًا﴾

**“ನೀವು ಅಲ್ಲಾಹನಿಗೆ ಇಬಾದತ್ ಮಾಡಿರಿ ಮತ್ತು ಅವನೊಂದಿಗೆ ಏನನ್ನೂ ಸಹಭಾಗಿಗಳನ್ನಾಗಿ ಮಾಡದಿರಿ.”** [21]

﴿فَمَنْ يَكْفُرْ بِالطَّاغُوتِ وَيُؤْمِنْ بِاللَّهِ فَقَدِ اسْتَمْسَكَ بِالْعُرْوَةِ الْوُثْقَى لَا انْفِصَامَ لَهَا وَاللَّهُ سَمِيعٌ عَلِيمٌ﴾

**“ಆದ್ದರಿಂದ ಯಾರು ತಾಗೂತ್‌ಗಳಲ್ಲಿ (ಮಿಥ್ಯಾರಾಧ್ಯರಲ್ಲಿ) ಅವಿಶ್ವಾಸವಿಟ್ಟು ಅಲ್ಲಾಹನಲ್ಲಿ ವಿಶ್ವಾಸವಿಡುತ್ತಾನೋ ಅವನು ಭದ್ರವಾದ ಹಗ್ಗವನ್ನು ಬಿಗಿಯಾಗಿ ಹಿಡಿದವನಾಗಿರುವನು. ಅದೆಂದೂ ಕಡಿದು ಹೋಗಲಾರದು. ಅಲ್ಲಾಹು ಎಲ್ಲವನ್ನೂ ಆಲಿಸುವವನೂ, ಅರಿಯುವವನೂ ಆಗಿರುವನು.”** [22]

﴿وَلَقَدْ بَعَثْنَا فِي كُلِّ أُمَّةٍ رَسُولًا أَنِ اعْبُدُوا اللَّهَ وَاجْتَنِبُوا الطَّاغُوتَ﴾

---

[21] ಸೂರಃ ಅನ್ನಿಸಾಅ್ 36

[22] ಸೂರಃ ಅಲ್‌ಬಕರಃ 256

**“ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ತಾಗೂತ್‌ಗಳನ್ನು (ಮಿಥ್ಯಾರಾಧ್ಯರನ್ನು) ವರ್ಜಿಸಿರಿ ಎಂಬ ಸಂದೇಶದೊಂದಿಗೆ ನಾವು ಪ್ರತಿಯೊಂದು ಸಮುದಾಯಕ್ಕೂ ಒಬ್ಬ ರಸೂಲರನ್ನು ಕಳುಹಿಸಿರುವೆವು.”** [23]

ಪ್ರವಾದಿ(ﷺ)ರವರು ಹೇಳುತ್ತಾರೆ:

« مَنْ قَالَ لَا إِلَهَ إِلَّا اللَّهُ وَكَفَرَ بِمَا يُعْبَدُ مِنْ دُونِ اللَّهِ حَرُمَ دَمُهُ وَمَالُهُ ».

**“ಯಾರು ಲಾ ಇಲಾಹ ಇಲ್ಲಲ್ಲಾಹ್ ಎಂದು ಉಚ್ಛರಿಸಿ ಅಲ್ಲಾಹನ ಹೊರತು ಆರಾಧಿಸಲಾಗುವ ಎಲ್ಲದರಲ್ಲೂ ಅವಿಶ್ವಾಸವಿಡುವುದಾದರೆ ಅವನ ರಕ್ತ ಮತ್ತು ಸಂಪತ್ತು ಪವಿತ್ರವಾಗಿದೆ.”** [24]

ಎಲ್ಲ ಪ್ರವಾದಿಗಳೂ ತಮ್ಮ ಜನತೆಯೊಂದಿಗೆ ಹೇಳುತ್ತಿದ್ದರು:

﴿اعْبُدُوا اللَّهَ مَا لَكُمْ مِنْ إِلَهٍ غَيْرُهُ﴾

**“ನೀವು ಅಲ್ಲಾಹನನ್ನು ಆರಾಧಿಸಿರಿ; ಅವನ ಹೊರತು ನಿಮಗೆ ಬೇರಾವ ಆರಾಧ್ಯನೂ ಇಲ್ಲ.”** [25]

ಇಂತಹ ಅನೇಕ ಪುರಾವೆಗಳನ್ನು ಕಾಣಬಹುದಾಗಿದೆ.

ಇಮಾಮ್ ಇಬ್ನ್ ರಜಬ್ ರಹಿಮಹುಲ್ಲಾಹ್ ಹೇಳುತ್ತಾರೆ:

---

[23] ಸೂರಃ ಅನ್ನಹ್ಲ್ 36
[24] ಮುಸ್ಲಿಮ್ 23; ಅಹ್ಮದ್ 6/394
[25] ಸೂರಃ ಅಲ್‌ಅಅ್‌ರಾಫ್ 59

وَتَحْقِيقُ هَذَا الْمَعْنَى وَإِيضَاحُهُ أَنَّ قَوْلَ الْعَبْدِ لَا إِلَهَ إِلَّا اللَّهُ يَقْتَضِي أَنْ لَا إِلَهَ لَهُ غَيْرَ اللَّهِ، وَالْإِلَهُ هُوَ الَّذِي يُطَاعُ فَلَا يُعْصَى هَيْبَةً لَهُ وَإِجْلَالًا، وَمَحَبَّةً، وَخَوْفًا، وَرَجَاءً، وَتَوَكُّلًا عَلَيْهِ، وَسُؤَالًا مِنْهُ، وَدُعَاءً لَهُ، وَلَا يَصْلُحُ ذَلِكَ كُلُّهُ إِلَّا لِلَّهِ عَزَّ وَجَلَّ.

**"ಒಬ್ಬ ವ್ಯಕ್ತಿ ಹೇಳುವ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನವು ಅವನಿಗೆ ಅಲ್ಲಾಹನ ಹೊರತು ಬೇರೆ ಆರಾಧ್ಯರು ಇರಬಾರದೆಂಬುದನ್ನು ಆವಶ್ಯಪಡುತ್ತದೆ ಎಂಬುದು ಈ ಅರ್ಥದ ಖಚಿತೀಕರಣ ಮತ್ತು ಸ್ಪಷ್ಟೀಕರಣವಾಗಿದೆ. ಆರಾಧ್ಯ ಎಂದರೆ ಭಯ, ಗೌರವ, ಪ್ರೀತಿ, ಹೆದರಿಕೆ ಮತ್ತು ನಿರೀಕ್ಷೆಯ ಮೂಲಕ, ಅವನ ಮೇಲೆ ತವಕ್ಕುಲ್ ಮಾಡುವ ಮೂಲಕ, ಅವನೊಂದಿಗೆ ಬೇಡುವ ಮೂಲಕ ಮತ್ತು ಅವನೊಂದಿಗೆ ಪ್ರಾರ್ಥಿಸುವ ಮೂಲಕ ಆಜ್ಞಾಪಾಲನೆ ಮಾಡಲ್ಪಡಬೇಕಾದವನು ಮತ್ತು ಆಜ್ಞೋಲ್ಲಂಘನೆ ಮಾಡಲ್ಪಡಬಾರದವನಾಗಿದ್ದಾನೆ. ಇವೆಲ್ಲವೂ ಅಲ್ಲಾಹನಿಗೆ ಹೊರತು ಇನ್ನಾರಿಗೂ ಸರಿಹೊಂದುವುದಿಲ್ಲ."**

ಈ ಕಾರಣದಿಂದಲೇ ಪ್ರವಾದಿ(ﷺ)ರವರು ಕುರೈಶೀ ಅವಿಶ್ವಾಸಿಗಳೊಂದಿಗೆ 'ನೀವು ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿರಿ' ಎಂದು ಹೇಳಿದಾಗ ಅವರು:

﴿أَجَعَلَ الْآلِهَةَ إِلَهًا وَاحِدًا إِنَّ هَذَا لَشَيْءٌ عُجَابٌ﴾

**"ಅವನು ಅನೇಕ ಅರಾಧ್ಯರನ್ನು ಒಂದೇ ಆರಾಧ್ಯವನ್ನಾಗಿ ಮಾಡಿದನೇ? ಖಂಡಿತವಾಗಿಯೂ ಇದೊಂದು ಅಚ್ಚರಿದಾಯಕ ವಿಷಯವಾಗಿದೆ."** [26] ಎನ್ನುತ್ತಿದ್ದರು.

[26] ಸೂರಃ ಸ್ವಾದ್ 5

ಈ ವಚನವು ವಿಗ್ರಹಾರಾಧನೆಗಳೆಲ್ಲವನ್ನೂ ನಿಷ್ಫಲಗೊಳಿಸುತ್ತದೆ ಮತ್ತು ಆರಾಧನೆಯನ್ನು ಅಲ್ಲಾಹನಿಗೆ ಮಾತ್ರ ಸೀಮಿತಗೊಳಿಸುತ್ತದೆಯೆಂದು ಅವರು ಈ ವಚನದಿಂದ ಅರ್ಥ ಮಾಡಿಕೊಂಡಿದ್ದರು. ಆದರೆ ಅವರು ಅದನ್ನು ಬಯಸುತ್ತಿರಲಿಲ್ಲ. 'ಲಾ ಇಲಾಹ ಇಲ್ಲಲ್ಲಾಹ್' ಎಂಬುದರ ಅರ್ಥ ಮತ್ತು ಅದರ ಆವಶ್ಯಕತೆಯು ಆರಾಧನೆಯಲ್ಲಿ ಅಲ್ಲಾಹನನ್ನು ಏಕೈಕಗೊಳಿಸಬೇಕು ಮತ್ತು ಅವನ ಹೊರತಾದವರನ್ನು ಆರಾಧಿಸುವುದನ್ನು ತೊರೆಯಬೇಕು ಎಂಬುದಾಗಿದೆಯೆಂದು ಇದರಿಂದ ಸ್ಪಷ್ಟವಾಗುತ್ತದೆ.

ಒಬ್ಬ ವ್ಯಕ್ತಿ 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳುವಾಗ ಅವನು ತನ್ಮೂಲಕ ಆರಾಧನೆಯ ವಿಷಯದಲ್ಲಿ ಅಲ್ಲಾಹನನ್ನು ಏಕೈಕಗೊಳಿಸುವುದು ಕಡ್ಡಾಯವಾಗಿದೆ ಮತ್ತು ಅವನ ಹೊರತಾದವರನ್ನು, ಗೋರಿಗಳನ್ನು, ಔಲಿಯಾಗಳನ್ನು ಮತ್ತು ಸಜ್ಜನರನ್ನು ಆರಾಧಿಸುವುದು ನಿಷ್ಫಲವಾಗಿದೆಯೆಂದು ಘೋಷಿಸುತ್ತಾನೆ. ಇಂದಿನ ಕಾಲದ ಗೋರಿಯಾರಾಧಕರು ಹಾಗೂ ಮತ್ತಿತರರು ವಿಶ್ವಾಸವಿಡುವಂತೆ 'ಲಾ ಇಲಾಹ ಇಲ್ಲಲ್ಲಾಹ್' ಎಂದರೆ ಅದರ ಅರ್ಥವು ಅಲ್ಲಾಹು ಅಸ್ತಿತ್ವದಲ್ಲಿದ್ದಾನೆ ಎಂದಾಗಿದೆಯೆಂಬುದು ಇದರಿಂದ ಸುಳ್ಳಾಗುತ್ತದೆ. ಅಥವಾ ಅದರ ಅರ್ಥವು ಅಲ್ಲಾಹು ಸೃಷ್ಟಿಕರ್ತನಾಗಿದ್ದಾನೆ ಮತ್ತು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ ಎಂದಾಗಿದೆ ಎಂಬ ಅರ್ಥವೂ ಸುಳ್ಳಾಗುತ್ತದೆ.

ಅಥವಾ ಅದರ ಅರ್ಥವು 'ಲಾ ಹಾಕಿಮಿಯ್ಯತ ಇಲ್ಲಾ ಲಿಲ್ಲಾಹ್' (ಕಾನೂನುಗಳನ್ನು ರಚಿಸುವ ಮತ್ತು ತೀರ್ಪು ನೀಡುವ ಅಧಿಕಾರ ಅಲ್ಲಾಹನಿಗೆ ಹೊರತು ಬೇರಾರಿಗೂ ಇಲ್ಲ) ಎಂಬ ಅರ್ಥವೂ ಸುಳ್ಳಾಗುತ್ತದೆ. ಯಾರಾದರೂ ಹೀಗೆ ವಿಶ್ವಾಸವಿಟ್ಟರೆ ಮತ್ತು 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನವನ್ನು ಹೀಗೆ ವ್ಯಾಖ್ಯಾನಿಸಿದರೆ, –ಒಂದು ವೇಳೆ ಅಲ್ಲಾಹೇತರರನ್ನು ಆರಾಧಿಸುವುದು, ಮೃತರು ಸಹಾಯ ಮಾಡುತ್ತಾರೆಂಬ ನಂಬಿಕೆಯನ್ನು ಇಟ್ಟುಕೊಳ್ಳುವುದು, ಬಲಿ ಹರಕೆಗಳ ಮೂಲಕ, ಅವರ ಗೋರಿಗಳನ್ನು ತವಾಫ್ ಮಾಡುವ ಮೂಲಕ, ಗೋರಿಯ ಮಣ್ಣಿನಿಂದ ಬರಕತ್ ಪಡೆಯುವ ಮೂಲಕ ಅವರಿಗೆ (ಮೃತರಿಗೆ)

ಹತ್ತಿರವಾಗುವುದು ಮೊದಲಾದವುಗಳನ್ನು ಮಾಡಿದರೂ ಸಹ– ಅವನು ಅನಿರ್ಬಂಧಿತವಾದ ತೌಹೀದನ್ನು ನೈಜೀಕರಿಸಿದ್ದಾನೆ ಎಂದು ಅವರು ಭಾವಿಸುತ್ತಾರೆ. ಈ ವಿಶ್ವಾಸದಲ್ಲಿ ಪೂರ್ವಕಾಲದ ಅರಬ್ ಅವಿಶ್ವಾಸಿಗಳು ಕೂಡ ಇವರೊಂದಿಗೆ ಸಹಭಾಗಿಗಳಾಗಿದ್ದಾರೆಂಬ ಬಗ್ಗೆ ಇವರ ತಿಳುವಳಿಕೆಯೇನು? ಅಲ್ಲಾಹು ಸೃಷ್ಟಿಕರ್ತನಾಗಿದ್ದಾನೆ ಮತ್ತು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆಂದು ಅವರು ಅರಿತಿದ್ದರು ಮತ್ತು ಅದನ್ನು ಅಂಗೀಕರಿಸಿದ್ದರು. ಅವರು ಅಲ್ಲಾಹೇತರರನ್ನು ಆರಾಧಿಸಿದ್ದು ಅವರು ಅವರನ್ನು ಅಲ್ಲಾಹನಿಗೆ ಹತ್ತಿರಗೊಳಿಸುತ್ತಾರೆ ಎಂಬ ವಾದದಿಂದಾಗಿತ್ತೇ ವಿನಾ ಅವರು ಸೃಷ್ಟಿಸುತ್ತಾರೆ ಮತ್ತು ಅನ್ನಾಧಾರ ಒದಗಿಸುತ್ತಾರೆ ಎಂಬುದರಿಂದಾಗಿರಲಿಲ್ಲ. ಹಾಕಿಮಿಯ್ಯತ್ ಎಂಬುದು 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನದ ಅರ್ಥದ ಒಂದು ಭಾಗವಾಗಿದೆಯೇ ಹೊರತು ಅದರಿಂದ ಉದ್ದೇಶಿಸಲಾಗುವ ನೈಜ ಅರ್ಥವಲ್ಲ. ಆರಾಧನೆಯಲ್ಲಿ ಶಿರ್ಕ್ ಮಾಡುತ್ತಾ ಹಕ್ಕುಗಳ ವಿಷಯದಲ್ಲಿ, ಮೇರೆಗಳ ವಿಷಯದಲ್ಲಿ, ತರ್ಕಗಳ ವಿಷಯದಲ್ಲಿ ಶರೀಅತ್ತಿನ ಪ್ರಕಾರ ತೀರ್ಪು ನೀಡಿದರೆ ಸಾಕಾಗಲಾರದು.

ಒಂದು ವೇಳೆ 'ಲಾ ಇಲಾಹ ಇಲ್ಲಲ್ಲಾಹ್' ಎಂಬುದರ ಅರ್ಥವು ಇವರು ವಾದಿಸುವ ಪ್ರಕಾರವಾಗಿರುತ್ತಿದ್ದರೆ ಪ್ರವಾದಿ(ﷺ)ರವರ ಮತ್ತು ಮಕ್ಕಾ ಮುಶ್ರಿಕ್‌ಗಳ ಮಧ್ಯೆ ಯಾವುದೇ ತರ್ಕವಿರುತ್ತಿರಲಿಲ್ಲ. ಬದಲಾಗಿ ಪ್ರವಾದಿ(ﷺ)ರವರು ಅವರೊಂದಿಗೆ: ಅಲ್ಲಾಹು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದವನಾಗಿದ್ದಾನೆ ಎಂಬುದನ್ನು ಅಂಗೀಕರಿಸಿರಿ, ಅಥವಾ ಅಲ್ಲಾಹು ಅಸ್ತಿತ್ವದಲ್ಲಿದ್ದಾನೆ ಎಂಬುದನ್ನು ಅಂಗೀಕರಿಸಿರಿ ಎಂದು ಹೇಳುವಾಗ, ಅಥವಾ ಪ್ರವಾದಿ(ﷺ)ರವರು ಅವರೊಂದಿಗೆ: ರಕ್ತದ ವಿಷಯದಲ್ಲಿ, ಸಂಪತ್ತಿನ ವಿಷಯದಲ್ಲಿ, ಹಕ್ಕುಗಳ ವಿಷಯದಲ್ಲಿ ಶರೀಅತ್ತಿನ ಪ್ರಕಾರ ತೀರ್ಪು ನೀಡಿರಿ ಎಂದು ಹೇಳಿ ಆರಾಧನೆಯ ವಿಷಯದ ಬಗ್ಗೆ ಮೌನ ತಾಳಿದ್ದರೆ ಅವರು ಪ್ರವಾದಿ(ﷺ)ರವರ ಕರೆಗೆ ಉತ್ತರ ನೀಡಲು ಧಾವಿಸಿ ಬರುತ್ತಿದ್ದರು. ಆದರೆ ಆ ಜನರು, ಅವರು ಅರಬಿ ಭಾಷೆಯ

ಜನರಾಗಿದ್ದ ಕಾರಣ, ತಾವು ‘ಲಾ ಇಲಾಹ ಇಲ್ಲಲ್ಲಾಹ್’ ಎಂದು ಹೇಳಿದರೆ, ತಾವು ಮಾಡುತ್ತಿರುವ ವಿಗ್ರಹಾರಾಧನೆಯು ನಿಷ್ಫಲವಾಗಿದೆಯೆಂಬುದನ್ನು ಅಂಗೀಕರಿಸಿದವರಾಗುವೆವು ಮತ್ತು ಈ ವಚನವು ಬಾಯಿ ಮೂಲಕ ಉಚ್ಚರಿಸುವ ಅರ್ಥಶೂನ್ಯವಾದ ವಾಕ್ಯವಲ್ಲವೆಂಬುದನ್ನು ಅರ್ಥ ಮಾಡಿಕೊಂಡಿದ್ದರು. ಆದ್ದರಿಂದಲೇ ಅವರು ‘ಲಾ ಇಲಾಹ ಇಲ್ಲಲ್ಲಾಹ್’ ದಿಂದ ದೂರ ಓಡುತ್ತಾ ಹೀಗೆನ್ನುತ್ತಿದ್ದರು:

﴿أَجَعَلَ الْآلِهَةَ إِلَهًا وَاحِدًا إِنَّ هَذَا لَشَيْءٌ عُجَابٌ﴾

**“ಅವನು ಅನೇಕ ಅರಾಧ್ಯರನ್ನು ಒಂದೇ ಆರಾಧ್ಯವನ್ನಾಗಿ ಮಾಡಿದನೇ? ಖಂಡಿತವಾಗಿಯೂ ಇದೊಂದು ಅಚ್ಚರಿದಾಯಕ ವಿಷಯವಾಗಿದೆ.”** [27]

ಅವರ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿إِنَّهُمْ كَانُوا إِذَا قِيلَ لَهُمْ لَا إِلَهَ إِلَّا اللَّهُ يَسْتَكْبِرُونَ * وَيَقُولُونَ أَئِنَّا لَتَارِكُو آلِهَتِنَا لِشَاعِرٍ مَجْنُونٍ﴾

**“ಖಂಡಿತವಾಗಿಯೂ ಅವರು, ಅವರೊಂದಿಗೆ ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಲಾದರೆ ಅಹಂಕಾರ ಪಡುವವರಾಗಿದ್ದರು. ಒಬ್ಬ ಹುಚ್ಚನಾದ ಕವಿಗೋಸ್ಕರ ನಾವು ನಮ್ಮ ಆರಾಧ್ಯರನ್ನು ಕೈಬಿಡುವವರಾಗುವೆವೇ ಎಂದು ಅವರು ಹೇಳುತ್ತಿದ್ದರು.”** [28]

‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ವಚನವು ಅಲ್ಲಾಹೇತರರ ಆರಾಧನೆ ಮಾಡುವುದನ್ನು ತೊರೆಯಬೇಕು ಮತ್ತು ಆರಾಧನೆಯಲ್ಲಿ ಅಲ್ಲಾಹನನ್ನು

---

27 ಸೂರಃ ಸ್ವಾದ್ 5

28 ಸೂರಃ ಅಸ್ಸಾಫ್ಫಾತ್ 35–36

ಐಕ್ಯೈಕಗೊಳಿಸಬೇಕು ಎಂಬುದನ್ನು ಆವಶ್ಯಪಡುತ್ತದೆಯೆಂಬುದನ್ನು ಅವರು ಅರಿತಿದ್ದರು. ಒಂದು ವೇಳೆ ಅವರು ಅದನ್ನು ಉಚ್ಛರಿಸಿ ವಿಗ್ರಹಾರಾಧನೆಯನ್ನು ಮುಂದುವರಿಸಿದರೆ ಅವರು ಸ್ವತಃ ಅವರೊಂದಿಗೇ ವಿರೋಧಾಭಾಸ ತೋರಿಸುತ್ತಿದ್ದರು. ಆದರೆ ಅವರು ವಿರೋಧಾಭಾಸವನ್ನು ಅಸಹ್ಯಪಡುತ್ತಿದ್ದರು. ಆದರೆ ಇಂದಿನ ಗೋರಿಯಾರಾಧಕರು ಈ ಹೇಯ ವಿರೋಧಾಭಾಸವನ್ನು ಅಸಹ್ಯಪಡುವುದಿಲ್ಲ. ಅವರು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳುತ್ತಾರೆ. ತರುವಾಯ ಮೃತರನ್ನು ಆರಾಧಿಸುವ ಮೂಲಕ, ವಿವಿಧ ಆರಾಧನೆಗಳನ್ನು ಸಲ್ಲಿಸಿ ದರ್ಗಾಗಳಿಗೆ ಹತ್ತಿರವಾಗುವ ಮೂಲಕ ಈ ವಚನವನ್ನು ಉಲ್ಲಂಘಿಸುತ್ತಾರೆ. 'ಲಾ ಇಲಾಹ ಇಲ್ಲಲ್ಲಾಹ್'ನ ಬಗ್ಗೆ ಯಾವ ಜನರಿಗಿಂತಲೂ ಅಬೂ ಜಹ್ಲ್ ಮತ್ತು ಅಬೂ ಲಹಬ್ ಹೆಚ್ಚು ಅರಿವುಳ್ಳವರಾಗಿದ್ದರೋ ಅಂತಹ ಜನರಿಗೆ ನಾಶವಿರಲಿ.

ಒಟ್ಟಿನಲ್ಲಿ, ಯಾರು ಈ ವಚನವನ್ನು, ಅದರ ಅರ್ಥವನ್ನು ಅರಿತುಕೊಂಡು ಉಚ್ಛರಿಸಿ, ಶಿರ್ಕನ್ನು ನಿಷೇಧಿಸುವುದು ಹಾಗೂ ಈ ವಚನವು ಏನನ್ನು ಒಳಗೊಂಡಿದೆಯೋ ಅದರಲ್ಲಿ ದೃಢವಾಗಿ ವಿಶ್ವಾಸವಿಡುವುದರೊಂದಿಗೆ ಆರಾಧನೆಗಳೆಲ್ಲವನ್ನೂ ಅಲ್ಲಾಹನಿಗೆ ಮಾತ್ರ ದೃಢೀಕರಿಸುವುದು ಮತ್ತು ಅದರ ಪ್ರಕಾರ ಕರ್ಮವೆಸಗುವುದು ಮೊದಲಾದ ಅದರ ಆವಶ್ಯಕತೆಗಳ ಪ್ರಕಾರ ಬಾಹ್ಯವಾಗಿಯೂ ಆಂತರಿಕವಾಗಿಯೂ ಕರ್ಮವೆಸಗುತ್ತಾನೋ ಅವನು ನೈಜ ಮುಸಲ್ಮಾನನಾಗಿದ್ದಾನೆ. ಯಾರು ಇದನ್ನು ಉಚ್ಛರಿಸಿ, ಅದು ಏನನ್ನು ಸೂಚಿಸುತ್ತದೋ ಅದರಲ್ಲಿ ವಿಶ್ವಾಸವಿಡದೆ ಬಾಹ್ಯವಾಗಿ ಅದರ ಪ್ರಕಾರ ಮತ್ತು ಅದು ಆವಶ್ಯಪಡುವ ಪ್ರಕಾರ ಕರ್ಮವೆಸಗುತ್ತಾನೋ ಅವನು ಮುನಾಫಿಕ್ (ಕಪಟವಿಶ್ವಾಸಿ) ಆಗಿದ್ದಾನೆ. ಯಾರು ಇದನ್ನು ತನ್ನ ನಾಲಗೆಯ ಮೂಲಕ ಉಚ್ಛರಿಸಿ, ಅದನ್ನು ನಿಷೇಧಿಸುವ ಶಿರ್ಕ್ ಇತ್ಯಾದಿಗಳ ಮೂಲಕ ಅದಕ್ಕೆ ವಿರುದ್ಧವಾಗಿ ಕರ್ಮವೆಸಗುತ್ತಾನೋ ಅವನು ವಿರೋಧಾಭಾಸ ಪ್ರಕಟಿಸುವ ಮುಶ್ರಿಕ್ ಆಗಿದ್ದಾನೆ. ಈ ವಚನವನ್ನು ಉಚ್ಛರಿಸುವುದರೊಂದಿಗೆ ಅದರ

ಅರ್ಥವನ್ನು ಅರಿತುಕೊಳ್ಳುವುದು ಅನಿವಾರ್ಯವಾಗಿದೆ. ಯಾಕೆಂದರೆ ಅದು ಅದರ ಆವಶ್ಯಕತೆಗಳ ಪ್ರಕಾರ ಕರ್ಮವೆಸಗುವುದಕ್ಕಿರುವ ಮಾಧ್ಯಮವಾಗಿದೆ.

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿إِلَّا مَنْ شَهِدَ بِالْحَقِّ وَهُمْ يَعْلَمُونَ﴾

**“ಅರಿತವರಾಗಿರುತ್ತಾ ಸತ್ಯದೊಂದಿಗೆ ಸಾಕ್ಷಿವಹಿಸಿದವರ ಹೊರತು.”** [29]

ಇದರ ಪ್ರಕಾರ ಕರ್ಮವೆಸಗುವುದು ಎಂದರೆ ಅಲ್ಲಾಹನನ್ನು ಆರಾಧಿಸುವುದು ಮತ್ತು ಅವನ ಹೊರತಾದವರ ಆರಾಧನೆಯನ್ನು ನಿಷೇಧಿಸುವುದಾಗಿದೆ. ಇದು ಈ ವಚನದ ಆತ್ಯಂತಿಕ ಉದ್ದೇಶವಾಗಿದೆ. ಆರಾಧನೆಗಳ ವಿಷಯದಲ್ಲಿ, ವ್ಯವಹಾರಗಳ ವಿಷಯದಲ್ಲಿ, ಹಲಾಲ್‌ಗೊಳಿಸುವ ವಿಷಯದಲ್ಲಿ, ಹರಾಮ್‌ಗೊಳಿಸುವ ವಿಷಯದಲ್ಲಿ ಅಲ್ಲಾಹನ ಕಾನೂನನ್ನು ಸ್ವೀಕರಿಸುವುದು ಮತ್ತು ಅವನ ಹೊರತಾದವರ ಕಾನೂನನ್ನು ನಿರಾಕರಿಸುವುದು ಕೂಡ ಇದರ ಆವಶ್ಯಕತೆಗಳಲ್ಲಿ ಸೇರಿದ್ದಾಗಿದೆ.

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿أَمْ لَهُمْ شُرَكَاءُ شَرَعُوا لَهُمْ مِنَ الدِّينِ مَا لَمْ يَأْذَنْ بِهِ اللَّهُ﴾

**“ಅಲ್ಲಾಹನ ಅನುಮತಿಯಿಲ್ಲದೆ ಧರ್ಮದಲ್ಲಿ ಕಾನೂನು ನಿರ್ಮಿಸುವ ಸಹಭಾಗಿಗಳು ಅವರಿಗಿದ್ದಾರೋ?”** [30]

[29] ಸೂರಃ ಅಝ್ಝುಖ್ರುಫ್ 86
[30] ಸೂರಃ ಅಶ್ಶೂರಾ 21

ಆದ್ದರಿಂದ ಇಬಾದತ್‌ಗಳ ವಿಷಯದಲ್ಲಿ, ವ್ಯವಹಾರಗಳ ವಿಷಯದಲ್ಲಿ, ಜನರ ಮಧ್ಯೆ ಅವರು ಭಿನ್ನಾಭಿಪ್ರಾಯ ಹೊಂದಿರುವ ಖಾಸಗಿ ಸ್ಥಿತಿಗಳಲ್ಲಿ ಮತ್ತು ಇತರ ಸ್ಥಿತಿಗಳಲ್ಲಿ ತೀರ್ಪು ನೀಡುವ ವಿಷಯದಲ್ಲಿ ಅಲ್ಲಾಹನ ಕಾನೂನನ್ನು ಸ್ವೀಕರಿಸುವುದು ಮತ್ತು ಸಾಂಪ್ರದಾಯಿಕ ಕಾನೂನುಗಳನ್ನು ನಿರಾಕರಿಸುವುದು ಅತ್ಯಾವಶ್ಯಕವಾಗಿದೆ. ಇದರ ಅರ್ಥವು ಮನುಷ್ಯರಲ್ಲಿರುವ ಮತ್ತು ಜಿನ್ನ್‌ಗಳಲ್ಲಿ ರುವ ಶೈತಾನರು ಹೊಸದಾಗಿ ನಿರ್ಮಿಸಿ ಪ್ರಚಾರ ಮಾಡುವ ಎಲ್ಲ ಬಿದ್‌ಅತ್ ಮತ್ತು ಖುರಾಫಾತ್‌ಗಳನ್ನು ನಿರಾಕರಿಸುವುದಾಗಿದೆ. ಯಾರಾದರೂ ಅವುಗಳ ಪೈಕಿ ಏನನ್ನಾದರೂ ಸ್ವೀಕರಿಸಿದರೆ ಅವನು ಮುಶ್ರಿಕ್ ಆಗಿದ್ದಾನೆ. ಅಲ್ಲಾಹು ಈ ಆಯತ್ತಿನಲ್ಲಿ ಹೇಳಿದಂತೆ:

﴿أَمْ لَهُمْ شُرَكَاءُ شَرَعُوا لَهُمْ مِنَ الدِّينِ مَا لَمْ يَأْذَنْ بِهِ اللَّهُ﴾

**“ಅಲ್ಲಾಹನ ಅನುಮತಿಯಿಲ್ಲದೆ ಧರ್ಮದಲ್ಲಿ ಕಾನೂನು ನಿರ್ಮಿಸುವ ಸಹಭಾಗಿಗಳು ಅವರಿಗಿದ್ದಾರೋ?”** [31]

ಮತ್ತು ಅತ್ಯುನ್ನತನಾದ ಅವನು ಹೇಳುತ್ತಾನೆ:

﴿وَإِنْ أَطَعْتُمُوهُمْ إِنَّكُمْ لَمُشْرِكُونَ ﴾

**“ನೀವೇನಾದರೂ ಅವರ ಆಜ್ಞಾಪಾಲನೆ ಮಾಡಿದರೆ ಖಂಡಿತವಾಗಿಯೂ ನೀವೂ ಮುಶ್ರಿಕರಾಗಿರುವಿರಿ.”** [32]

ಅಲ್ಲಾಹು ಹೇಳುತ್ತಾನೆ:

﴿اتَّخَذُوا أَحْبَارَهُمْ وَرُهْبَانَهُمْ أَرْبَابًا مِنْ دُونِ اللَّهِ﴾

[31] ಸೂರಃ ಅಶ್ಶೂರಾ 21
[32] ಸೂರಃ ಅಲ್‌ಅನ್‌ಆಮ್ 121

**“ಅವರು ತಮ್ಮ ಪುರೋಹಿತರನ್ನು ಮತ್ತು ಸನ್ಯಾಸಿಗಳನ್ನು ಅಲ್ಲಾಹನ ಹೊರತಾಗಿರುವ ರಬ್ಬ್‌ಗಳನ್ನಾಗಿ ಮಾಡಿಕೊಂಡರು.”** [33]

ಸಹೀಹಾದ ಹದೀಸಿನಲ್ಲಿರುವ ಪ್ರಕಾರ ಪ್ರವಾದಿ(ﷺ)ರವರು ಈ ಆಯತ್ತನ್ನು ಅದೀ ಇಬ್ನ್ ಹಾತಿಮ್ ಅತ್ತಾಈಗೆ ಓದಿಕೊಟ್ಟಾಗ ಅವರು ಹೇಳಿದರು: “ಓ ಅಲ್ಲಾಹನ ರಸೂಲರೇ, ನಾವು ಅವರನ್ನು ಆರಾಧಿಸುತ್ತಿರಲಿಲ್ಲ.” ಆಗ ಪ್ರವಾದಿ(ﷺ)ರವರು ಕೇಳಿದರು:

« أَلَيْسَ يُحِلُّونَ لَكُمْ مَا حَرَّمَ اللَّهُ فَتُحِلُّونَهُ، وَيُحَرِّمُونَ مَا أَحَلَّ اللَّهُ فَتُحَرِّمُونَهُ؟ »

**“ಅಲ್ಲಾಹು ಹರಾಮ್‌ಗೊಳಿಸಿರುವುದನ್ನು ಅವರು ನಿಮಗೆ ಹಲಾಲ್‌ಗೊಳಿಸಿದಾಗ ನೀವು ಅದನ್ನು ಹಲಾಲ್ ಎಂದು ಪರಿಗಣಿಸುತ್ತಿರಲಿಲ್ಲವೇ? ಮತ್ತು ಅಲ್ಲಾಹು ಹಲಾಲ್‌ಗೊಳಿಸಿರುವುದನ್ನು ಅವರು ನಿಮಗೆ ಹರಾಮ್‌ಗೊಳಿಸಿದಾಗ ನೀವು ಅದನ್ನು ಹರಾಮ್ ಎಂದು ಪರಿಗಣಿಸುತ್ತಿರಲಿಲ್ಲವೇ?”**

ಅದೀ ಇಬ್ನ್ ಹಾತಿಮ್ ಹೌದೆಂದರು. ಆಗ ಪ್ರವಾದಿ(ﷺ)ರವರು ಹೇಳಿದರು:

« فَتِلْكَ عِبَادَتُهُمْ ».

**“ಅದು ಅವರಿಗಿರುವ ಆರಾಧನೆಯಾಗಿದೆ.”** [34]

ಅಶ್ಶೈಖ್ ಅಬ್ದುರ್ರಹ್ಮಾನ್ ಇಬ್ನ್ ಹಸನ್ ರಹಿಮಹುಲ್ಲಾಹ್ ಹೇಳುತ್ತಾರೆ:

---

[33] ಸೂರಃ ಅತ್ತೌಬಃ 31

[34] ಅತ್ತಿರ್ಮಿದೀ 3095

فَصَارَتْ طَاعَتُهُمْ فِي الْمَعْصِيَةِ عِبَادَةً لِغَيْرِ اللَّهِ وَبِهَا اتَّخَذُوهُمْ أَرْبَابًا كَمَا هُوَ الْوَاقِعُ فِي هَذِهِ الْأُمَّةِ، وَهَذَا مِنَ الشِّرْكِ الْأَكْبَرِ الْمُنَافِي لِلتَّوْحِيدِ الَّذِي هُوَ مَدْلُولُ شَهَادَةِ أَنْ لَا إِلَهَ إِلَّا اللَّهُ... فَتَبَيَّنَ أَنَّ كَلِمَةَ الْإِخْلَاصِ نَفَتْ هَذَا كُلَّهُ لِمُنَافَاتِهِ لِمَدْلُولِ هَذِهِ الْكَلِمَةِ.

**"ಆಜ್ಞೋಲ್ಲಂಘನೆಗಳ ವಿಷಯದಲ್ಲಿ ಅವರು ಮಾಡಿದ ಆಜ್ಞಾಪಾಲನೆಯು ಅಲ್ಲಾಹೇತರರಿಗಿರುವ ಆರಾಧನೆಯಾಗಿ ಮಾರ್ಪಟ್ಟಿತು. ಇದರ ಮೂಲಕ ಅವರು ತಮ್ಮ ಪುರೋಹಿತರನ್ನು ರಬ್‌ಗಳನ್ನಾಗಿ ಮಾಡಿಕೊಂಡರು. ಈ ಸ್ಥಿತಿಯು ಈ ಸಮುದಾಯದಲ್ಲೂ ಅಸ್ತಿತ್ವದಲ್ಲಿದೆ. ಇದು 'ಲಾ ಇಲಾಹ ಇಲ್ಲಲ್ಲಾಹ್' ಎಂಬ ಸಾಕ್ಷ್ಯವು ಸೂಚಿಸುವ ತೌಹೀದನ್ನು ನಿಷೇಧಿಸುವ ಹಿರಿಯ ಶಿರ್ಕ್‌ನಲ್ಲಿ ಸೇರಿದ್ದಾಗಿದೆ... ಆದ್ದರಿಂದ ನಿಷ್ಕಳಂಕತೆಯ ವಚನವು ಇದೆಲ್ಲವನ್ನೂ, ಇದು ಈ ವಚನವು ಸೂಚಿಸುವುದನ್ನು ನಿಷೇಧಿಸಿದ ಕಾರಣ, ಇದೆಲ್ಲವನ್ನೂ ನಿಷೇಧಿಸುತ್ತದೆಯೆಂದು ಇದರಿಂದ ಸ್ಪಷ್ಟವಾಗುತ್ತದೆ."**

ಅದೇ ರೀತಿ ತೀರ್ಪಿಗಾಗಿ ಕಾನೂನುಗಳೆಡೆಗೆ ಹೊರಳುವುದನ್ನು ನಿರಾಕರಿಸುವುದು ಕೂಡ ಕಡ್ಡಾಯವಾಗಿದೆ. ಯಾಕೆಂದರೆ ತೀರ್ಪಿಗಾಗಿ ಅಲ್ಲಾಹನ ಗ್ರಂಥದೆಡೆಗೆ ಹೊರಳುವುದು ಮತ್ತು ಅದರ ಹೊರತಾದ ವ್ಯವಸ್ಥೆ ಹಾಗೂ ಮಾನವ ನಿರ್ಮಿತ ಕಾನೂನುಗಳನ್ನು ತೊರೆಯುವುದು ಕಡ್ಡಾಯವಾಗಿದೆ.

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿فَإِنْ تَنَازَعْتُمْ فِي شَيْءٍ فَرُدُّوهُ إِلَى اللَّهِ وَالرَّسُولِ﴾

**“ಯಾವುದಾದರೂ ವಿಷಯದಲ್ಲಿ ನಿಮ್ಮ ಮಧ್ಯೆ ಭಿನ್ನಾಭಿಪ್ರಾಯವುಂಟಾದರೆ ಅದನ್ನು ಅಲ್ಲಾಹನೆಡೆಗೆ ಮತ್ತು ರಸೂಲರೆಡೆಗೆ ಮರಳಿಸಿರಿ.”** [35]

﴿وَمَا اخْتَلَفْتُمْ فِيهِ مِنْ شَيْءٍ فَحُكْمُهُ إِلَى اللَّهِ ذَلِكُمُ اللَّهُ رَبِّي﴾

**“**ನೀವು ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿದರೂ ಅದಕ್ಕಿರುವ ತೀರ್ಪು ಅಲ್ಲಾಹನೆಡೆಗಾಗಿದೆ. ಆ ಅಲ್ಲಾಹು ನನ್ನ ರಬ್ಬ್ ಆಗಿದ್ದಾನೆ.**”** [36]

ಅಲ್ಲಾಹು ಅವತೀರ್ಣಗೊಳಿಸಿದ ಪ್ರಕಾರ ತೀರ್ಪು ನೀಡದವರನ್ನು ಅಲ್ಲಾಹು ಕಾಫಿರ್, ಝಾಲಿಮ್ ಮತ್ತು ಫಾಸಿಕ್ ಎಂದು ವಿಧಿ ನೀಡಿರುವುದು ಮತ್ತು ಅವರ ವಿಶ್ವಾಸವನ್ನು ನಿಷೇಧಿಸಿರುವುದು ಸೂಚಿಸುವ ಪ್ರಕಾರ ಅಲ್ಲಾಹು ಅವತೀರ್ಣಗೊಳಿಸಿದ ಪ್ರಕಾರವಲ್ಲದೆ ತೀರ್ಪು ನೀಡುವಾಗ, ತೀರ್ಪು ನೀಡುವವನು ಹಾಗೆ ತೀರ್ಪು ನೀಡುವುದು ಧರ್ಮಸಮ್ಮತವೆಂದು ನಂಬುವುದಾದರೆ, ಅಥವಾ ಆ ತೀರ್ಪು ಅಲ್ಲಾಹನ ತೀರ್ಪಿಗಿಂತಲೂ ಉತ್ತಮವೆಂದು ಭಾವಿಸುವುದಾದರೆ, ಅದು ತೌಹೀದನ್ನು ನಿಷೇಧಿಸುವ ಮತ್ತು ‘ಲಾ ಇಲಾಹ ಇಲ್ಲಲ್ಲಾಹ್’ ದೊಂದಿಗೆ ಪೂರ್ಣ ವಿರೋಧಾಭಾಸವನ್ನು ಪ್ರಕಟಿಸುವ ಕುಫ್ರ್ ಮತ್ತು ಶಿರ್ಕ್ ಆಗಿದೆ. ಇನ್ನು ಅವನು ಅದನ್ನು ಧರ್ಮಸಮ್ಮತವೆಂದು ನಂಬುವುದಿಲ್ಲ ಮತ್ತು ಅಲ್ಲಾಹನ ತೀರ್ಪಿನ ಪ್ರಕಾರ ತೀರ್ಪು ನೀಡಬೇಕಾದುದು ಕಡ್ಡಾಯವಾಗಿದೆ ಎಂದು ವಿಶ್ವಾಸವಿಡುತ್ತಾನೆ ಹಾಗೂ ಅವನ ದೇಹೇಚ್ಛೆಯು ಅದಕ್ಕೆ ವಿರುದ್ಧವಾಗಿ ಸಾಗುವಂತೆ ಅವನನ್ನು ಪ್ರೇರೇಪಿಸಿದೆ ಎಂದಾದರೆ ಅದು ‘ಲಾ ಇಲಾಹ ಇಲ್ಲಲ್ಲಾಹ್’ ದ ಅರ್ಥವನ್ನು ಮತ್ತು ಅದರ ಆವಶ್ಯಕತೆಯನ್ನು ನಿರರ್ಥಕಗೊಳಿಸುವ ಕಿರಿಯ ಕುಫ್ರ್ ಮತ್ತು ಕಿರಿಯ ಶಿರ್ಕ್ ಆಗಿದೆ.

[35] ಸೂರಃ ಅನ್ನಿಸಾಅ್ 59

[36] ಸೂರಃ ಅಶ್ಶೂರಾ 10

ಆದ್ದರಿಂದ 'ಲಾ ಇಲಾಹ ಇಲ್ಲಲ್ಲಾಹ್' ಎಂಬುದು ಮುಸ್ಲಿಮರ ಬದುಕನ್ನು, ಅವರ ಆರಾಧನೆಗಳನ್ನು ಮತ್ತು ಕಾರ್ಯ ಚಟುವಟಿಕೆಗಳನ್ನು ಕಡ್ಡಾಯವಾಗಿ ನಿಯಂತ್ರಿಸುತ್ತಿರಬೇಕಾದ ಒಂದು ಸಂಪೂರ್ಣ ಮನ್‌ಹಜ್ ಆಗಿದೆ. ಈ ವಚನವನ್ನು ತಮ್ಮ ಬಾಯಿ ಮೂಲಕ ಉಚ್ಚರಿಸುತ್ತಿರುವ ಮತ್ತು ತಮ್ಮ ವಿಶ್ವಾಸಗಳಲ್ಲಿ ಹಾಗೂ ಕಾರ್ಯ ಚಟುವಟಿಕೆಗಳಲ್ಲಿ ಇದಕ್ಕೆ ವಿರುದ್ಧವಾಗಿ ಸಾಗುತ್ತಿರುವವರಲ್ಲಿ ಹೆಚ್ಚಿನವರು ಭಾವಿಸುವಂತೆ, ಇದರ ಅರ್ಥವನ್ನು, ಇದರ ಆವಶ್ಯಕತೆಗಳ ಪ್ರಕಾರ ಕರ್ಮವೆಸಗುವುದನ್ನು, ಇದರ ಮನ್‌ಹಜ್ ಪ್ರಕಾರ ಬದುಕು ಸಾಗಿಸುವುದನ್ನು ಮಾಡದೆ, ಇದು ಕೇವಲ ಬರಕತ್‌ಗಾಗಿ ಹೇಳಬೇಕಾದ ಪದವೋ ಅಥವಾ ಬೆಳಗ್ಗೆ ಹಾಗೂ ಸಂಜೆ ಆವರ್ತಿಸುತ್ತಿರಬೇಕಾದ ಸ್ಮರಣೆಯೋ ಅಲ್ಲ.

ಅಲ್ಲಾಹು ಸ್ವತಃ ಅವನನ್ನು ಯಾವೆಲ್ಲ ಹೆಸರುಗಳಿಂದ ಕರೆದಿರುವನೋ ಮತ್ತು ಯಾವೆಲ್ಲ ಗುಣ ವಿಶೇಷಣಗಳ ಮೂಲಕ ವಿವರಿಸಿರುವನೋ ಮತ್ತು ಅವನ ರಸೂಲ್(ﷺ)ರವರು ಯಾವೆಲ್ಲ ಹೆಸರುಗಳಿಂದ ಅವನನ್ನು ಕರೆದಿರುವರೋ ಮತ್ತು ಯಾವೆಲ್ಲ ಗುಣ ವಿಶೇಷಣ ಗಳಿಂದ ಅವನನ್ನು ವಿವರಿಸಿರುವರೋ ಆ ಹೆಸರುಗಳನ್ನು ಮತ್ತು ಗುಣವಿಶೇಷಣಗಳನ್ನು ದೃಢೀಕರಿಸುವುದು ಕೂಡ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನದ ಆವಶ್ಯಕತೆಗಳಲ್ಲಿ ಒಳಪಟ್ಟದ್ದಾಗಿದೆ.

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿وَلِلَّهِ الْأَسْمَاءُ الْحُسْنَىٰ فَادْعُوهُ بِهَا وَذَرُوا الَّذِينَ يُلْحِدُونَ فِي أَسْمَائِهِ سَيُجْزَوْنَ مَا كَانُوا يَعْمَلُونَ﴾

**"ಅಲ್ಲಾಹನಿಗೆ ಅತಿಸುಂದರವಾದ ಹೆಸರುಗಳಿವೆ. ಆದ್ದರಿಂದ ಅವನನ್ನು ಆ ಹೆಸರುಗಳ ಮೂಲಕ ಕರೆದು ಪ್ರಾರ್ಥಿಸಿರಿ. ಅವನ ಹೆಸರುಗಳ ವಿಷಯದಲ್ಲಿ**

**ಇಲ್‌ಹಾದ್ ಮಾಡುವವರನ್ನು ತಾವು ಬಿಟ್ಟುಬಿಡಿರಿ. ಅವರೇನು ಮಾಡುತ್ತಿರುವರೋ ಅದಕ್ಕಿರುವ ಪ್ರತಿಫಲವನ್ನು ಅವರಿಗೆ ನೀಡಲಾಗುವುದು."** [37]

'ಫತ್‌ಹುಲ್ ಮಜೀದ್' ಎಂಬ ಗ್ರಂಥದಲ್ಲಿ ಹೀಗೆನ್ನಲಾಗಿದೆ:

وَأَصْلُ الْإِلْحَادِ فِي كَلَامِ الْعَرَبِ الْعُدُولُ عَنِ الْقَصْدِ وَالْمَيْلُ وَالْجَوْرُ وَالانْحِرَافُ، وَأَسْمَاءُ الرَّبِّ تَعَالَى كُلُّهَا أَسْمَاءٌ وَأَوْصَافٌ تَعَرَّفَ بِهَا تَعَالَى إِلَى عِبَادِهِ، وَدَلَّتْ عَلَى كَمَالِهِ جَلَّ وَعَلَا.

**"ಅರಬಿ ಭಾಷೆಯಲ್ಲಿ ಇಲ್‌ಹಾದ್ ಎಂಬುದರ ಮೂಲ ಅರ್ಥವು ಉದ್ದೇಶದಿಂದ ಸರಿಯುವುದು, ವಾಲುವುದು, ಅತಿಕ್ರಮವೆಸಗುವುದು ಮತ್ತು ಹಾದಿ ತಪ್ಪುವುದಾಗಿದೆ. ಅಲ್ಲಾಹನ ಹೆಸರುಗಳೆಲ್ಲವೂ ಮನುಷ್ಯರು ಅವನನ್ನು ಅರಿಯುವುದಕ್ಕಿರುವ ಅಲ್ಲಾಹನ ನಾಮ ಮತ್ತು ವಿಶೇಷಣಗಳಾಗಿವೆ. ಅವೆಲ್ಲವೂ ಅಲ್ಲಾಹನ ಸಂಪೂರ್ಣತೆಯನ್ನು ಸೂಚಿಸುತ್ತವೆ."**

ಅವರು ಮುಂದುವರಿದು ಹೇಳುತ್ತಾರೆ:

فَالْإِلْحَادُ فِيهَا إِمَّا بِجَحْدِهَا وَإِنْكَارِهَا، وَإِمَّا بِجَحْدِ مَعْنَاهَا وَتَعْطِيلِهَا، وَإِمَّا بِتَحْرِيفِهَا عَنِ الصَّوَابِ وَإِخْرَاجِهَا عَنِ الْحَقِّ بِالتَّأْوِيلَاتِ، وَإِمَّا أَنْ يَجْعَلَهَا أَسْمَاءً لِهَذِهِ الْمَخْلُوقَاتِ كَإِلْحَادِ أَهْلِ الاِتِّحَادِ، فَإِنَّهُمْ جَعَلُوهَا أَسْمَاءَ هَذَا الْكَوْنِ مَحْمُودِهَا وَمَذْمُومِهَا.

---

[37] ಸೂರಃ ಅಲ್‌ಅಅ್‌ರಾಫ್ 180

**“ಅಲ್ಲಾಹನ ನಾಮ ವಿಶೇಷಣಗಳಲ್ಲಿ ಇಲ್‌ಹಾದ್ ಮಾಡುವುದು ಒಂದೋ ಆ ನಾಮ ವಿಶೇಷಣಗಳನ್ನು ನಿಷೇಧಿಸುವ ಮತ್ತು ನಿರಾಕರಿಸುವ ಮೂಲಕವಾಗಿದೆ, ಅಥವಾ ಅದರ ಅರ್ಥಗಳನ್ನು ನಿಷೇಧಿಸುವ ಮೂಲಕ ಮತ್ತು ಅದನ್ನು ನಿಷ್ಕ್ರಿಯಗೊಳಿಸುವ ಮೂಲಕವಾಗಿದೆ, ಅಥವಾ ವ್ಯಾಖ್ಯಾನಗಳನ್ನು ನೀಡಿ ಅವುಗಳನ್ನು ಅವುಗಳ ನೈಜ ಅರ್ಥದಿಂದ ತಿರುಚುವ ಮೂಲಕ ಮತ್ತು ಸತ್ಯದಿಂದ ಮುಕ್ತಗೊಳಿಸುವ ಮೂಲಕವಾಗಿದೆ, ಅಥವಾ ಇತ್ತಿಹಾದ್‌ನ ಜನರಂತೆ (ಅದ್ವೈತವಾದಿಗಳಂತೆ) ಅವುಗಳನ್ನು ಈ ಸೃಷ್ಟಿಗಳ ಹೆಸರುಗಳನ್ನಾಗಿ ಮಾಡುವ ಮೂಲಕವಾಗಿದೆ. ಯಾಕೆಂದರೆ ಅವರು ಈ ಜಗತ್ತಿನಲ್ಲಿರುವ ಪ್ರಶಂಸಾರ್ಹ ಮತ್ತು ಆಕ್ಷೇಪಾರ್ಹ ವಸ್ತುಗಳೆಲ್ಲವನ್ನೂ ಆ ಹೆಸರುಗಳಿಂದ ಕರೆಯುತ್ತಾರೆ.”**

ಆದ್ದರಿಂದ ಯಾರು ಜಹ್ಮಿಯ್ಯಃ, ಮುಅ್‌ತಝಿಲಃ ಮತ್ತು ಅಶ್‌ಅರಿಯ್ಯಃಗಳಂತೆ, ತಅ್‌ತೀಲ್ ಮಾಡುವ (ನಿಷ್ಕ್ರಿಯಗೊಳಿಸುವ) ಮೂಲಕ, ಅಥವಾ ತಅ್‌ವೀಲ್ (ವ್ಯಾಖ್ಯಾನ) ಮಾಡುವ ಮೂಲಕ, ಅಥವಾ ತಫ್ವೀದ್ ಮಾಡುವ (ಅಲ್ಲಾಹನಿಗೆ ವಹಿಸಿಕೊಡುವ) ಮೂಲಕ ಅಲ್ಲಾಹನ ನಾಮ ಮತ್ತು ವಿಶೇಷಣಗಳಲ್ಲಿ ಇಲ್‌ಹಾದ್ ಮಾಡುತ್ತಾನೋ, ಮತ್ತು ಆ ನಾಮ ಮತ್ತು ವಿಶೇಷಣಗಳು ಸೂಚಿಸುವ ಸುಸ್ಪಷ್ಟ ಅರ್ಥಗಳಲ್ಲಿ ವಿಶ್ವಾಸವಿಡುವುದಿಲ್ಲವೋ ಅವನು ‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ವಚನವು ಏನನ್ನು ಸೂಚಿಸುತ್ತದೋ ಅದಕ್ಕೆ ವಿರುದ್ಧವಾಗಿ ಸಾಗಿದ್ದಾನೆ. ಯಾಕೆಂದರೆ ಇಲಾಹ್ (ಆರಾಧ್ಯ) ಎಂದರೆ ಯಾರ ನಾಮ ಮತ್ತು ಗುಣವಿಶೇಷಣಗಳ ಮೂಲಕ ಪ್ರಾರ್ಥಿಸಲಾಗುತ್ತದೋ ಮತ್ತು ತವಸ್ಸುಲ್ ಮಾಡಲಾಗುತ್ತದೋ ಅವನೇ ಆಗಿದ್ದಾನೆ. ಅತ್ಯುನ್ನತನಾದ ಅವನು ಹೇಳಿದಂತೆ:

﴿ فَادْعُوهُ بِهَا ﴾

**“ಆದ್ದರಿಂದ ಅವನನ್ನು ಅವುಗಳ ಮೂಲಕ ಕರೆದು ಪ್ರಾರ್ಥಿಸಿರಿ.”** [38]

ಯಾರಿಗೆ ನಾಮ ಮತ್ತು ಗುಣವಿಶೇಷಣಗಳಿಲ್ಲವೋ ಅವನು ಇಲಾಹ್ ಆಗುವುದಾದರೂ ಹೇಗೆ? ಅವನೊಂದಿಗೆ ಪ್ರಾರ್ಥಿಸುವುದಾದರೂ ಹೇಗೆ? ಅವನನ್ನು ಕರೆಯುವುದಾದರೂ ಯಾವುದರ ಮೂಲಕ?

ಇಮಾಮ್ ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

تَنَازَعَ النَّاسُ فِي كَثِيرٍ مِنَ الْأَحْكَامِ وَلَمْ يَتَنَازَعُوا فِي آيَاتِ الصِّفَاتِ وَأَخْبَارِهَا فِي مَوْضِعٍ وَاحِدٍ، بَلِ اتَّفَقَ الصَّحَابَةُ وَالتَّابِعُونَ عَلَى إِقْرَارِهَا وَإِمْرَارِهَا مَعَ فَهْمِ مَعَانِيهَا وَإِثْبَاتِ حَقَائِقِهَا، وَهَذَا يَدُلُّ عَلَى أَنَّهَا أَعْظَمُ النَّوْعَيْنِ بَيَانًا، وَأَنَّ الْعِنَايَةَ بِبَيَانِهَا أَهَمُّ، لِأَنَّهَا مِنْ تَمَامِ تَحْقِيقِ الشَّهَادَتَيْنِ، وَإِثْبَاتُهَا مِنْ لَوَازِمِ التَّوْحِيدِ فَبَيَّنَهَا اللَّهُ سُبْحَانَهُ وَتَعَالَى وَرَسُولُهُ بَيَانًا شَافِيًا لَا يَقَعُ فِيهِ لُبْسٌ. وَآيَاتُ الْأَحْكَامِ لَا يَكَادُ يَفْهَمُ مَعَانِيهَا إِلَّا الْخَاصَّةُ مِنَ النَّاسِ، وَأَمَّا آيَاتُ الصِّفَاتِ فَيَشْتَرِكُ فِي فَهْمِ مَعْنَاهَا الْخَاصُّ وَالْعَامُّ، أَعْنِي فَهْمَ أَصْلِ الْمَعْنَى لَا فَهْمَ الْكُنْهِ وَالْكَيْفِيَّةِ.

**“ಸಲಫ್‌ಗಳು ನಿಯಮಗಳ ಪೈಕಿ ಅನೇಕ ವಿಷಯಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಹೊಂದಿದ್ದರು. ಆದರೆ ಒಂದೇ ಒಂದು ಸ್ಥಳದಲ್ಲೂ ಕೂಡ ಅವರು ಸಿಫತ್‌ಗಳನ್ನು (ವಿಶೇಷಣಗಳನ್ನು) ವಿವರಿಸುವ ಆಯತ್‌ಗಳ ವಿಷಯದಲ್ಲಿ ಮತ್ತು ಅದರ ವಿವರಣೆಗಳ ವಿಷಯದಲ್ಲಿ ಪರಸ್ಪರ ಭಿನ್ನಾಭಿಪ್ರಾಯವನ್ನು ಹೊಂದಿಲ್ಲ. ಬದಲಾಗಿ ಅವುಗಳನ್ನು ಅಂಗೀಕರಿಸುವುದರಲ್ಲಿ ಮತ್ತು ಅವುಗಳ ಅರ್ಥಗಳನ್ನು ಗ್ರಹಿಸಿ ಅವುಗಳ ವಾಸ್ತವತೆಗಳನ್ನು ದೃಢೀಕರಿಸಿ ಅವು ಹೇಗೆ ಬಂದಿವೆಯೋ ಹಾಗೆಯೇ ಸ್ವೀಕರಿಸಿಕೊಳ್ಳುವುದರಲ್ಲಿ ಸಹಾಬಾಗಳು ಮತ್ತು ತಾಬಿಊನ್‌ಗಳೆಲ್ಲರೂ**

[38] ಸೂರಃ ಅಲ್‌ಅಅ್‌ರಾಫ್ 180

**ಒಮ್ಮತಾಭಿಪ್ರಾಯ ಹೊಂದಿದ್ದರು. ವಿವರಣೆ ನೀಡಬೇಕಾದ ಎರಡು ವಿಧಗಳಲ್ಲಿ ಇದು ಅತ್ಯಂತ ಪ್ರಮುಖವಾದುದಾಗಿದೆ ಮತ್ತು ಅವುಗಳನ್ನು ವಿವರಿಸುವ ವಿಷಯದಲ್ಲಿ ಕಾಳಜಿ ವಹಿಸಬೇಕಾದುದು ಅತ್ಯಾವಶ್ಯಕವಾಗಿದೆಯೆಂಬುದಕ್ಕೆ ಇದು ಪುರಾವೆಯಾಗಿದೆ. ಯಾಕೆಂದರೆ ಎರಡು ಸಾಕ್ಷಿ ವಚನಗಳನ್ನು ಪೂರ್ಣವಾಗಿ ನಿಜಪಡಿಸುವುದರಲ್ಲಿ ಅದು ಒಳಗೊಳ್ಳುತ್ತದೆ. ಅದನ್ನು ದೃಢೀಕರಿಸುವುದು ತೌಹೀದ್‌ನ ಅನಿವಾರ್ಯತೆಗಳಲ್ಲಿ ಒಳಪಟ್ಟದ್ದಾಗಿದೆ. ಆದ್ದರಿಂದಲೇ ಅಲ್ಲಾಹು ಸುಬ್‌ಹಾನಹು ವತಆಲಾ ಮತ್ತು ಅವನ ರಸೂಲ್(ﷺ)ರವರು ಅವುಗಳನ್ನು ನಮಗೆ ಯಾವುದೇ ಗೊಂದಲವುಂಟಾಗದ ರೀತಿಯಲ್ಲಿ ತೃಪ್ತಿಕರವಾಗಿ ವಿವರಿಸಿಕೊಟ್ಟಿದ್ದಾರೆ. ನಿಯಮ ಕಟ್ಟಳೆಗಳ ಬಗ್ಗೆ ಹೇಳುವುದಾದರೆ ಕೆಲವು ವಿಶೇಷ ಜನರ ಹೊರತು ಇತರರಿಗೆ ಅವುಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದು. ಆದರೆ ಸಿಫತ್‌ಗಳನ್ನು ವಿವರಿಸುವ ಆಯತ್‌ಗಳ ಬಗ್ಗೆ ಹೇಳುವುದಾದರೆ ಅವುಗಳ ಅರ್ಥ ಮಾಡಿಕೊಳ್ಳುವುದರಲ್ಲಿ ವಿಶೇಷ ಜನರು ಮತ್ತು ಸಾಧಾರಣ ಜನರು ಒಂದೇ ರೀತಿಯಲ್ಲಿ ಸಹಭಾಗಿಗಳಾಗಿದ್ದಾರೆ. ಇಲ್ಲಿ ನಾನು ಹೇಳುವುದು ಅವುಗಳ ಮೂಲಭೂತ ಅರ್ಥದ ಬಗ್ಗೆಯಾಗಿದೆಯೇ ವಿನಾ ಅವುಗಳ ತಿರುಳಿನ ಬಗ್ಗೆಯೋ ವಿಧಾನದ ಬಗ್ಗೆಯೋ ಅಲ್ಲ."**

ಅವರು ಮುಂದುವರಿದು ಹೇಳುತ್ತಾರೆ:

وَهَذَا أَمْرٌ مَعْلُومٌ بِالْفِطْرِ وَالْعُقُولِ السَّلِيمَةِ وَالْكُتُبِ السَّمَاوِيَّةِ أَنَّ فَاقِدَ صِفَاتِ الْكَمَالِ لَا يَكُونُ إِلَهًا وَلَا مُدَبِّرًا وَلَا رَبًّا، بَلْ هُوَ مَذْمُومٌ مُعِيبٌ نَاقِصٌ، لَيْسَ لَهُ الْحَمْدُ لَا فِي الْأُولَى وَلَا فِي الْآخِرَةِ، وَإِنَّمَا الْحَمْدُ فِي الْأُولَى وَالْآخِرَةِ لِمَنْ لَهُ صِفَاتُ الْكَمَالِ وَنُعُوتُ الْجَلَالِ الَّتِي لِأَجْلِهَا اسْتَحَقَّ الْحَمْدَ، وَلِهَذَا سَمَّى السَّلَفُ كُتُبَهُمُ الَّتِي صَنَّفُوهَا فِي السُّنَّةِ وَإِثْبَاتِ صِفَاتِ الرَّبِّ وَعُلُوِّهِ فِي خَلْقِهِ وَكَلَامِهِ وَتَكْلِيمِهِ تَوْحِيدًا،

لِأَنَّ نَفْيَ ذَلِكَ وَإِنْكَارَهُ وَالْكُفْرَ بِهِ إِنْكَارٌ لِلصَّانِعِ وَجَحْدٌ لَهُ، وَإِنَّمَا تَوْحِيدُهُ إِثْبَاتُ صِفَاتِ كَمَالِهِ وَتَنْزِيهِهِ عَنِ التَّشْبِيهِ وَالنَّقَائِصِ.

"ಯಾರಿಗೆ ಸಂಪೂರ್ಣತೆಯ ವಿಶೇಷಣಗಳಿಲ್ಲವೋ ಅವನು ಇಲಾಹ್ (ಆರಾಧ್ಯ) ಆಗಲು, ಪ್ರಪಂಚದ ನಿಯಂತ್ರಕನಾಗಲು ಮತ್ತು ರಬ್ಬ್ ಆಗಲು ಸಾಧ್ಯವಿಲ್ಲವೆಂಬುದು ಮನುಷ್ಯನು ನೈಸರ್ಗಿಕವಾಗಿ, ಸ್ವಸ್ಥ ಬುದ್ಧಿಯ ಸಹಾಯದಿಂದ ಮತ್ತು ಆಕಾಶದಿಂದ ಅವತೀರ್ಣಗೊಂಡ ಗ್ರಂಥಗಳ ಸಹಾಯದಿಂದ ಅರಿತುಕೊಂಡ ವಿಚಾರವಾಗಿದೆ. ಬದಲಾಗಿ ಅಂತಹವನು ಆಕ್ಷೇಪಾರ್ಹನೂ, ನ್ಯೂನತೆಯುಳ್ಳವನೂ, ಅಪೂರ್ಣನೂ ಆಗಿದ್ದಾನೆ. ಅಂತಹವನಿಗೆ ಇಹಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಯಾವುದೇ ಸ್ತುತಿಯೂ ಇರಲಾರದು. ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸರ್ವಸ್ತುತಿಯಿರುವುದು ಯಾರಿಗೆ ಸಂಪೂರ್ಣತೆಯ ವಿಶೇಷಣಗಳಿವೆಯೋ ಮತ್ತು ಉಜ್ವಲವಾದ ಗುಣಗಳಿವೆಯೋ ಅವನಿಗೆ ಮಾತ್ರವಾಗಿದೆ. ಇವುಗಳಿಂದಾಗಿಯೇ ಅವನು ಸರ್ವಸ್ತುತಿಗೆ ಅರ್ಹನಾಗುತ್ತಾನೆ. ಈ ಕಾರಣದಿಂದಲೇ ಸುನ್ನತ್ತಿನ ಬಗ್ಗೆ, ಅಲ್ಲಾಹನ ವಿಶೇಷಣಗಳನ್ನು ದೃಢೀಕರಿಸುವುದರ ಬಗ್ಗೆ, ಅವನು ಸೃಷ್ಟಿಗಳೆಲ್ಲರಿಗಿಂತ ಉನ್ನತದಲ್ಲಿದ್ದಾನೆಂಬ ಬಗ್ಗೆ, ಅವನ ಮಾತುಗಳ ಬಗ್ಗೆ ಮತ್ತು ಅವನು ಮಾತನಾಡುತ್ತಾನೆಂಬುದರ ಬಗ್ಗೆ ಗ್ರಂಥಗಳನ್ನು ರಚಿಸಿದ ಸಲಫ್‌ಗಳು ಆ ಗ್ರಂಥಗಳಿಗೆ 'ತೌಹೀದ್' ಎಂದು ನಾಮಕರಣ ಮಾಡಿದರು. ಯಾಕೆಂದರೆ ಅದನ್ನು ನಿಷೇಧಿಸುವುದು, ನಿರಾಕರಿಸುವುದು ಮತ್ತು ಅವುಗಳಲ್ಲಿ ಅವಿಶ್ವಾಸವಿಡುವುದು ಅಲ್ಲಾಹನನ್ನು ನಿರಾಕರಿಸುವುದಕ್ಕೆ ಮತ್ತು ನಿಷೇಧಿಸುವುದಕ್ಕೆ ಸಮವಾಗಿದೆ. ಅಲ್ಲಾಹನ ಸಂಪೂರ್ಣತೆಯ ವಿಶೇಷಣಗಳನ್ನು ದೃಢೀಕರಿಸುವುದು, ಅವುಗಳನ್ನು ಹೋಲಿಕೆ ಮತ್ತು ಅಪೂರ್ಣತೆಗಳಿಂದ ಪರಿಶುದ್ಧಗೊಳಿಸುವುದೇ ಅವನ ತೌಹೀದ್ ಆಗಿದೆ (ಅವನನ್ನು ಏಕೈಕಗೊಳಿಸುವುದಾಗಿದೆ)."

## مَتَى يَنْفَعُ الْإِنْسَانَ قَوْلُ لَا إِلَهَ إِلَّا اللَّهُ وَمَتَى لَا يَنْفَعُهُ

## ಒಬ್ಬ ವ್ಯಕ್ತಿಗೆ 'ಲಾ ಇಲಾಹ ಇಲ್ಲಲ್ಲಾಹ್' ಯಾವಾಗ ಪ್ರಯೋಜನಪಡುತ್ತದೆ ಮತ್ತು ಯಾವಾಗ ಪ್ರಯೋಜನಪಡುವುದಿಲ್ಲ

'ಲಾಇಲಾಹ ಇಲ್ಲಲ್ಲಾಹ್' ಎಂಬ ವಚನವನ್ನು ಉಚ್ಛರಿಸುವುದು ಅದರ ಅರ್ಥವನ್ನು ಅರಿತು ಅದು ಆವಶ್ಯಪಡುವ ಪ್ರಕಾರ ಅಮಲ್ ಮಾಡುವುದರೊಂದಿಗೆ ಆಗಿರಬೇಕೆಂದು ನಾವು ಈಗಾಗಲೇ ಹೇಳಿದೆವು. ಆದರೆ ಈ ವಚನವನ್ನು ಕೇವಲ ಬಾಯಿ ಮೂಲಕ ಉಚ್ಛರಿಸಿದರೆ ಸಾಕು ಎಂದು ಜನರು ಭಾವಿಸುವಂತಹ ಅರ್ಥದಲ್ಲಿರುವ ಕೆಲವು ಹದೀಸ್‌ಗಳಿವೆ. ಅವರು ಇದನ್ನು ಈ ಭಾವನೆಯೊಂದಿಗೇ ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಮತ್ತು ಸತ್ಯವನ್ನು ಬಯಸುವವರಿಂದ ಈ ಭಾವನೆಯನ್ನು ನಿವಾರಿಸುವುದಕ್ಕಾಗಿ ನಾನಿದನ್ನು ವಿವರಿಸುತ್ತಿದ್ದೇನೆ.

« فَإِنَّ اللَّهَ حَرَّمَ عَلَى النَّارِ مَنْ قَالَ لَا إِلَهَ إِلَّا اللَّهُ يَبْتَغِي بِذَلِكَ وَجْهَ اللَّهِ ».

**"ಅಲ್ಲಾಹನ ಮುಖವನ್ನು ಅರಸುತ್ತಾ 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳಿದವನನ್ನು ಅಲ್ಲಾಹು ಖಂಡಿತವಾಗಿಯೂ ನರಕಾಗ್ನಿಗೆ ನಿಷಿದ್ಧಗೊಳಿಸುವನು."** [39]

ಉತ್ಬಾನ್(ﷺ)ರವರು ವರದಿ ಮಾಡಿದ ಹದೀಸಿನಲ್ಲಿರುವ ಮೇಲಿನ ಭಾಗವನ್ನು ವಿವರಿಸುತ್ತಾ ಅಶ್ಶೈಖ್ ಸಲ್ಮಾನ್ ಇಬ್ನ್ ಅಬ್ದಿಲ್ಲಾಹ್‌ರವರು ಹೇಳುತ್ತಾರೆ:

---

[39] ಅಲ್‌ಬುಖಾರೀ 415; ಮುಸ್ಲಿಮ್ 33

“ಈ ಮೇಲಿನ ಹದೀಸಿನಂತೆ ಎರಡು ಸಾಕ್ಷಿ ವಚನಗಳನ್ನು ಉಚ್ಛರಿಸಿದವನು ನರಕಾಗ್ನಿಗೆ ನಿಷಿದ್ಧವಾಗಿದ್ದಾನೆ ಎಂಬ ಬಾಹ್ಯಾರ್ಥವನ್ನು ಹೊಂದಿರುವ ಅನೇಕ ಹದೀಸ್‌ಗಳಿವೆಯೆಂಬುದನ್ನು ನಾವು ಅರಿತಿರಬೇಕಾಗಿದೆ. ಇದೇ ರೀತಿ ಅನಸ್(ﷺ)ರಿಂದ ವರದಿಯಾದ ಹದೀಸ್:

كَانَ النَّبِيُّ ﷺ وَمُعَاذٌ رَدِيفُهُ عَلَى الرَّحْلِ فَقَالَ: «يَا مُعَاذُ»، قَالَ: لَبَّيْكَ يَا رَسُولَ اللَّهِ وَسَعْدَيْكَ، قَالَ: « مَا مِنْ عَبْدٍ يَشْهَدُ أَنْ لَا إِلَهَ إِلَّا اللَّهُ وَأَنَّ مُحَمَّدًا رَسُولُ اللَّهِ إِلَّا حَرَّمَهُ اللَّهُ عَلَى النَّارِ ».

**“ಒಮ್ಮೆ ಪ್ರವಾದಿ(ﷺ)ರವರು ಪ್ರಯಾಣ ಮಾಡುತ್ತಿದ್ದಾಗ ಮುಆದ್ (ﷺ)ರವರು ಅವರ ಹಿಂಬದಿಯಲ್ಲಿದ್ದರು. ಆಗ ಪ್ರವಾದಿ(ﷺ)ರವರು ಹೇಳಿದರು: “ಓ ಮುಆದ್”. ಮುಆದ್(ﷺ) ಹೇಳಿದರು: “ಓ ಅಲ್ಲಾಹನ ರಸೂಲರೇ, ಇಗೋ ನಾನು ಇಲ್ಲಿದ್ದೇನೆ.” ಪ್ರವಾದಿ(ﷺ)ರವರು ಹೇಳಿದರು: “ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುನ್ ರಸೂಲುಲ್ಲಾಹ್ ಎಂದು ಸಾಕ್ಷಿ ನುಡಿಯುವ ವ್ಯಕ್ತಿಯನ್ನು ಅಲ್ಲಾಹು ನರಕಾಗ್ನಿಗೆ ನಿಷಿದ್ಧಗೊಳಿಸದೆ ಇರಲಾರನು.”** [40]

ಮುಸ್ಲಿಮ್ ವರದಿ ಮಾಡಿದ ಉಬಾದಃ(ﷺ)ರವರ ಹದೀಸಿನಲ್ಲಿ ಪ್ರವಾದಿ(ﷺ) ರವರು ಹೇಳುತ್ತಾರೆ:

« وَمَنْ شَهِدَ أَنْ لَا إِلَهَ إِلَّا اللَّهُ وَأَنَّ مُحَمَّدًا عَبْدُهُ وَرَسُولُهُ حَرَّمَهُ اللَّهُ عَلَى النَّارِ ».

[40] ಅಲ್‌ಬುಖಾರೀ 128; ಮುಸ್ಲಿಮ್ 32; ಅಹ್ಮದ್ 3/261

**"ಆರಾಧನೆಗೆ ಅಲ್ಲಾಹನ ಹೊರತು ನೈಜ ಹಕ್ಕುದಾರರಾಗಿ ಅನ್ಯರಿಲ್ಲ ಮತ್ತು ಮುಹಮ್ಮದ್(ﷺ)ರವರು ಅವನ ದಾಸ ಮತ್ತು ರಸೂಲರಾಗಿದ್ದಾರೆ ಎಂದು ಸಾಕ್ಷಿ ನುಡಿಯುವವನನ್ನು ಅಲ್ಲಾಹು ನರಕಾಗ್ನಿಗೆ ನಿಷಿದ್ಧಗೊಳಿಸುವನು."** [41]

ಅದೇ ರೀತಿ ಎರಡು ಸಾಕ್ಷಿ ವಚನಗಳನ್ನು ಉಚ್ಛರಿಸಿದವನನ್ನು ಅಲ್ಲಾಹು ಸ್ವರ್ಗಕ್ಕೆ ಪ್ರವೇಶ ಮಾಡಿಸುವನು ಎಂದು ಹೇಳಲಾಗಿರುವ, ಆದರೆ ಅವನನ್ನು ನರಕಾಗ್ನಿಗೆ ನಿಷಿದ್ಧಗೊಳಿಸುವನು ಎಂದು ಹೇಳದಿರುವ ಹದೀಸ್‌ಗಳಿವೆ. ಅವುಗಳಲ್ಲೊಂದು ಈಗಾಗಲೇ ಉದ್ಧರಿಸಿದ ಉಬಾದ(ﷺ)ರವರ ಹದೀಸಾಗಿದೆ. ಇನ್ನೊಂದು ಹದೀಸ್ ಅಬೂ ಹುರೈರಾ(ﷺ)ರವರ ಹದೀಸಾಗಿದೆ. ಆ ಹದೀಸಿನಲ್ಲಿರುವಂತೆ ತಬೂಕ್ ಯುದ್ಧದ ಸಂದರ್ಭದಲ್ಲಿ ಪ್ರವಾದಿ(ﷺ)ರವರು ಹೇಳಿದರು:

« اشْهَدْ أَنْ لَا إِلَهَ إِلَّا اللَّهُ وَأَنِّي رَسُولُ اللَّهِ، لَا يَلْقَى اللَّهَ بِهَا عَبْدٌ غَيْرَ شَاكٍّ فَيُحْجَبُ عَنِ النَّارِ ».

**"ಅಲ್ಲಾಹನ ಹೊರತು ಸತ್ಯ ಆರಾಧ್ಯರಾಗಿ ಅನ್ಯರಿಲ್ಲ ಮತ್ತು ನಾನು ಅವನ ರಸೂಲ್ ಆಗಿದ್ದೇನೆಂದು ಸಾಕ್ಷಿ ನುಡಿಯಿರಿ. ಯಾಕೆಂದರೆ ಈ ಸಾಕ್ಷಿ ವಚನದೊಂದಿಗೆ, ಅದರಲ್ಲಿ ಯಾವುದೇ ಸಂಶಯವನ್ನು ಇಟ್ಟುಕೊಳ್ಳದೆ ಅಲ್ಲಾಹನನ್ನು ಭೇಟಿಯಾಗುವ ದಾಸನನ್ನು ಅಲ್ಲಾಹು ನರಕಾಗ್ನಿಯಿಂದ ಪಾರು ಮಾಡದೆ ಇರಲಾರನು."** [42]

[41] ಮುಸ್ಲಿಮ್ 29; ಅತ್ತಿರ್ಮಿದೀ 2638; ಅಹ್ಮದ್ 5/318
[42] ಮುಸ್ಲಿಮ್ 27; ಅಹ್ಮದ್ 2/421

**ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಏನೆನ್ನುತ್ತಾರೆ?**

ಅವರು ಮುಂದುವರಿದು ಹೇಳುತ್ತಾರೆ:

"ಈ ವಿಷಯದಲ್ಲಿ ಹೇಳಲಾದ ಅತ್ಯುತ್ತಮ ಅಭಿಪ್ರಾಯವು ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಮತ್ತಿತರರು ಹೇಳಿದ ಈ ಕೆಳಗಿನ ಅಭಿಪ್ರಾಯವಾಗಿದೆ:

ಈ ಹದೀಸ್‌ಗಳು ಕೆಲವು ನಿರ್ಬಂಧಗಳೊಂದಿಗೆ ಬಂದಿದೆ. ಅಂದರೆ ಈ ಹದೀಸ್‌ಗಳಲ್ಲಿ ಹೇಳಲಾಗಿರುವುದು 'ಲಾ ಇಲಾಹ ಇಲ್ಲಲ್ಲಾಹ್' ಉಚ್ಛರಿಸಿದ ಮತ್ತು ಅದರಲ್ಲೇ ಮರಣಹೊಂದಿದ ವ್ಯಕ್ತಿಯ ಬಗ್ಗೆಯಾಗಿದೆ. ಅದನ್ನು ತನ್ನ ಹೃದಯದಿಂದ ಪ್ರಾಮಾಣಿಕವಾಗಿ ಹೇಳಿದವನ ಬಗ್ಗೆಯಾಗಿದೆ. ಹೃದಯದಲ್ಲಿ ದೃಢವಿಶ್ವಾಸವಿದ್ದು ಸತ್ಯಸಂಧವಾಗಿ, ಯಾವುದೇ ಸಂಶಯಗಳನ್ನು ಇಟ್ಟುಕೊಳ್ಳದೆ ಹೇಳಿದವನ ಬಗ್ಗೆಯಾಗಿದೆ. ಯಾಕೆಂದರೆ ತೌಹೀದನ್ನು ನಿಜಪಡಿಸುವುದು ಆತ್ಮವನ್ನು ಸಂಪೂರ್ಣವಾಗಿ ಅಲ್ಲಾಹನೆಡೆಗೆ ಎಳೆದು ತರುವುದರಿಂದಾಗಿದೆ. ಆದ್ದರಿಂದ ಯಾರಾದರೂ ತನ್ನ ಹೃದಯದಿಂದ ನಿಷ್ಕಳಂಕವಾಗಿ ಈ ವಚನವನ್ನು ಉಚ್ಛರಿಸಿದರೆ ಅವನು ಸ್ವರ್ಗವನ್ನು ಪ್ರವೇಶಿಸುವನು. ಯಾಕೆಂದರೆ ಇಖ್ಲಾಸ್ (ನಿಷ್ಕಳಂಕತೆ) ಎಂಬುದು ಎಲ್ಲ ಪಾಪಗಳಿಂದಲೂ ಪ್ರಾಮಾಣಿಕವಾಗಿ ಪಶ್ಚಾತ್ತಾಪಪಟ್ಟು ಹೃದಯವನ್ನು ಅಲ್ಲಾಹನೆಡೆಗೆ ಎಳೆದು ತರುವುದಾಗಿದೆ. ಇಂತಹ ಸ್ಥಿತಿಯಲ್ಲಿ ಯಾರಾದರೂ ಮರಣ ಹೊಂದಿದರೆ ಅವನು ಸ್ವರ್ಗವನ್ನು ಪ್ರವೇಶಿಸುತ್ತಾನೆ. 'ಲಾ ಇಲಾಹ ಇಲ್ಲಲ್ಲಾಹ್' ಉಚ್ಛರಿಸಿದವನು, ಅವನ ಹೃದಯದಲ್ಲಿ ಒಂದು ಧಾನ್ಯದ ತೂಕದಷ್ಟು, ಅಥವಾ ಒಂದು ಸಾಸಿವೆಯ ತೂಕದಷ್ಟು, ಅಥವಾ ಒಂದು ಅಣುವಿನ ತೂಕದಷ್ಟು ಒಳಿತಿದ್ದರೆ ಅವನು ನರಕದಿಂದ ಹೊರಬರುತ್ತಾನೆ ಎಂದು ಹೇಳುವ ಹದೀಸ್‌ಗಳು ಮುತವಾತಿರ್ ಆಗಿ ವರದಿಯಾಗಿವೆ. 'ಲಾ ಇಲಾಹ ಇಲ್ಲಲ್ಲಾಹ್' ಎಂದು ಉಚ್ಛರಿಸಿದ ಅನೇಕ ಮಂದಿ ನರಕಾಗ್ನಿ ಪ್ರವೇಶಿಸಿದರೂ ಅದರಿಂದ ಹೊರಬರುತ್ತಾರೆಂದು ಹೇಳುವ ಹದೀಸ್‌ಗಳು ಕೂಡ ಮುತವಾತಿರ್ ಆಗಿ ವರದಿಯಾಗಿದೆ. ಹಾಗೆಯೇ ಮನುಷ್ಯ ದೇಹದಲ್ಲಿರುವ ಸುಜೂದ್‌ನ ಕುರುಹುಗಳು, ಅಂದರೆ ಅಲ್ಲಾಹನಿಗಾಗಿ

ನಮಾಝ್ ಮತ್ತು ಸುಜೂದ್ ಮಾಡುವವರ ದೇಹಗಳು ನರಕಾಗ್ನಿಗೆ ನಿಷಿದ್ಧವಾಗಿದೆ ಎಂದು ಹೇಳುವ ಹದೀಸ್‌ಗಳು ಮುತವಾತಿರ್ ಆಗಿ ವರದಿಯಾಗಿವೆ. ಇದೇ ರೀತಿ 'ಲಾ ಇಲಾಹ ಇಲ್ಲಲ್ಲಾಹ್' ಉಚ್ಛರಿಸಿದವನು ಮತ್ತು 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುನ್ ರಸೂಲುಲ್ಲಾಹ್' ಎಂದು ಸಾಕ್ಷಿ ನುಡಿದವನು ನರಕಾಗ್ನಿಗೆ ನಿಷಿದ್ಧವಾಗಿರುವನು ಎಂದು ಹೇಳುವ ಹದೀಸ್‌ಗಳು ಕೂಡ ಮುತವಾತಿರ್ ಆಗಿ ವರದಿಯಾಗಿವೆ.

ಆದರೆ ಇವು ಕಠಿಣ ನಿರ್ಬಂಧಗಳಿಗೆ ಒಳಪಟ್ಟಿವೆ. 'ಲಾ ಇಲಾಹ ಇಲ್ಲಲ್ಲಾಹ್' ಉಚ್ಛರಿಸುವ ಜನರಲ್ಲಿ ಹೆಚ್ಚಿನವರಿಗೂ ಇಖ್ಲಾಸ್ (ನಿಷ್ಕಳಂಕತೆ) ಮತ್ತು ಯಕೀನ್ (ದೃಢವಿಶ್ವಾಸ) ಎಂದರೇನೆಂದೇ ಗೊತ್ತಿಲ್ಲ. ಇಂತಹವರಿಗೆ ಮರಣ ಸಮಯದಲ್ಲಿ ಪರೀಕ್ಷೆಯುಂಟಾಗಿ ಅವರಿಗೆ 'ಲಾ ಇಲಾಹ ಇಲ್ಲಲ್ಲಾಹ್' ಉಚ್ಛರಿಸಲಾಗದೆ ಹೋಗುವ ಭಯವಿದೆ. ಇನ್ನು ಅದನ್ನು ಉಚ್ಛರಿಸುವವರಲ್ಲಿ ಹೆಚ್ಚಿನವರೂ ಅದನ್ನು ಅಂಧಾನುಕರಣೆಯಿಂದ ಮತ್ತು ಅಭ್ಯಾಸಬಲದಿಂದ ಉಚ್ಛರಿಸುತ್ತಾರೆ. ಅವರ ಹೃದಯದೊಂದಿಗೆ ಈಮಾನ್ ಬೆರೆತಿರುವುದಿಲ್ಲ. ಈ ಕೆಳಗಿನ ಹದೀಸಿನಲ್ಲಿರುವಂತೆ ಮರಣದ ಸಮಯದಲ್ಲಿ ಮತ್ತು ಗೋರಿಯಲ್ಲಿ ಪರೀಕ್ಷೆಗೊಳಗಾಗುವರಲ್ಲಿ ಹೆಚ್ಚಿನವರು ಇಂತಹವರೇ ಆಗಿದ್ದಾರೆ.

« سَمِعْتُ النَّاسَ يَقُولُونَ شَيْئًا فَقُلْتُهُ ».

**"ಜನರು ಏನೋ ಹೇಳುವುದನ್ನು ಕೇಳಿದ್ದೆ. ನಾನೂ ಹಾಗೆಯೇ ಹೇಳಿದೆ."** [43]

ಇಂತಹವರು ಮಾಡುವ ಕರ್ಮಗಳಲ್ಲಿ ಹೆಚ್ಚಿನವುಗಳೂ ಕೇವಲ ತಕ್ಲೀದ್ ಮತ್ತು ತಮ್ಮಂತಿರುವವರ ಅನುಕರಣೆಯಾಗಿದೆ. ಅಲ್ಲಾಹು ಈ ಕೆಳಗಿನ ಆಯತ್ತಿನಲ್ಲಿ ಹೇಳಿದ್ದಕ್ಕೆ ಇವರು ಹೆಚ್ಚು ಹತ್ತಿರದಲ್ಲಿದ್ದಾರೆ:

[43] ಅಲ್‌ಬುಖಾರೀ 86; ಮುಸ್ಲಿಮ್ 905; ಅಹ್ಮದ್ 2/355; ಮಾಲಿಕ್ 447

﴿إِنَّا وَجَدْنَا آبَاءَنَا عَلَىٰ أُمَّةٍ وَإِنَّا عَلَىٰ آثَارِهِم مُّهْتَدُونَ﴾

**“ಖಂಡಿತವಾಗಿಯೂ ನಮ್ಮ ಪೂರ್ವಜರು ಒಂದು ಮಾರ್ಗದಲ್ಲಿರುವುದಾಗಿ ನಾವು ಕಂಡಿರುವೆವು. ಮತ್ತು ಖಂಡಿತವಾಗಿಯೂ ನಾವು ಅವರ ಕುರುಹುಗಳಲ್ಲೇ ಮಾರ್ಗದರ್ಶನವನ್ನು ಪಡೆಯುವೆವು.”** [44]

ಆದ್ದರಿಂದ ಹದೀಸ್‌ಗಳ ನಡುವೆ ಯಾವುದೇ ವಿರೋಧಾಭಾಸವಿಲ್ಲ. ಯಾಕೆಂದರೆ ಯಾರು ಈ ವಚನವನ್ನು ಇಖ್ಲಾಸ್‌ನೊಂದಿಗೆ ಮತ್ತು ಪೂರ್ಣ ಯಕೀನ್‌ನೊಂದಿಗೆ ಉಚ್ಛರಿಸುತ್ತಾನೋ ಅವನ ಸ್ಥಿತಿಯು ಮೇಲೆ ಹೇಳಿದವನ ಸ್ಥಿತಿಯಂತಿರಲಾರದು. ಅವನು ಯಾವತ್ತೂ ಪಾಪದಲ್ಲಿ ಹಟತೊಟ್ಟು ನಿಲ್ಲಲಾರನು. ಯಾಕೆಂದರೆ ಅವನ ಇಖ್ಲಾಸ್ ಮತ್ತು ಯಕೀನ್‌ನ ಸಂಪೂರ್ಣತೆಯು ಇತರೆಲ್ಲ ವಸ್ತುಗಳಿಗಿಂತಲೂ ಅಲ್ಲಾಹು ಅವನಿಗೆ ಹೆಚ್ಚು ಪ್ರೀತಿಯುಳ್ಳವನ್ನಾಗಬೇಕೆಂಬುದನ್ನು ಆವಶ್ಯಪಡುತ್ತದೆ. ಆದ್ದರಿಂದ ಅಲ್ಲಾಹು ನಿಷಿದ್ಧಗೊಳಿಸಿರುವುದನ್ನು ಮಾಡುವ ಮತ್ತು ಅಲ್ಲಾಹು ಆಜ್ಞಾಪಿಸಿರುವುದನ್ನು ಅಸಹ್ಯಪಡುವ ಇಚ್ಛೆಯು ಅವನ ಹೃದಯದಲ್ಲಿ ಸ್ವಲ್ಪವೂ ಉಳಿಯಲಾರದು. ಇಂತಹ ವ್ಯಕ್ತಿಯನ್ನು ನರಕಾಗ್ನಿಗೆ ನಿಷಿದ್ಧಗೊಳಿಸಲಾಗುವುದು. ಇದಕ್ಕಿಂತ ಮುಂಚೆ ಮಾಡಿದ ಯಾವುದಾದರೂ ದೋಷವು ಅವನಲ್ಲಿದ್ದರೆ, ರಾತ್ರಿಯು ಹಗಲನ್ನು ಅಳಿಸಿಹಾಕುವಂತೆ ಈ ವಿಶ್ವಾಸ, ಈ ಪಶ್ಚಾತ್ತಾಪ, ಈ ಇಖ್ಲಾಸ್, ಈ ಪ್ರೀತಿ ಮತ್ತು ಈ ಯಕೀನ್ ಅವನಲ್ಲಿರುವ ಯಾವುದೇ ಪಾಪವನ್ನೂ ಅಳಿಸಿಹಾಕದೆ ಬಾಕಿಯುಳಿಸಲಾರದು.” ಶೈಖುಲ್ ಇಸ್ಲಾಮ್‌ರ ಮಾತು ಇಲ್ಲಿಗೆ ಕೊನೆಗೊಳ್ಳುತ್ತದೆ.

## ಅಶ್ಶೈಖ್ ಮುಹಮ್ಮದ್ ಇಬ್ನ್ ಅಬ್ದುಲ್ ವಹ್ಹಾಬ್ ಏನೆನ್ನುತ್ತಾರೆ?

[44] ಸೂರಃ ಅಝ್ಝುಖ್ರುಫ್ 22

“ಅವರಿಗೆ ಇನ್ನೊಂದು ಸಂದೇಹವಿದೆ. ಅದೇನೆಂದರೆ ಅವರು ಹೇಳುತ್ತಾರೆ: ಉಸಾಮಃ(ﷺ)ರವರು ‘ಲಾ ಇಲಾಹ ಇಲ್ಲಲ್ಲಾಹ್’ ಉಚ್ಚರಿಸಿದ ವ್ಯಕ್ತಿಯನ್ನು ಹತ್ಯೆ ಮಾಡಿದ್ದನ್ನು ವಿರೋಧಿಸುತ್ತಾ ಪ್ರವಾದಿ(ﷺ) ರವರು ಹೇಳುತ್ತಾರೆ:

« أَقَتَلْتَهُ بَعْدَ مَا قَالَ لَا إِلَهَ إِلَّا اللَّهُ ».

**“ಲಾ ಇಲಾಹ ಇಲ್ಲಲ್ಲಾಹ್ ಉಚ್ಚರಿಸಿದ ಬಳಿಕವೂ ತಾವು ಆ ವ್ಯಕ್ತಿಯನ್ನು ಹತ್ಯೆ ಮಾಡಿದಿರಾ?”** [45]

ಹಾಗೆಯೇ ‘ಲಾ ಇಲಾಹ ಇಲ್ಲಲ್ಲಾಹ್’ ಉಚ್ಚರಿಸಿದವರನ್ನು ಹತ್ಯೆ ಮಾಡಬಾರದೆಂದು ಹೇಳುವ ಇನ್ನಿತರ ಅನೇಕ ಹದೀಸ್‌ಗಳಿವೆ.”

ಈ ಅಜ್ಞಾನಿಗಳ ಉದ್ದೇಶವೇನೆಂದರೆ ‘ಲಾ ಇಲಾಹ ಇಲ್ಲಲ್ಲಾಹ್’ ಉಚ್ಚರಿಸಿದ ವ್ಯಕ್ತಿಯನ್ನು –ಅವನು ಏನೇ ಮಾಡಿದರೂ– ಅವನನ್ನು ಕಾಫಿರ್ ಎಂದು ಕರೆಯುವುದಾಗಲಿ ಮತ್ತು ಅವನನ್ನು ಕೊಲ್ಲುವುದಾಗಲಿ ಮಾಡಬಾರದು. ಈ ಅಜ್ಞಾನಿಗಳಿಗೆ ಹೀಗೆ ಉತ್ತರಿಸಲಾಗುತ್ತದೆ:

ಅಲ್ಲಾಹನ ರಸೂಲ್(ﷺ)ರವರು ಯಹೂದರೊಂದಿಗೆ, ಅವರು ‘ಲಾ ಇಲಾಹ ಇಲ್ಲಲ್ಲಾಹ್’ ಎಂದು ಉಚ್ಚರಿಸುವವರಾಗಿದ್ದೂ ಸಹ, ಅವರೊಂದಿಗೆ ಯುದ್ಧ ಮಾಡಿದ್ದಾರೆ. ರಸೂಲ್(ﷺ)ರವರ ಸಹಾಬಾಗಳು ಬನೂ ಹನೀಫಃ ಗೋತ್ರದವರೊಂದಿಗೆ, ಅವರು ‘ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುನ್ ರಸೂಲುಲ್ಲಾಹ್’ ಎಂದು ಸಾಕ್ಷಿ ನುಡಿದವರು, ನಮಾಝ್ ಮಾಡುವವರು ಮತ್ತು ಮುಸ್ಲಿಮ್ ಎಂದು ತಮ್ಮನ್ನು ಕರೆದುಕೊಂಡವರಾಗಿದ್ದರೂ ಸಹ,

[45] ಅಲ್‌ಬುಖಾರೀ 4021; ಮುಸ್ಲಿಮ್ 96; ಅಹ್ಮದ್ 5/200

ಅವರೊಂದಿಗೆ ಯುದ್ಧ ಮಾಡಿದ್ದಾರೆ. ಅಲೀ ಇಬ್ನ್ ಅಬೀ ತಾಲಿಬ್(ﷺ)ರವರು ಸುಟ್ಟು ಹಾಕಿದವರ ಸ್ಥಿತಿಯೂ ಇದಕ್ಕಿಂತ ಭಿನ್ನವಲ್ಲ.

ಈ ಅಜ್ಞಾನಿಗಳು ಪುನರುತ್ಥಾನವನ್ನು (ಅಂತ್ಯದಿನವನ್ನು) ನಿಷೇಧಿಸುವ ವ್ಯಕ್ತಿಯನ್ನು, ಆತ 'ಲಾ ಇಲಾಹ ಇಲ್ಲಲ್ಲಾಹ್' ಉಚ್ಚರಿಸಿದ ವ್ಯಕ್ತಿಯಾಗಿದ್ದರೂ ಸಹ, ಆತನನ್ನು ಕಾಫಿರ್ ಎಂದು ಕರೆಯಬಹುದು ಮತ್ತು ಆತನನ್ನು ಕೊಲ್ಲಬಹುದು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅದೇ ರೀತಿ ಇಸ್ಲಾಮಿನ ಸ್ಥಂಭಗಳಲ್ಲಿ ಯಾವುದಾದರೂ ಒಂದು ಸ್ಥಂಭವನ್ನು ನಿಷೇಧಿಸುವ ವ್ಯಕ್ತಿಯನ್ನು, ಆತ 'ಲಾ ಇಲಾಹ ಇಲ್ಲಲ್ಲಾಹ್' ಉಚ್ಚರಿಸಿದ ವ್ಯಕ್ತಿಯಾಗಿದ್ದರೂ ಸಹ, ಆತನನ್ನು ಕಾಫಿರ್ ಎಂದು ಕರೆಯಬಹುದು ಮತ್ತು ಆತನನ್ನು ಕೊಲ್ಲಬಹುದು ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

ಶಾಖೆಗಳಾಗಿರುವ ಇಂತಹ ವಿಷಯಗಳನ್ನು ನಿಷೇಧಿಸುವವನಿಗೆ 'ಲಾ ಇಲಾಹ ಇಲ್ಲಲ್ಲಾಹ್' ಪ್ರಯೋಜನ ಪಡುವುದಿಲ್ಲವೆಂದಾದರೆ, ರಸೂಲರು ತಂದ ಧರ್ಮದ ಮೂಲಭೂತ ಬುನಾದಿ ಮತ್ತು ಶಿರಸ್ಸಾಗಿರುವ ತೌಹೀದನ್ನು ನಿಷೇಧಿಸುವ ವ್ಯಕ್ತಿಗೆ ಅದು ಹೇಗೆ ತಾನೆ ಪ್ರಯೋಜನಪಡಲು ಸಾಧ್ಯ? ಆದರೆ ವಾಸ್ತವವೇನೆಂದರೆ ಅಲ್ಲಾಹನ ಶತ್ರುಗಳು ಈ ಹದೀಸಿನ ಅರ್ಥವನ್ನು ಸರಿಯಾಗಿ ಗ್ರಹಿಸಿಕೊಂಡಿಲ್ಲ ಎಂಬುದಾಗಿದೆ."

ಅವರು ಮುಂದುವರಿದು ಹೇಳುತ್ತಾರೆ:

"ತಾನು ಮುಸ್ಲಿಮ್ ಎಂದು ವಾದಿಸಿದ ವ್ಯಕ್ತಿಯನ್ನು ಉಸಾಮಃ(ﷺ) ರವರು ಕೊಂದದ್ದೇಕೆಂದರೆ, ತನ್ನ ಪ್ರಾಣ ಮತ್ತು ಸೊತ್ತನ್ನು ಕಾಪಾಡುವುದಕ್ಕೋಸ್ಕರ ವಲ್ಲದೆ ಆ ವ್ಯಕ್ತಿ ಅದನ್ನು ವಾದಿಸಿಲ್ಲವೆಂದು ಉಸಾಮಃ(ﷺ)ರವರು ಭಾವಿಸಿದರು. ಒಬ್ಬ ವ್ಯಕ್ತಿ ತಾನು ಮುಸ್ಲಿಮ್ ಎಂದು ವಾದಿಸಿದರೆ, ಅದಕ್ಕೆ ವಿರುದ್ಧವಾಗಿರುವ ಏನನ್ನಾದರೂ ಆತ ಮಾಡಿದ್ದಾನೆ ಎಂದು ಸ್ಪಷ್ಟವಾಗುವ

ತನಕ ಆತನನ್ನು ಕೊಲ್ಲಬಾರದು. ಈ ವಿಷಯದ ಬಗ್ಗೆ ಅಲ್ಲಾಹು ಈ ಆಯತ್ತನ್ನು ಅವತೀರ್ಣಗೊಳಿಸಿದನು:

﴿يَا أَيُّهَا الَّذِينَ آمَنُوا إِذَا ضَرَبْتُمْ فِي سَبِيلِ اللَّهِ فَتَبَيَّنُوا﴾

**"ಓ ವಿಶ್ವಾಸವಿಟ್ಟವರೇ, ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುತ್ತಿರುವಾಗ ಪರಿಶೋಧನೆ ಮಾಡಿರಿ."** [46]

ಅಂದರೆ ಪರಿಶೋಧನೆ ಮಾಡಿ ರುಜುವಾತುಪಡಿಸಿರಿ ಎಂದರ್ಥ. ಆದ್ದರಿಂದ ಅವನನ್ನು ಕೊಲ್ಲದೆ ಪರಿಶೋಧನೆ ಮಾಡಬೇಕೆಂದು ಈ ಆಯತ್ ಸೂಚಿಸುತ್ತದೆ. ಇದರ ಬಳಿಕ ಅವನು ಇಸ್ಲಾಮಿಗೆ ವಿರುದ್ಧವಾಗಿರುವ ಏನನ್ನಾದರೂ ಮಾಡಿದ್ದಾನೆಂದು ಸ್ಪಷ್ಟವಾದರೆ ಆತನನ್ನು ಕೊಲ್ಲಬೇಕು. ಯಾಕೆಂದರೆ ಅಲ್ಲಾಹು "ಪರಿಶೋಧನೆ ಮಾಡಿರಿ" ಎಂದು ಹೇಳಿದ್ದಾನೆ. ಒಂದು ವೇಳೆ 'ಲಾ ಇಲಾಹ ಇಲ್ಲಲ್ಲಾಹ್' ಉಚ್ಛರಿಸಿದವನನ್ನು ಕೊಲ್ಲಬಾರದು ಎಂದಾಗಿದ್ದರೆ 'ಪರಿಶೋಧನೆ ಮಾಡಿರಿ' ಎಂದು ಹೇಳುವುದಕ್ಕೆ ಯಾವುದೇ ಅರ್ಥವಿರುತ್ತಿರಲಿಲ್ಲ.

ಇದೇ ರೀತಿಯಾಗಿದೆ ಆ ಇನ್ನೊಂದು ಹದೀಸ್ ಮತ್ತು ಅದೇ ಅರ್ಥದಲ್ಲಿರುವ ಹದೀಸ್‌ಗಳು. ಅವುಗಳ ಅರ್ಥ: ಇಸ್ಲಾಮ್ ಮತ್ತು ತೌಹೀದನ್ನು ಬಹಿರಂಗಪಡಿಸಿದವನನ್ನು, ಅದಕ್ಕೆ ವಿರುದ್ಧವಾಗಿರುವ ಏನನ್ನಾದರೂ ಆತ ಮಾಡಿದ್ದಾನೆ ಎಂದು ಸ್ಪಷ್ಟವಾದ ಬಳಿಕವೇ ಹೊರತು ಆತನನ್ನು ಕೊಲ್ಲಬಾರದು ಎಂದಾಗಿದೆ.

ಇದಕ್ಕಿರುವ ಪುರಾವೆಯೇನೆಂದರೆ,

---

[46] ಸೂರಃ ಅನ್ನಿಸಾಅ್ 94

« أَقَتَلْتَهُ بَعْدَ مَا قَالَ لَا إِلَهَ إِلَّا اللَّهُ ».

**“ಲಾ ಇಲಾಹ ಇಲ್ಲಲ್ಲಾಹ್ ಉಚ್ಚರಿಸಿದ ಬಳಿಕವೂ ತಾವು ಆ ವ್ಯಕ್ತಿಯನ್ನು ಹತ್ಯೆ ಮಾಡಿದಿರಾ?”** [47] ಎಂದು ಹೇಳಿದ, ಮತ್ತು

« أُمِرْتُ أَنْ أُقَاتِلَ النَّاسَ حَتَّى يَقُولُوا لَا إِلَهَ إِلَّا اللَّهُ ».

**“ಲಾ ಇಲಾಹ ಇಲ್ಲಲ್ಲಾಹ್ ಉಚ್ಚರಿಸುವ ತನಕ ಜನರೊಂದಿಗೆ ಯುದ್ಧ ಮಾಡುವಂತೆ ನನ್ನೊಂದಿಗೆ ಆಜ್ಞಾಪಿಸಲಾಗಿದೆ.”** [48] ಎಂದು ಹೇಳಿದ ಪ್ರವಾದಿ(ﷺ)ರವರೇ ಖವಾರಿಜ್‌ಗಳ ಬಗ್ಗೆ ಈ ಕೆಳಗಿನಂತೆ ಹೇಳಿದ್ದಾರೆ:

« أَيْنَمَا لَقِيتُمُوهُمْ فَاقْتُلُوهُمْ، لَئِنْ أَدْرَكْتُهُمْ لَأَقْتُلَنَّهُمْ قَتْلَ عَادٍ ».

“ಅವರನ್ನು ಎಲ್ಲೇ ಕಂಡರೂ ನೀವು ಅವರನ್ನು ಕೊಂದು ಹಾಕಿರಿ. ನಾನೇನಾದರೂ ಅವರನ್ನು ಕಂಡರೆ ಆದ್ ಸಮುದಾಯದವರನ್ನು ಕೊಂದಂತೆ ಅವರನ್ನು ಕೊಲ್ಲುವೆನು.” [49]

ಆದರೆ ಖವಾರಿಜ್‌ಗಳು ಜನರಲ್ಲೇ ಅತಿಹೆಚ್ಚು ತಹ್ಲೀಲ್ (ಲಾ ಇಲಾಹ ಇಲ್ಲಲ್ಲಾಹ್) ಹೇಳುವವರಾಗಿದ್ದರು. ಎಲ್ಲಿಯವರೆಗೆಂದರೆ ಸಹಾಬಾಗಳು ಕೂಡ ತಮ್ಮಿಂದ ಇಲ್ಮ್ ಕಲಿತ ಖವಾರಿಜ್‌ಗಳ ಮುಂದೆ ಸ್ವತಃ ತಮ್ಮನ್ನು ಕೀಳಾಗಿ ಕಾಣುತ್ತಿದ್ದರು. ಆದರೂ ಅವರು ಶರೀಅತ್ತಿಗೆ ವಿರುದ್ಧವಾಗಿ ಸಾಗಿದಾಗ ಅವರಿಗೆ ‘ಲಾ ಇಲಾಹ ಇಲ್ಲಲ್ಲಾಹ್’ ಆಗಲಿ, ಹೇರಳ ಇಬಾದತ್‌ಗಳಾಗಲಿ, ಅಥವಾ ಮುಸ್ಲಿಮರೆಂಬ ವಾದವಾಗಲಿ, ಅವರಿಗೆ ಪ್ರಯೋಜನಪಡಲಿಲ್ಲ. ನಾವು

---

[47] ಅಲ್‌ಬುಖಾರೀ 4021; ಮುಸ್ಲಿಮ್ 96; ಅಹ್ಮದ್ 5/200

[48] ಅಲ್‌ಬುಖಾರೀ 385; ಅತ್ತಿರ್ಮಿದೀ 2608; ಅನ್ನಸಾಈ 3967; ಅಬೂ ದಾವೂದ್ 2641; ಅಹ್ಮದ್ 3/225

[49] ಅನ್ನಸಾಈ 2578

ಈಗಾಗಲೇ ಪ್ರಸ್ತಾಪಿಸಿದ ಯಹೂದಿಗಳೊಂದಿಗಿರುವ ಯುದ್ಧ ಮತ್ತು ಸಹಾಬಾಗಳು ಬನೂ ಹನೀಫಃ ಗೋತ್ರದವರೊಂದಿಗೆ ಮಾಡಿದ ಯುದ್ಧವು ಇದೇ ರೀತಿಯಾಗಿದೆ." ಶೈಖ್‌ರವರ ಮಾತು ಇಲ್ಲಿಗೆ ಕೊನೆಗೊಳ್ಳುತ್ತದೆ.

**ಅಲ್‌ಹಾಫಿಝ್ ಇಬ್ನ್ ರಜಬ್‌ರವರು ಏನೆನ್ನುತ್ತಾರೆ?**

ಅಲ್‌ಹಾಫಿಝ್ ಇಬ್ನ್ ರಜಬ್‌ರವರು ತಮ್ಮ 'ಕಲಿಮತುಲ್ ಇಖ್ಲಾಸ್' ಎಂಬ ಗ್ರಂಥದಲ್ಲಿ

« أُمِرْتُ أَنْ أُقَاتِلَ النَّاسَ حَتَّى يَشْهَدُوا أَنْ لَا إِلَهَ إِلَّا اللَّهُ وَأَنَّ مُحَمَّدًا رَسُولُ اللَّهِ ».

**"ಜನರು ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದು ರ‍್ರಸೂಲುಲ್ಲಾಹ್ ಎಂದು ಸಾಕ್ಷಿ ನುಡಿಯುವ ತನಕ ಅವರೊಂದಿಗೆ ಯುದ್ಧ ಮಾಡುವಂತೆ ನನಗೆ ಆಜ್ಞಾಪಿಸಲಾಗಿದೆ."**[50] ಎಂಬ ಪ್ರವಾದಿ(ﷺ)ರವರ ವಚನದ ಬಗ್ಗೆ ಹೇಳುತ್ತಾರೆ:

"ಯಾರಾದರೂ ಎರಡು ಶಹಾದತ್‌ಗಳನ್ನು (ಅಂದರೆ ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದು ರ‍್ರಸೂಲುಲ್ಲಾಹ್ ಎಂದು) ಹೇಳಿದರೆ, ಕೇವಲ ಅದನ್ನು ಉಚ್ಛರಿಸಿದ ಕಾರಣದಿಂದಾಗಿ ಅವರು ಐಹಿಕ ಶಿಕ್ಷೆಯಿಂದ ಪಾರಾಗುತ್ತಾರೆಂದು ಉಮರ್(رضي الله عنه) ಮತ್ತು ಸಹಾಬಾಗಳ ಒಂದು ಗುಂಪು ಈ ಹದೀಸಿನಿಂದ ಅರ್ಥ ಮಾಡಿಕೊಂಡಿದ್ದರು. ಆದ್ದರಿಂದ ಝಕಾತ್ ಕೊಡಲು ನಿರಾಕರಿಸಿದ ಜನರೊಂದಿಗೆ ಯುದ್ಧ ಮಾಡಲು ಅವರು ಹಿಂಜರಿದರು. ಆದರೆ 'ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದು ರ‍್ರಸೂಲುಲ್ಲಾಹ್' ಎಂದು ಸಾಕ್ಷಿ ನುಡಿದ ವ್ಯಕ್ತಿ ಅದರ ಹಕ್ಕುಗಳನ್ನು ನೆರವೇರಿಸದಿದ್ದರೆ ಅವನೊಂದಿಗೆ ಯುದ್ಧ ಮಾಡುವುದಕ್ಕೆ ಅದು

50 ಅಲ್‌ಬುಖಾರೀ 25; ಮುಸ್ಲಿಮ್ 22

ತಡೆಯಾಗುವುದಿಲ್ಲವೆಂದು ಅಬೂ ಬಕ್ರ್ ಅಸ್ಸಿದ್ದೀಕ್(ﷺ) ಅರ್ಥ ಮಾಡಿಕೊಂಡಿದ್ದರು. ಯಾಕೆಂದರೆ ಪ್ರವಾದಿ(ﷺ)ರವರು ಹೇಳುತ್ತಾರೆ:

« فَإِذَا فَعَلُوا ذَلِكَ مَنَعُوا مِنِّي دِمَاءَهُمْ إِلَّا بِحَقِّهَا وَحِسَابُهُمْ عَلَى اللَّهِ ».

**"ಅವರು (ಜನರು) ಅದನ್ನು ಮಾಡಿದರೆ (ಅಂದರೆ ಅವರು ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದು ರ್ರಸೂಲುಲ್ಲಾಹ್ ಎಂದು ಹೇಳಿದರೆ) ಅವರು ಅವರ ರಕ್ತಗಳನ್ನು ನನ್ನಿಂದ ತಡೆಗಟ್ಟಿದರು. ಆದರೆ ಅದರ ಹಕ್ಕುಗಳನ್ನು ನೆರವೇರಿಸಿದರೆ ಮಾತ್ರ. ಅವರನ್ನು ವಿಚಾರಣೆ ಮಾಡಬೇಕಾದ ಹೊಣೆಯು ಅಲ್ಲಾಹನ ಮೇಲಾಗಿದೆ."** [51]

ಮತ್ತು ಪ್ರವಾದಿ(ﷺ)ರವರು ಹೇಳುತ್ತಾರೆ:

« الزَّكَاةُ حَقُّ الْمَالِ »

**"ಝಕಾತ್ ಸಂಪತ್ತಿನ ಹಕ್ಕಾಗಿದೆ."** [52]

ಅಬೂ ಬಕ್ರ್ ಅಸ್ಸಿದ್ದೀಕ್(ﷺ)ರವರು ಏನನ್ನು ಅರ್ಥ ಮಾಡಿಕೊಂಡಿದ್ದರೋ ಅದನ್ನೇ ಇಬ್ನ್ ಉಮರ್(ﷺ), ಅನಸ್(ﷺ) ಮೊದಲಾದವರು ಸೇರಿದಂತೆ ಅನೇಕ ಸಹಾಬಾಗಳು ಪ್ರವಾದಿ(ﷺ)ರವರಿಂದ ಸ್ಪಷ್ಟವಾಗಿ ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

---

[51] ಅಲ್‌ಬುಖಾರೀ 25; ಮುಸ್ಲಿಮ್ 22

[52] ಅಲ್‌ಬುಖಾರೀ 1335; ಮುಸ್ಲಿಮ್ 20; ಅತ್ತಿರ್ಮಿದೀ 2607; ಅನ್ನಸಾಈ 3096; ಅಬೂ ದಾವೂದ್ 1556; ಅಹ್ಮದ್ 1/19

« أُمِـرْتُ أَنْ أُقَاتِـلَ النَّـاسَ حَـتَّى يَشْـهَدُوا أَنْ لَا إِلَهَ إِلَّا اللَّهُ وَأَنَّ مُحَمَّـدًا رَسُـولُ اللَّهِ وَيُقِيمُوا الصَّلَاةَ وَيُؤْتُوا الزَّكَاةَ ».

**“ಜನರು ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದು ರ್ರಸೂಲುಲ್ಲಾಹ್ ಎಂದು ಸಾಕ್ಷಿ ನುಡಿಯುವ ತನಕ, ನಮಾಝನ್ನು ಸಂಸ್ಥಾಪಿಸುವ ತನಕ ಮತ್ತು ಝಕಾತ್ ನೀಡುವ ತನಕ ಅವರೊಂದಿಗೆ ಯುದ್ಧ ಮಾಡುವಂತೆ ನನಗೆ ಆಜ್ಞಾಪಿಸಲಾಗಿದೆ.”** [53]

﴿فَإِنْ تَابُوا وَأَقَامُوا الصَّلَاةَ وَآتَوُا الزَّكَاةَ فَخَلُّوا سَبِيلَهُمْ﴾

**“ಇನ್ನು ಅವರೇನಾದರೂ ಪಶ್ಚಾತ್ತಾಪಪಟ್ಟರೆ, ನಮಾಝ್ ಸಂಸ್ಥಾಪಿಸಿದರೆ ಮತ್ತು ಝಕಾತ್ ನೀಡಿದರೆ ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿರಿ.”** [54] ಎಂಬ ಅಲ್ಲಾಹನ ವಚನವು ಸೂಚಿಸುವಂತೆ ಮತ್ತು

﴿فَإِنْ تَابُوا وَأَقَامُوا الصَّلَاةَ وَآتَوُا الزَّكَاةَ فَإِخْوَانُكُمْ فِي الدِّينِ﴾

“ಇನ್ನು ಅವರೇನಾದರೂ ಪಶ್ಚಾತ್ತಾಪಪಟ್ಟರೆ, ನಮಾಝ್ ಸಂಸ್ಥಾಪಿಸಿದರೆ ಮತ್ತು ಝಕಾತ್ ನೀಡಿದರೆ ಅವರು ಧರ್ಮದಲ್ಲಿ ನಿಮ್ಮ ಸಹೋದರರಾಗಿದ್ದಾರೆ.” [55] ಎಂಬ ವಚನವು ಸೂಚಿಸುವಂತೆ ತೌಹೀದ್‌ನಲ್ಲಿದ್ದು ಕಡ್ಡಾಯ ಕರ್ಮಗಳನ್ನು ನೆರವೇರಿಸುವವನೊಂದಿಗೇ ಹೊರತು ಧಾರ್ಮಿಕವಾದ ಸಾಹೋದರ್ಯ ಸಂಬಂಧವು ಸ್ಥಾಪಿಸಲ್ಪಡುವುದಿಲ್ಲ. ಯಾಕೆಂದರೆ ತೌಹೀದ್‌ನ ಮೂಲಕವಲ್ಲದೆ ಶಿರ್ಕ್‌ನ ಬಗ್ಗೆ ತೌಬಾ ಮಾಡಲು ಸಾಧ್ಯವಿಲ್ಲ. ಅಬೂ ಬಕ್ರ್(ﷺ)ರವರು ಇದನ್ನು ಸಹಾಬಾಗಳಿಗೆ ತಿಳಿಸಿಕೊಟ್ಟಾಗ ಅವರು ತಮ್ಮ ಅಭಿಪ್ರಾಯದಿಂದ

---

[53] ಅಲ್‌ಬುಖಾರೀ 25; ಮುಸ್ಲಿಮ್ 22

[54] ಸೂರಃ ಅತ್ತೌಬಃ 5

[55] ಸೂರಃ ಅತ್ತೌಬಃ 11

ಹಿಂದೆ ಸರಿದರು ಮತ್ತು ಅಬೂ ಬಕ್ರ್(ﷺ)ರವರು ಹೇಳುವುದೇ ಸರಿಯೆಂದು ಕಂಡರು. ಎರಡು ಶಹಾದತ್‌ಗಳನ್ನು ಅನಿರ್ಬಂಧಿತವಾಗಿ ಉಚ್ಛರಿಸಿದ ವ್ಯಕ್ತಿಗೆ ಐಹಿಕ ಶಿಕ್ಷೆಯಿಂದ ವಿಮುಕ್ತಿ ನೀಡಲಾಗದು. ಬದಲಾಗಿ ಇಸ್ಲಾಮಿನ ಹಕ್ಕುಗಳ ಪೈಕಿ ಯಾವುದಾದರೊಂದನ್ನು ಆತ ಉಲ್ಲಂಘಿಸಿದರೆ ಆತನನ್ನು ಶಿಕ್ಷಿಸಲಾಗುವುದು ಎಂಬುದನ್ನು ಅರಿತುಕೊಂಡರೆ, ಪರಲೋಕ ಶಿಕ್ಷೆಯೂ ಕೂಡ ಇದೇ ರೀತಿಯಲ್ಲಾಗಿದೆ ಎಂಬುದನ್ನು ಅರಿತುಕೊಳ್ಳಬೇಕಾಗಿದೆ."

ಅವರು ಮುಂದುವರಿದು ಹೇಳುತ್ತಾರೆ:

"ಕೆಲವು ವಿದ್ವಾಂಸರು ಹೇಳುತ್ತಾರೆ: ಲಾ ಇಲಾಹ ಇಲ್ಲಲ್ಲಾಹ್ ಎಂದು ಉಚ್ಛರಿಸುವುದು ಸ್ವರ್ಗ ಪ್ರವೇಶಕ್ಕಿರುವ ಮತ್ತು ನರಕದಿಂದ ಹೊರ ಬರುವುದಕ್ಕಿರುವ ಕಾರಣವಾಗಿದೆ ಮತ್ತು ಅದರ ಆವಶ್ಯಕತೆಯಾಗಿದೆ.

ಆದರೆ ಆವಶ್ಯಕತೆಯು (ಅಂದರೆ ಲಾ ಇಲಾಹ ಇಲ್ಲಲ್ಲಾಹ್), ಅದರ ಶರತ್ತುಗಳನ್ನು ಈಡೇರಿಸಿ, ಅದಕ್ಕೆ ಮುಂದಾಗುವ ಅಡ್ಡಿಗಳನ್ನು ನಿವಾರಿಸಿದ ಹೊರತು ತನ್ನ ಕೆಲಸವನ್ನು ಮಾಡದು. ಅದರ ಶರತ್ತುಗಳ ಪೈಕಿ ಒಂದು ಶರತ್ತನ್ನು ಈಡೇರಿಸದಿದ್ದರೆ ಅಥವಾ ಒಂದು ತಡೆಯು ಅಸ್ತಿತ್ವದಲ್ಲಿದ್ದರೆ, ಆ ಆವಶ್ಯಕತೆಯು ಹಿಂದೆಯೇ ಉಳಿದುಬಿಡುತ್ತದೆ. ಇದು ಅಲ್‌ಹಸನ್ ಅಲ್‌ಬಸ್ರೀ, ವಹ್ಬ್ ಇಬ್ನ್ ಮುನಬ್ಬಹ್ ಮೊದಲಾದವರ ಅಭಿಪ್ರಾಯವಾಗಿದೆ. ಇದು ಅತ್ಯಂತ ಸ್ಪಷ್ಟ ಅಭಿಪ್ರಾಯವಾಗಿದೆ.

ಅಲ್‌ಫರಝ್ದಕ್ ಎಂಬವರು ತಮ್ಮ ಪತ್ನಿಯನ್ನು ದಫನ ಮಾಡುತ್ತಿದ್ದ ಸಂದರ್ಭದಲ್ಲಿ ಅಲ್‌ಹಸನ್ ಅಲ್‌ಬಸ್ರೀರವರು ಅವರೊಂದಿಗೆ ಕೇಳಿದರು:

"ಈ ದಿನಕ್ಕಾಗಿ ತಾವೇನು ತಯಾರಿ ಮಾಡಿಕೊಂಡಿದ್ದೀರಿ?"

ಅಲ್‌ಫರಝ್ದಕ್ ಹೇಳಿದರು:

“ಕಳೆದ ಎಪ್ಪತ್ತು ವರ್ಷಗಳಿಂದ ಲಾ ಇಲಾಹ ಇಲ್ಲಲ್ಲಾಹ್ ಎಂಬ ಶಹಾದತ್ತನ್ನು ತಯಾರಿ ಮಾಡಿಕೊಂಡಿದ್ದೇನೆ.”

ಆಗ ಅಲ್‌ಹಸನ್ ಅಲ್‌ಬಸ್ರೀ ಹೇಳಿದರು:

نِعْمَ الْعُدَّةُ، لَكِنْ لَا إِلَهَ إِلَّا اللَّهُ لَهَا شُرُوطٌ، فَإِيَّاكَ وَقَذْفَ الْمُحْصَنَاتِ.

**“ಅದು ಅತ್ಯುತ್ತಮವಾದ ತಯಾರಿಯಾಗಿದೆ. ಆದರೆ ಲಾ ಇಲಾಹ ಇಲ್ಲಲ್ಲಾಹ್ ಎಂಬ ಶಹಾದತ್ತಿಗೆ ಕೆಲವು ಶರತ್ತುಗಳಿವೆ. ಆದ್ದರಿಂದ ಸುಶೀಲೆಯರ ಮೇಲೆ ವ್ಯಭಿಚಾರಾರೋಪ ಮಾಡುವುದರ ಬಗ್ಗೆ ಎಚ್ಚರ ವಹಿಸಿರಿ.”**

ಒಮ್ಮೆ ಅಲ್‌ಹಸನ್ ಅಲ್‌ಬಸ್ರೀರೊಂದಿಗೆ ಹೇಳಲಾಯಿತು: “ಲಾ ಇಲಾಹ ಇಲ್ಲಲ್ಲಾಹ್ ಉಚ್ಛರಿಸಿದವನು ಸ್ವರ್ಗವನ್ನು ಪ್ರವೇಶಿಸುತ್ತಾನೆಂದು ಜನರು ಹೇಳುತ್ತಿದ್ದಾರೆ.”

ಆಗ ಅವರು ಹೇಳಿದರು:

مَنْ قَالَ لَا إِلَهَ إِلَّا اللَّهُ فَأَدَّى حَقَّهَا وَفَرْضَهَا دَخَلَ الْجَنَّةَ.

**“ಲಾ ಇಲಾಹ ಇಲ್ಲಲ್ಲಾಹ್ ಉಚ್ಛರಿಸಿದವನು ಅದರ ಹಕ್ಕುಗಳನ್ನು ಮತ್ತು ಕಡ್ಡಾಯಗಳನ್ನು ನೆರವೇರಿಸಿದರೆ ಅವನು ಸ್ವರ್ಗವನ್ನು ಪ್ರವೇಶಿಸುವನು.”**

ವಹ್ಬ್ ಇಬ್ನ್ ಮುನಬ್ಬಹ್‌ರೊಂದಿಗೆ ಒಬ್ಬ ವ್ಯಕ್ತಿ ಹೇಳಿದರು: “ಲಾ ಇಲಾಹ ಇಲ್ಲಲ್ಲಾಹ್ ಎಂಬುದು ಸ್ವರ್ಗದ ಕೀಲಿಕೈಯಲ್ಲವೇ?”

ಆಗ ಅವರು ಉತ್ತರಿಸಿದರು:

بَلَى، وَلَكِنْ مَا مِنْ مِفْتَاحٍ إِلَّا لَهُ أَسْنَانٌ، فَإِنْ جِئْتَ بِمِفْتَاحٍ لَهُ أَسْنَانٌ فَتَحَ لَكَ، وَإِلَّا لَمْ يَفْتَحْ لَكَ.

**“ಹೌದು, ಆದರೆ ಹಲ್ಲುಗಳಿಲ್ಲದ ಒಂದೇ ಒಂದು ಕೀಲಿಕೈಯಿಲ್ಲ. ನೀನು ಹಲ್ಲುಗಳಿರುವ ಕೀಲಿಕೈಯನ್ನು ತಂದರೆ ಅದು ನಿನಗೆ ತೆರೆದು ಕೊಡುತ್ತದೆ. ಇಲ್ಲದಿದ್ದರೆ ಅದು ನಿನಗೆ ತೆರೆದು ಕೊಡುವುದಿಲ್ಲ.”**

ಲಾ ಇಲಾಹ ಇಲ್ಲಲ್ಲಾಹ್ ಉಚ್ಛರಿಸಿದ ವ್ಯಕ್ತಿ, ಅದಕ್ಕೆ ಸಂಪೂರ್ಣ ವಿರುದ್ಧವಾಗಿರುವ ಮತ್ತು ಅದನ್ನು ಪೂರ್ಣವಾಗಿ ವಿರೋಧಾಭಾಸ ಪ್ರಕಟಿಸುವ ರೀತಿಯಲ್ಲಿರುವ, ಅಂದರೆ ಇಂದು ಜನರು ಔಲಿಯಾಗಳ ಗೋರಿಗಳ ಬಳಿ ಮತ್ತು ದರ್ಗಾಗಳಲ್ಲಿ ಮಾಡುತ್ತಿರುವ ಹಿರಿಯ ಶಿರ್ಕ್‌ಗಳಲ್ಲಿ ಸೇರಿದ ಏನನ್ನೇ ಮಾಡಿದರೂ ಅವನು ಕಾಫಿರ್ ಆಗಲಾರನು ಎಂಬ ಸಂಶಯಕ್ಕೆ ಉಲಮಾಗಳ ಮಾತುಗಳಿಂದ ನಾನು ಉದ್ಧರಿಸಿದ ಈ ಹೇಳಿಕೆಗಳು ಧಾರಾಳ ಸಾಕು ಎಂದು ನಾನು ಭಾವಿಸುತ್ತೇನೆ. ಇದು ಪಥಭ್ರಷ್ಟ ಜನರ ಮಾರ್ಗವಾಗಿದೆ. ಅವರು ತಮಗೆ ಪೂರಕವಾಗಿರುವ ಪುರಾವೆಗಳೆಂದು ಭಾವಿಸುತ್ತಾ ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಮುಜ್ಮಲ್ (ಸಂಕ್ಷಿಪ್ತ) ಆಗಿ ವರದಿಯಾಗಿರುವ ವಚನಗಳನ್ನು ಹಿಡಿದುಕೊಳ್ಳುತ್ತಾರೆ ಮತ್ತು ಅವುಗಳನ್ನು ವಿವರಣಾತ್ಮಕವಾಗಿ ವಿವರಿಸಿಕೊಡುವ ವಚನಗಳನ್ನು ತಿರಸ್ಕರಿಸುತ್ತಾರೆ. ಇದು ಗ್ರಂಥದ ಕೆಲವು ಭಾಗಗಳಲ್ಲಿ ವಿಶ್ವಾಸವಿಡುವುದು ಮತ್ತು ಇತರ ಕೆಲವು ಭಾಗಗಳನ್ನು ನಿಷೇಧಿಸುವುದಕ್ಕೆ ಸಮಾನವಾಗಿದೆ. ಇಂತಹವರ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿هُوَ الَّذِي أَنْزَلَ عَلَيْكَ الْكِتَابَ مِنْهُ آيَاتٌ مُحْكَمَاتٌ هُنَّ أُمُّ الْكِتَابِ وَأُخَرُ مُتَشَابِهَاتٌ فَأَمَّا الَّذِينَ فِي قُلُوبِهِمْ زَيْغٌ فَيَتَّبِعُونَ مَا تَشَابَهَ مِنْهُ ابْتِغَاءَ الْفِتْنَةِ وَابْتِغَاءَ تَأْوِيلِهِ وَمَا يَعْلَمُ تَأْوِيلَهُ إِلَّا اللَّهُ وَالرَّاسِخُونَ فِي الْعِلْمِ يَقُولُونَ آمَنَّا بِهِ كُلٌّ مِنْ عِنْدِ

رَبَّنَا وَمَا يَذَّكَّرُ إِلَّا أُولُو الْأَلْبَابِ * رَبَّنَا لَا تُزِغْ قُلُوبَنَا بَعْدَ إِذْ هَدَيْتَنَا وَهَبْ لَنَا مِنْ لَدُنْكَ رَحْمَةً إِنَّكَ أَنْتَ الْوَهَّابُ * رَبَّنَا إِنَّكَ جَامِعُ النَّاسِ لِيَوْمٍ لَا رَيْبَ فِيهِ إِنَّ اللَّهَ لَا يُخْلِفُ الْمِيعَادَ﴾

**"(ಓ ಪ್ರವಾದಿಯವರೇ!) ತಮಗೆ ಗ್ರಂಥವನ್ನು ಅವತೀರ್ಣಗೊಳಿಸಿದವನು ಅವನೇ ಆಗಿರುವನು. ಅದರಲ್ಲಿ ಸುಸ್ಪಷ್ಟವೂ, ಖಚಿತವೂ ಆಗಿರುವ ವಚನಗಳಿವೆ. ಅವು ಗ್ರಂಥದ ಮೂಲಭಾಗವಾಗಿವೆ. ಅರ್ಥದಲ್ಲಿ ಪರಸ್ಪರ ಹೋಲಿಕೆಯಿರುವ ಕೆಲವು ವಚನಗಳೂ ಇವೆ. ಆದರೆ ಹೃದಯಗಳಲ್ಲಿ ವಕ್ರತೆಯುಳ್ಳವರಾರೋ ಅವರು ಗೊಂದಲವನ್ನುಂಟುಮಾಡಲು ಯತ್ನಿಸುತ್ತಲೂ ದುರ್ವ್ಯಾಖ್ಯಾನ ಮಾಡಲು ಹವಣಿಸುತ್ತಲೂ ಅರ್ಥದಲ್ಲಿ ಪರಸ್ಪರ ಹೋಲಿಕೆಯಿರುವ ವಚನಗಳನ್ನು ಹಿಂಬಾಲಿಸುವರು. ಅದರ ನೈಜ ವ್ಯಾಖ್ಯಾನವು ಅಲ್ಲಾಹುವಿನ ವಿನಾ ಯಾರಿಗೂ ತಿಳಿದಿಲ್ಲ. ಜ್ಞಾನದಲ್ಲಿ ಸುದೃಢರಾಗಿರುವರು ಹೇಳುವರು: 'ನಾವು ಅದರಲ್ಲಿ ವಿಶ್ವಾಸವಿಟ್ಟಿರುವೆವು. ಎಲ್ಲವೂ ನಮ್ಮ ರಬ್ಬ್‌ನ ವತಿಯಿಂದಾಗಿದೆ'. ಬುದ್ಧಿವಂತರು ಮಾತ್ರ ಚಿಂತಿಸಿ ಅರ್ಥಮಾಡಿಕೊಳ್ಳುವರು. (ಅವರು ಪ್ರಾರ್ಥಿಸುವರು:) 'ನಮ್ಮ ರಬ್ಬೇ! ನಮ್ಮನ್ನು ಸನ್ಮಾರ್ಗಕ್ಕೆ ಸೇರಿಸಿದ ಬಳಿಕ ನಮ್ಮ ಹೃದಯಗಳನ್ನು ವಕ್ರಗೊಳಿಸದಿರು. ನಿನ್ನ ವತಿಯ ದಯೆಯನ್ನು ನಮಗೆ ದಯಪಾಲಿಸು. ಖಂಡಿತವಾಗಿಯೂ ನೀನು ಅತ್ಯಧಿಕ ಔದಾರ್ಯವುಳ್ಳವನಾಗಿರುವೆ.' 'ನಮ್ಮ ರಬ್ಬೇ! ಖಂಡಿತವಾಗಿಯೂ ಒಂದು ದಿನ ನೀನು ಜನರೆಲ್ಲರನ್ನೂ ಒಟ್ಟುಗೂಡಿಸುವೆ. ಅದರಲ್ಲಿ ಅನುಮಾನವೇ ಇಲ್ಲ. ಖಂಡಿತವಾಗಿಯೂ ಅಲ್ಲಾಹು ವಾಗ್ದಾನವನ್ನು ಉಲ್ಲಂಘಿಸಲಾರನು'."** [56]

ಓ ಅಲ್ಲಾಹ್, ನಮಗೆ ಸತ್ಯವನ್ನು ಸತ್ಯವನ್ನಾಗಿ ತೋರಿಸಿಕೊಡು ಮತ್ತು ಅದನ್ನು ಅನುಸರಿಸುವ ಭಾಗ್ಯವನ್ನು ದಯಪಾಲಿಸು ಮತ್ತು ಸುಳ್ಳನ್ನು ಸುಳ್ಳನ್ನಾಗಿ ತೋರಿಸಿಕೊಡು ಮತ್ತು ಅದರಿಂದ ದೂರವಾಗುವ ಭಾಗ್ಯವನ್ನು ದಯಪಾಲಿಸು.

---

[56] ಸೂರಃ ಆಲು ಇಮ್ರಾನ್ 6–7

## آثَارُ لَا إِلَٰهَ إِلَّا اللَّهُ

# ‘ಲಾ ಇಲಾಹ ಇಲ್ಲಲ್ಲಾಹ್’ ದ ಪರಿಣಾಮಗಳು

ಈ ವಚನವನ್ನು ಯಾರಾದರೂ ಸತ್ಯಸಂಧತೆಯೊಂದಿಗೆ ಮತ್ತು ಇಖ್ಲಾಸ್‌ನೊಂದಿಗೆ ಉಚ್ಛರಿಸಿ, ಈ ವಚನವು ಆಂತರಿಕವಾಗಿ ಮತ್ತು ಬಾಹ್ಯವಾಗಿ ಏನನ್ನು ಆವಶ್ಯಪಡುತ್ತದೋ ಅದನ್ನು ನೆರವೇರಿಸಿದರೆ, ಈ ವಚನವು ವ್ಯಕ್ತಿ ಮತ್ತು ಸಮಾಜದ ಮೇಲೆ ಅತ್ಯುತ್ತಮವಾದ ಪರಿಣಾಮವನ್ನು ಬೀರುವುದು.

ಅವುಗಳಲ್ಲಿ ಕೆಲವು ಹೀಗಿವೆ:

1. ಈ ವಚನವು ಮುಸ್ಲಿಮರಿಗೆ ಶಕ್ತಿಯು ಲಭ್ಯವಾಗಲು ಮತ್ತು ಅವರಿಗೆ ಅವರ ಶತ್ರುಗಳ ವಿರುದ್ಧ ವಿಜಯವು ಲಭ್ಯವಾಗಲು ಅಗತ್ಯವಿರುವ ಒಗ್ಗಟ್ಟನ್ನು ನೀಡುತ್ತದೆ. ಯಾಕೆಂದರೆ ಈ ವಚನವನ್ನು ಉಚ್ಛರಿಸುವ ಮೂಲಕ ಮುಸ್ಲಿಮರು ಏಕೈಕ ಧರ್ಮ ಮತ್ತು ಏಕೈಕ ಅಕೀದಃದ ಕೆಳಗೆ ಒಗ್ಗೂಡುತ್ತಾರೆ:

ಅಲ್ಲಾಹು ಹೇಳುತ್ತಾನೆ:

﴿وَاعْتَصِمُوا بِحَبْلِ اللَّهِ جَمِيعًا وَلَا تَفَرَّقُوا﴾

**“ನೀವು ಒಟ್ಟಾಗಿ ಅಲ್ಲಾಹುವಿನ ಹಗ್ಗವನ್ನು ಬಿಗಿಯಾಗಿ ಹಿಡಿಯಿರಿ. ನೀವು ಭಿನ್ನರಾಗದಿರಿ.”** [57]

ಅಲ್ಲಾಹು ಹೇಳುತ್ತಾನೆ:

[57] ಸೂರಃ ಆಲು ಇಮ್ರಾನ್ 103

﴿هُوَ الَّذِي أَيَّدَكَ بِنَصْرِهِ وَبِالْمُؤْمِنِينَ * وَأَلَّفَ بَيْنَ قُلُوبِهِمْ لَوْ أَنْفَقْتَ مَا فِي الْأَرْضِ جَمِيعًا مَا أَلَّفْتَ بَيْنَ قُلُوبِهِمْ وَلَكِنَّ اللَّهَ أَلَّفَ بَيْنَهُمْ إِنَّهُ عَزِيزٌ حَكِيمٌ﴾

**"ತನ್ನ ಸಹಾಯದಿಂದಲೂ, ವಿಶ್ವಾಸಿಗಳಿಂದಲೂ ತಮಗೆ ಬೆಂಬಲವಿತ್ತವನು ಅವನೇ ಆಗಿರುವನು. ಅವನು ಅವರ (ವಿಶ್ವಾಸಿಗಳ) ಹೃದಯಗಳನ್ನು ಪರಸ್ಪರ ಬೆಸೆದಿರುವನು. ಭೂಮಿಯಲ್ಲಿರುವುದೆಲ್ಲವನ್ನೂ ತಾವು ವ್ಯಯಿಸಿದರೂ ಅವರ ಹೃದಯಗಳನ್ನು ಪರಸ್ಪರ ಬೆಸೆಯಲು ತಮ್ಮಿಂದಾಗುತ್ತಿರಲಿಲ್ಲ. ಆದರೆ ಅಲ್ಲಾಹು ಅವರನ್ನು ಪರಸ್ಪರ ಬೆಸೆದಿರುವನು. ಖಂಡಿತವಾಗಿಯೂ ಅವನು ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿರುವನು."** [58]

ಅಕೀದಃದಲ್ಲಿ ಭಿನ್ನಾಭಿಪ್ರಾಯವುಂಟಾದರೆ ಅದು ಗುಂಪುಗಾರಿಕೆ, ತರ್ಕ, ಪಕ್ಷಪಾತ ಇತ್ಯಾದಿಗಳಿಗೆ ಕಾರಣವಾಗುತ್ತದೆ. ಅಲ್ಲಾಹು ಹೇಳುತ್ತಾನೆ:

﴿إِنَّ الَّذِينَ فَرَّقُوا دِينَهُمْ وَكَانُوا شِيَعًا لَسْتَ مِنْهُمْ فِي شَيْءٍ﴾

**"ತಮ್ಮ ಧರ್ಮವನ್ನು ವಿಭಜನೆ ಮಾಡಿದವರು ಮತ್ತು ವಿವಿಧ ಬಣಗಳಾಗಿ ಮಾರ್ಪಟ್ಟವರು ಯಾರೋ ಅವರೊಂದಿಗೆ ತಮಗೆ ಯಾವುದೇ ಸಂಬಂಧವೂ ಇಲ್ಲ."** [59]

ಅಲ್ಲಾಹು ಹೇಳುತ್ತಾನೆ:

﴿فَتَقَطَّعُوا أَمْرَهُمْ بَيْنَهُمْ زُبُرًا كُلُّ حِزْبٍ بِمَا لَدَيْهِمْ فَرِحُونَ﴾

---

58 ಸೂರಃ ಅಲ್ಅನ್ಫಾಲ್ 62–63

59 ಸೂರಃ ಅಲ್ಅನ್ಆಮ್ 159

**“ಆದರೆ ಅವರು ಗುಂಪುಗಳಾಗಿ ವಿಭಜನೆಗೊಂಡು ತಮ್ಮ ವಿಷಯದಲ್ಲಿ ಪರಸ್ಪರ ಭಿನ್ನಮತ ತಾಳಿದರು. ಪ್ರತಿಯೊಂದು ಪಂಗಡವೂ ತಮ್ಮ ಬಳಿಯಿರುವುದರಲ್ಲಿ ಸಂತೃಪ್ತರಾಗುತ್ತಿದ್ದಾರೆ.”** [60]

ಲಾ ಇಲಾಹ ಇಲ್ಲಲ್ಲಾಹ್ ಸೂಚಿಸುವ ಈಮಾನ್ ಮತ್ತು ತೌಹೀದ್‌ನ ವಿಶ್ವಾಸವೇ ಹೊರತು ಇನ್ನಾವುದೂ ಜನರನ್ನು ಒಗ್ಗೂಡಿಸದು. ಇಸ್ಲಾಮ್‌ಗೆ ಮುಂಚೆ ಮತ್ತು ಇಸ್ಲಾಮ್‌ನ ನಂತರವಿರುವ ಅರಬಿಗಳ ಸ್ಥಿತಿಯನ್ನು ನೋಡಿದರೆ ಇದನ್ನು ಅರ್ಥ ಮಾಡಿಕೊಳ್ಳಬಹುದು.

2. ‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ಈ ವಚನದ ಆವಶ್ಯಕತೆಗಳ ಪ್ರಕಾರ ಬದುಕುವ ತೌಹೀದ್‌ನ ಜನರು ತುಂಬಿರುವ ಸಮಾಜದಲ್ಲಿ ನಿರ್ಭಯತೆ ಮತ್ತು ಶಾಂತಿಯಿರುವುದು. ಯಾಕೆಂದರೆ ಆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ, ಈ ವಿಶ್ವಾಸವು ಅವನಿಗೆ ನಿರ್ದೇಶಿಸುವ ಪ್ರಕಾರ ಅಲ್ಲಾಹು ಅವನಿಗೆ ಹಲಾಲ್ ಮಾಡಿದ್ದನ್ನು ಮಾತ್ರ ಪಡೆದುಕೊಳ್ಳುವನು ಮತ್ತು ಅಲ್ಲಾಹು ಅವನಿಗೆ ಹರಾಮ್ ಮಾಡಿದ್ದನ್ನು ಬಿಟ್ಟುಬಿಡುವನು. ಇದರಿಂದಾಗಿ ದ್ವೇಷ, ಅನ್ಯಾಯ, ಅಸೂಯೆ ಇತ್ಯಾದಿಗಳು ಮಾಯವಾಗಿ ಅದರ ಸ್ಥಾನದಲ್ಲಿ ಸಹಕಾರ, ಪ್ರೀತಿ ಮತ್ತು ಸ್ನೇಹವು ರಾರಾಜಿಸುವುದು.

ಅಲ್ಲಾಹು ಹೇಳುತ್ತಾನೆ:

﴿إِنَّمَا الْمُؤْمِنُونَ إِخْوَةٌ﴾

**“ಸತ್ಯವಿಶ್ವಾಸಿಗಳು (ಪರಸ್ಪರ) ಸಹೋದರರಾಗಿರುವರು.”** [61]

[60] ಸೂರಃ ಅಲ್‌ಮುಅ್‌ಮಿನೂನ್ 53

[61] ಸೂರಃ ಅಲ್‌ಹುಜುರಾತ್ 10

ವಿಶ್ವಾಸಿಗಳು ಪರಸ್ಪರ ಸಹೋದರರಾಗಿದ್ದಾರೆ ಎಂಬುದಕ್ಕಿರುವ ಜ್ವಲಂತ ಉದಾಹರಣೆಯನ್ನು, ‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ಈ ವಚನವನ್ನು ಸ್ವೀಕರಿಸುವುದಕ್ಕೆ ಮುಂಚಿನ ಅರಬಿಗಳ ಸ್ಥಿತಿಯನ್ನು ನೋಡಿದರೆ ತಿಳಿದು ಕೊಳ್ಳಬಹುದು. ಅವರು ಪರಸ್ಪರ ಕತ್ತುಗಳನ್ನು ಕೊಯ್ಯುವ ಪರಮ ಶತ್ರುಗಳಾಗಿದ್ದರು. ಕೊಲೆ, ಅತ್ಯಾಚಾರ, ದರೋಡೆ ಇತ್ಯಾದಿಗಳು ವ್ಯಾಪಕವಾಗಿದ್ದವು. ಆದರೆ ‘ಲಾ ಇಲಾಹ ಇಲ್ಲಲ್ಲಾಹ್’ ಎಂಬ ವಚನವನ್ನು ಸ್ವೀಕರಿಸಿದ ಬಳಿಕ ಅವರು ಪರಸ್ಪರ ಪ್ರೀತಿಸುವ ಸಹೋದರರಾದರು. ಅಲ್ಲಾಹು ಹೇಳುತ್ತಾನೆ:

﴿مُحَمَّدٌ رَسُولُ اللَّهِ وَالَّذِينَ مَعَهُ أَشِدَّاءُ عَلَى الْكُفَّارِ رُحَمَاءُ بَيْنَهُمْ﴾

**“ಮುಹಮ್ಮದ್ ಅಲ್ಲಾಹುವಿನ ಸಂದೇಶವಾಹಕರಾಗಿರುವರು. ಅವರ ಜೊತೆಗಿರು ವವರು ಸತ್ಯನಿಷೇಧಿಗಳ ಮೇಲೆ ಕಠೋರವಾಗಿ ವರ್ತಿಸುವವರಾಗಿರುವರು ಮತ್ತು ತಮ್ಮೊಳಗೆ ಅಪಾರ ದಯೆಯುಳ್ಳವರಾಗಿರುವರು.”** [62]

ಅಲ್ಲಾಹು ಹೇಳುತ್ತಾನೆ:

﴿وَاذْكُرُوا نِعْمَتَ اللَّهِ عَلَيْكُمْ إِذْ كُنْتُمْ أَعْدَاءً فَأَلَّفَ بَيْنَ قُلُوبِكُمْ فَأَصْبَحْتُمْ بِنِعْمَتِهِ إِخْوَانًا﴾

**“ಅಲ್ಲಾಹು ನಿಮಗೆ ದಯಪಾಲಿಸಿದ ಅನುಗ್ರಹವನ್ನು ಸ್ಮರಿಸಿರಿ. ನೀವು ಪರಸ್ಪರ ಶತ್ರುಗಳಾಗಿದ್ದಾಗ ಅವನು ನಿಮ್ಮ ಹೃದಯಗಳನ್ನು ಪರಸ್ಪರ ಬೆಸೆದನು. ಹಾಗೆ ಅವನ ಅನುಗ್ರಹದ ನಿಮಿತ್ತ ನೀವು ಸಹೋದರರಾಗಿ ಮಾರ್ಪಟ್ಟಿರಿ.”** [63]

---

[62] ಸೂರಃ ಅಲ್‌ಫತ್‌ಹ್ 29

[63] ಸೂರಃ ಆಲು ಇಮ್ರಾನ್ 103

3. 'ಲಾ ಇಲಾಹ ಇಲ್ಲಲ್ಲಾಹ್' ಎಂಬ ಈ ವಚನದಿಂದಾಗಿ ಭೂಮಿಯಲ್ಲಿ ನಾಯಕತ್ವ ಮತ್ತು ಉತ್ತರಾಧಿಕಾರ ಲಭ್ಯವಾಗುವುದು ಮತ್ತು ವಿಭಿನ್ನ ಪಥಭ್ರಷ್ಟ ವಿಚಾರಗಳ ಮತ್ತು ಸಿದ್ಧಾಂತಗಳ ವಿರುದ್ಧ ದೃಢತೆ ಮತ್ತು ಸ್ಥಿರತೆಯು ಲಭ್ಯವಾಗುವುದು.

ಅಲ್ಲಾಹು ಹೇಳುತ್ತಾನೆ:

﴿وَعَدَ اللَّهُ الَّذِينَ آمَنُوا مِنْكُمْ وَعَمِلُوا الصَّالِحَاتِ لَيَسْتَخْلِفَنَّهُمْ فِي الْأَرْضِ كَمَا اسْتَخْلَفَ الَّذِينَ مِنْ قَبْلِهِمْ وَلَيُمَكِّنَنَّ لَهُمْ دِينَهُمُ الَّذِي ارْتَضَى لَهُمْ وَلَيُبَدِّلَنَّهُمْ مِنْ بَعْدِ خَوْفِهِمْ أَمْنًا يَعْبُدُونَنِي لَا يُشْرِكُونَ بِي شَيْئًا﴾

**"ನಿಮ್ಮ ಪೈಕಿ ವಿಶ್ವಾಸವಿಟ್ಟವರು ಮತ್ತು ಸತ್ಕರ್ಮವೆಸಗಿದವರೊಂದಿಗೆ, ಅಲ್ಲಾಹು ಅವರಿಗಿಂತ ಮುಂಚಿನವರಿಗೆ ಭೂಮಿಯಲ್ಲಿ ಉತ್ತರಾಧಿಕಾರವನ್ನು ನೀಡಿದಂತೆ ಖಂಡಿತವಾಗಿಯೂ ಅವನು ಅವರಿಗೂ ಉತ್ತರಾಧಿಕಾರವನ್ನು ನೀಡುವನು, ಅವನು ಅವರಿಗೆ ಸಂತೃಪ್ತಿಯಿಂದ ನೀಡಿದ ಅವರ ಧರ್ಮದ ವಿಷಯದಲ್ಲಿ ಅವನು ಅವರಿಗೆ ಅಧಿಕಾರವನ್ನು ನೀಡುವನು ಮತ್ತು ಅವರಿಗುಂಟಾದ ಭಯಭೀತಿಯ ಬಳಿಕ ಅವನು ಅವರಿಗೆ ನಿರ್ಭೀತಿಯನ್ನು ಬದಲಿಸಿ ಕೊಡುವನು ಎಂದು ವಾಗ್ದಾನ ಮಾಡಿರುವನು. ಅವರು ನನ್ನನ್ನು (ಮಾತ್ರ) ಆರಾಧಿಸುವರು ಮತ್ತು ನನ್ನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡಲಾರರು."** [64]

ಅಲ್ಲಾಹನಿಗೆ ಮಾತ್ರ ಇಬಾದತ್ ಮಾಡುವ ಮೂಲಕ, ಅಂದರೆ 'ಲಾ ಇಲಾಹ ಇಲ್ಲಲ್ಲಾಹ್'ನ ಮೂಲಕ ಮಾತ್ರ ಭೂಮಿಯಲ್ಲಿ ಅಧಿಕಾರ ಸಿಗುವುದೆಂದು ಅಲ್ಲಾಹು ಈ ಆಯತ್ತಿನಲ್ಲಿ ಹೇಳುತ್ತಾನೆ.

---

[64] ಸೂರಃ ಅನ್ನೂರ್ 55

4. ಮನುಷ್ಯನಿಗೆ ಅತ್ಯಾವಶ್ಯಕವಾಗಿರುವ ಮನಃಶಾಂತಿ ಮತ್ತು ಮನೋದಾರ್ಢ್ಯವು 'ಲಾ ಇಲಾಹ ಇಲ್ಲಲ್ಲಾಹ್' ಎಂಬ ಈ ವಚನವನ್ನು ಉಚ್ಛರಿಸುವುದರಿಂದ ಮತ್ತು ಅದರ ಆವಶ್ಯಕತೆಗಳನ್ನು ಈಡೇರಿಸುವುದರಿಂದ ಲಭ್ಯವಾಗುತ್ತದೆ. ಯಾಕೆಂದರೆ 'ಲಾ ಇಲಾಹ ಇಲ್ಲಲ್ಲಾಹ್' ಉಚ್ಛರಿಸಿದವನು ಏಕೈಕ ರಬ್ಬ್‌ನನ್ನು ಆರಾಧಿಸುತ್ತಾನೆ. ಆ ರಬ್ಬ್‌ನ ಉದ್ದೇಶ ಮತ್ತು ಅವನ ಇಷ್ಟಗಳು ಯಾವುವೆಂದು ಅವನಿಗೆ ತಿಳಿದಿರುತ್ತದೆ. ಆದ್ದರಿಂದ ಅವನು ಅವುಗಳನ್ನು ಮಾಡುತ್ತಾನೆ. ಆ ರಬ್ಬ್‌ನನ್ನು ಕೋಪಗೊಳಿಸುವಂತಹ ವಿಷಯ ಗಳು ಯಾವುವೆಂದು ಅವನಿಗೆ ತಿಳಿದಿರುತ್ತದೆ. ಆದ್ದರಿಂದ ಅವನು ಅದರಿಂದ ಸಂಪೂರ್ಣ ದೂರವಾಗುತ್ತಾನೆ. ಆದರೆ ಅನೇಕ ಆರಾಧ್ಯರನ್ನು ಆರಾಧಿಸುವವರ ಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಆ ಆರಾಧ್ಯರಲ್ಲಿ ಪ್ರತಿಯೊಬ್ಬರಿಗೂ ಇನ್ನೊಬ್ಬರಿ ಗಿಲ್ಲದ ಉದ್ದೇಶಗಳಿರುತ್ತವೆ. ಒಬ್ಬರಿಗಿಲ್ಲದ ನಿಯಂತ್ರಣವು ಇನ್ನೊಬ್ಬರಿಗಿರುತ್ತದೆ. ಅಲ್ಲಾಹು ತಆಲಾ ಹೇಳುತ್ತಾನೆ:

﴿أَأَرْبَابٌ مُتَفَرِّقُونَ خَيْرٌ أَمِ اللَّهُ الْوَاحِدُ الْقَهَّارُ﴾

**"ವ್ಯತ್ಯಸ್ತರಾದ ಅನೇಕ ರಬ್ಬ್‌ಗಳಿರುವುದು ಉತ್ತಮವೋ, ಅಥವಾ ಏಕೈಕನೂ ಸರ್ವಾಧಿಕಾರಿಯೂ ಆಗಿರುವ ಅಲ್ಲಾಹುವೋ?"** [65]

ಅಲ್ಲಾಹು ಹೇಳುತ್ತಾನೆ:

﴿ضَرَبَ اللَّهُ مَثَلًا رَجُلًا فِيهِ شُرَكَاءُ مُتَشَاكِسُونَ وَرَجُلًا سَلَمًا لِرَجُلٍ هَلْ يَسْتَوِيَانِ مَثَلًا﴾

**"ಅಲ್ಲಾಹು ಒಬ್ಬ ವ್ಯಕ್ತಿಯನ್ನು ಉಪಮೆಯಾಗಿ ತೋರಿಸಿರುವನು. ಪರಸ್ಪರ ಜಗಳವಾಡುವ ಕೆಲವು ಪಾಲುದಾರರು ಅವನ ಯಜಮಾನರಾಗಿರುವರು. ಒಬ್ಬನೇ**

[65] ಸೂರಃ ಯೂಸುಫ್ 39

**ಯಜಮಾನನಿಗೆ ಮಾತ್ರ ಶರಣಾಗಬೇಕಾದ ಇನ್ನೊಬ್ಬನನ್ನೂ (ಉಪಮೆಯಾಗಿ ತೋರಿಸಿರುವನು). ಉಪಮೆಯಲ್ಲಿ ಇವರಿಬ್ಬರೂ ಸಮಾನರಾಗುವರೇ?"** [66]

ಇಮಾಮ್ ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

**"**ಇದು ಮುಶ್ರಿಕ್ (ಬಹುದೇವವಿಶ್ವಾಸಿ) ಮತ್ತು ಮುವಹ್ಹಿದ್ (ಏಕದೇವ ವಿಶ್ವಾಸಿ)ನನ್ನು ವಿವರಿಸಲು ಅಲ್ಲಾಹು ನೀಡಿದ ಉದಾಹರಣೆಯಾಗಿದೆ. ಮುಶ್ರಿಕ್ ಎಂದರೆ, ಪರಸ್ಪರ ತರ್ಕಿಸುವ, ಪರಸ್ಪರ ಭಿನ್ನರಾಗಿರುವ ಮತ್ತು ಪರಸ್ಪರ ಕಿತ್ತಾಡುವ ಒಂದು ಗುಂಪು ಯಜಮಾನರ ಕೆಳಗೆ ಕೆಲಸ ಮಾಡುವ ವನಾಗಿದ್ದಾನೆ. ಮುಶ್ರಿಕ್ ಆಗಿರುವ ವ್ಯಕ್ತಿ ಅನೇಕ ಆರಾಧ್ಯರುಗಳನ್ನು ಆರಾಧಿಸುವ ಕಾರಣದಿಂದ ಅವನನ್ನು ಸೇವೆ ಮಾಡಿಸುವುದರಲ್ಲಿ ಪರಸ್ಪರ ಸ್ಪರ್ಧಿಸುವ ಅನೇಕ ಯಜಮಾನರ ಕೆಳಗೆ ಕೆಲಸ ಮಾಡುವ ಗುಲಾಮನಿಗೆ ಹೋಲಿಸಲಾಗಿದೆ. ಈ ಎಲ್ಲ ಯಜಮಾನರನ್ನೂ ತೃಪ್ತಿಪಡಿಸಲು ಅವನಿಗೆ ಸಾಧ್ಯವಿಲ್ಲ.

ಆದರೆ ಮುವಹ್ಹಿದ್ ಆಗಿರುವ ವ್ಯಕ್ತಿ ಏಕೈಕ ಅಲ್ಲಾಹನನ್ನು ಮಾತ್ರ ಆರಾಧಿಸುವುದರಿಂದ ಅವನನ್ನು ಒಬ್ಬ ಯಜಮಾನನ ಕೆಳಗೆ ಕೆಲಸ ಮಾಡುವ ಗುಲಾಮನಿಗೆ ಹೋಲಿಸಲಾಗಿದೆ. ಅವನು ಆ ಯಜಮಾನನಿಗೆ ಪೂರ್ಣವಾಗಿ ಶರಣಾಗಿದ್ದಾನೆ. ಆ ಯಜಮಾನನ ಉದ್ದೇಶಗಳನ್ನು ಅವನು ಅರಿತುಕೊಂಡಿ ದ್ದಾನೆ. ಆ ಯಜಮಾನನನ್ನು ತೃಪ್ತಿಪಡಿಸುವ ಮಾರ್ಗ ಯಾವುದೆಂಬುದೂ ಅವನಿಗೆ ತಿಳಿದಿದೆ. ಇಂತಹ ವ್ಯಕ್ತಿ ಪೂರ್ಣ ನೆಮ್ಮದಿಯಲ್ಲಿರುವನು. ಯಜಮಾನನ ಕಿರುಕುಳದಿಂದಲೂ ಅವನು ಸುರಕ್ಷಿತನಾಗಿರುವನು. ಮಾತ್ರವಲ್ಲ, ಯಜಮಾನನ ಅನುಕಂಪ, ಕರುಣೆ, ಪ್ರೀತಿ ಮೊದಲಾದವುಗಳನ್ನು ಅವನು ಪಡೆಯುವನು. ಇಂತಹ ಒಬ್ಬ ವ್ಯಕ್ತಿ ಮತ್ತು ಅನೇಕ ಆರಾಧ್ಯರನ್ನು ಆರಾಧಿಸುವ ಮುಶ್ರಿಕ್ ಸರಿಸಮಾನರಾಗಲು ಸಾಧ್ಯವೇ?**"**

---

[66] ಸೂರಃ ಅಝ್ಝುಮರ್ 29

5. ‘ಲಾ ಇಲಾಹ ಇಲ್ಲಲ್ಲಾಹ್’ನ ಜನರಿಗೆ ಇಹಲೋಕದಲ್ಲೂ ಪರ ಲೋಕದಲ್ಲೂ ಔನ್ನತ್ಯವು ಲಭ್ಯವಾಗುವುದು. ಅಲ್ಲಾಹು ಹೇಳುತ್ತಾನೆ:

﴿حُنَفَاءَ لِلَّهِ غَيْرَ مُشْرِكِينَ بِهِ وَمَنْ يُشْرِكْ بِاللَّهِ فَكَأَنَّمَا خَرَّ مِنَ السَّمَاءِ فَتَخْطَفُهُ الطَّيْرُ أَوْ تَهْوِي بِهِ الرِّيحُ فِي مَكَانٍ سَحِيقٍ﴾

**“(ನೀವು) ಋಜುಮನಸ್ಕರಾಗಿ ಅಲ್ಲಾಹುವಿನೆಡೆಗೆ ತಿರುಗಿರಿ ಮತ್ತು ಅವನೊಂದಿಗೆ ಸಹಭಾಗಿತ್ವ ಮಾಡುವವರಾಗದಿರಿ. ಯಾರು ಅಲ್ಲಾಹು ವಿನೊಂದಿಗೆ ಸಹಭಾಗಿತ್ವ ಮಾಡುವನೋ ಅವನು ಆಕಾಶದಿಂದ ಕೆಳಕ್ಕೆ ಬಿದ್ದವನಂತಿರುವನು. ತರುವಾಯ ಹಕ್ಕಿಗಳು ಅವನನ್ನು ಕಸಿದುಕೊಂಡು ಹೋಗುವುವು. ಅಥವಾ ಗಾಳಿಯು ಅವನನ್ನು ವಿದೂರ ಸ್ಥಳಕ್ಕೆ ಕೊಂಡೊಯ್ಯುವುದು.”** [67]

ತೌಹೀದ್ ಎಂದರೆ ಔನ್ನತ್ಯವಾಗಿದೆ ಮತ್ತು ಶಿರ್ಕ್ ಎಂದರೆ ಅಧಃಪತನ ವಾಗಿದೆಯೆಂದು ಈ ಆಯತ್ ಸೂಚಿಸುತ್ತದೆ.

ಇಮಾಮ್ ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

“ಇಲ್ಲಿ ಈಮಾನ್ ಮತ್ತು ತೌಹೀದನ್ನು ಔನ್ನತ್ಯ, ವೈಶಾಲ್ಯತೆ ಮತ್ತು ಮಹಾತ್ಮೆಯಿಂದ ಕೂಡಿರುವ, ಮತ್ತು ಅದು ಇಳಿಯುವ ಮತ್ತು ಏರುವ ಸ್ಥಳವಾದ ಆಕಾಶದೊಂದಿಗೆ ಹೋಲಿಸಲಾಗಿದೆ. ಅದು ಇಲ್ಲಿಂದಲೇ ಭೂಮಿಗಿಳಿಯುತ್ತದೆ ಮತ್ತು ಭೂಮಿಯಿಂದ ಇಲ್ಲಿಗೆ ಏರುತ್ತದೆ. ಈಮಾನ್ ಮತ್ತು ತೌಹೀದನ್ನು ತ್ಯಜಿಸಿದ ವ್ಯಕ್ತಿಯನ್ನು ಆಕಾಶದಿಂದ ಪಾತಾಳಕ್ಕೆ ಬೀಳುವವನೊಂದಿಗೆ ಹೋಲಿಸಲಾಗಿದೆ. ಬೀಳುವಾಗ ಅವನು ತೀವ್ರ ಇಕ್ಕಟ್ಟನ್ನು ಮತ್ತು ವಿಪರೀತ ನೋವನ್ನು ಅನುಭವಿಸುತ್ತಾನೆ. ಹಕ್ಕಿಗಳು ಅವನ ಅಂಗಾಂಗಗಳನ್ನು ಕಿತ್ತುಕೊಂಡು ಹೋಗುವುದು ಮತ್ತು ಅವನನ್ನು ಹರಿದು

[67] ಸೂರಃ ಅಲ್‌ಹಜ್ಜ್ 31

ಚಿಂದಿ ಮಾಡುವುದನ್ನು ಅಲ್ಲಾಹು ಅವನ ಬಳಿಗೆ ಶೈತಾನರನ್ನು ಕಳುಹಿಸಿ, ಅವರು ಅವನನ್ನು ನಾಶದೆಡೆಗೆ ಒಯ್ಯುವುದರೊಂದಿಗೆ ಹೋಲಿಸಲಾಗಿದೆ. ಗಾಳಿಯು ಅವನನ್ನು ವಿದೂರ ಸ್ಥಳಕ್ಕೆ ಕೊಂಡೊಯ್ಯುವುದನ್ನು ಅವನ ಸ್ವೇಚ್ಛೆಯು ಅವನನ್ನು ಆಕಾಶದಿಂದ ಅತಿ ಕೆಳಗಿನ ಮತ್ತು ಅತಿ ವಿದೂರದ ಸ್ಥಳಕ್ಕೆ ಒಯ್ದು ಹಾಕುವುದರೊಂದಿಗೆ ಹೋಲಿಸಲಾಗಿದೆ."

6. 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನವು ಅದನ್ನು ಉಚ್ಛರಿಸಿದವನ ರಕ್ತ, ಸಂಪತ್ತು ಮತ್ತು ಘನತೆಯನ್ನು ರಕ್ಷಿಸುತ್ತದೆ. ಪ್ರವಾದಿ(ﷺ)ರವರು ಹೇಳಿದರು:

« أُمِرْتُ أَنْ أُقَاتِلَ النَّاسَ حَتَّى يَقُولُوا لَا إِلَهَ إِلَّا اللَّهُ، فَإِذَا قَالُوهَا عَصَمُوا مِنِّي دِمَـاءَهُمْ وَأَمْوَالَهُمْ إِلَّا بِحَقِّهَا ».

**"ಜನರು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳುವ ತನಕ ಅವರೊಂದಿಗೆ ಯುದ್ಧ ಮಾಡುವಂತೆ ನನ್ನೊಂದಿಗೆ ಆಜ್ಞಾಪಿಸಲಾಗಿದೆ. ಅವರು ಅದನ್ನು ಹೇಳಿದರೆ ಅವರು ತಮ್ಮ ರಕ್ತವನ್ನು ಮತ್ತು ಸಂಪತ್ತನ್ನು ನನ್ನಿಂದ ಸುರಕ್ಷಿತಗೊಳಿಸಿದರು. ಆದರೆ ಅದರ ಹಕ್ಕಿನೊಂದಿಗೆ ಹೊರತು."** [68]

ಅದರ ಹಕ್ಕಿನೊಂದಿಗೆ ಎಂದರೆ, ಅವರು 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನವನ್ನು ಉಚ್ಛರಿಸಿ ಅದರ ಹಕ್ಕುಗಳನ್ನು ನೆರವೇರಿಸುವ ಮೂಲಕ ತಮ್ಮನ್ನು ಸುರಕ್ಷಿತಗೊಳಿಸುವರು ಎಂದಾಗಿದೆ. ಅಂದರೆ ಆ ವಚನವು ಏನನ್ನು ಆವಶ್ಯಪಡುತ್ತದೋ ಆ ತೌಹೀದನ್ನು ಅಂಗೀಕರಿಸಿ ಶಿರ್ಕ್‌ನಿಂದಿರುವ ದೂರವಾಗುವರು ಮತ್ತು ಇಸ್ಲಾಮಿನ ಸ್ಥಂಭಗಳನ್ನು ಪೂರೈಸುವರು. ಈ ಹಕ್ಕುಗಳನ್ನು ನಿರ್ವಹಿಸದಿದ್ದರೆ ಅದು ಅವನ ಸಂಪತ್ತನ್ನಾಗಲಿ, ರಕ್ತವನ್ನಾಗಲಿ

[68] ಅಲ್‌ಬುಖಾರೀ 2786; ಮುಸ್ಲಿಮ್ 21; ಅತ್ತಿರ್ಮಿದೀ 2606; ಅನ್ನಸಾಈ 3971; ಅಬೂ ದಾವೂದ್ 2640; ಇಬ್ನ್ ಮಾಜ 3928; ಅಹ್ಮದ್ 1/11

ರಕ್ಷಿಸದು. ಬದಲಾಗಿ ಅವರನ್ನು ಕೊಲ್ಲಲಾಗುವುದು. ಪ್ರವಾದಿ(ﷺ)ರವರು ಮತ್ತು ಅವರ ಖಲೀಫಗಳು ಮಾಡಿದಂತೆ ಅವರ ಸಂಪತ್ತನ್ನು ಮುಸ್ಲಿಮರಿಗೆ ಗನೀಮತ್ತನ್ನಾಗಿ ವಶಪಡಿಸಲಾಗುವುದು.

ಇವುಗಳಲ್ಲದೆ ಈ ವಚನವು ಆರಾಧನೆ, ವ್ಯವಹಾರ, ಶಿಷ್ಟಾಚಾರ, ಸ್ವಭಾವ ವೈಶಿಷ್ಟ್ಯ ಮೊದಲಾದ ವಿಷಯಗಳಲ್ಲೂ ವ್ಯಕ್ತಿ ಮತ್ತು ಸಮಾಜದ ಮೇಲೆ ಉತ್ತಮವಾದ ಪರಿಣಾಮವನ್ನು ಬೀರುವುದು.

**وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .**

*********